# ಯುಗರಶ್ಮಿ

★ ದೇವನೂ ಸೃಷ್ಟಿಯೂ

★ ನೈತಿಕ-ಧಾರ್ಮಿಕ ಶಿಕ್ಷಣ ಇಸ್ಲಾಮಿನಲ್ಲಿ

★ ವಿಶ್ವಶಾಂತಿಗೆ ಖುರ್‌ಆನಿನ ನಿರ್ದೇಶನಗಳು

★ 'ಸನ್ಮಾರ್ಗ'ದ ಅಪಲಾಪ

ತ್ರೈಮಾಸಿಕ

ಅಕ್ಟೋಬರ್ 1991

ಬೆಲೆ: ರೂ. 2-00

ಖಂಡಿತವಾಗಿಯೂ ನಿಮಗೆ – ಅಲ್ಲಾಹನ ಮತ್ತು ಅಂತ್ಯದಿನದ ಭಯ ವಿರಿಸಿಕೊಂಡು ಅಲ್ಲಾಹನನ್ನು ಬಹಳವಾಗಿ ಧ್ಯಾನಿಸುವವರಿಗೆ – ಅಲ್ಲಾಹನ ಪ್ರವಾದಿಯಲ್ಲಿ ಅತ್ಯುತ್ತಮವಾದ ಮಾದರಿಯಿದೆ.

—ಪವಿತ್ರ ಖುರ್‌ಆನ್ (33:22)

# ಯುಗರಶ್ಮಿ ತ್ರೈಮಾಸಿಕ

10–23–1008 ಅನ್ಸಾರಿ ರಸ್ತೆ, ಬಂದರ್, ಮಂಗಳೂರು–575 001.

ಬಿಡಿಪ್ರತಿ : ರೂ. 2 - 00

ವಾರ್ಷಿಕ ಚಂದಾ : ರೂ. 8 - 00

ಅಂಚೆ ಮೂಲಕ : ರೂ. 10 - 00

ವಿಷಯ ಸೂಚಿಕೆ: ಪುಟ


- ನಾನು ಮುಹಮ್ಮದ್ ಪೈಗಂಬರರ ಅನುಯಾಯಿ ... 1
- ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು ... 2
- ದೇವನೂ ಸೃಷ್ಟಿಯೂ ... 8
- ನೈತಿಕ – ಧಾರ್ಮಿಕ ಶಿಕ್ಷಣ ಇಸ್ಲಾಮಿನಲ್ಲಿ .... 7
- ವಿಶ್ವಶಾಂತಿಗೆ ಖುರ್‌ಆನಿನ ನಿರ್ದೇಶನಗಳು ... 14
- ಇಸ್ಲಾಮಿಕ ಪಾಠಾವಳಿ ... 17
- 'ಸನ್ಮಾರ್ಗ'ದ ಅಪಲಾಪ ... 19
- ಕಮ್ಯೂನಿಸ್ಟ್ ವ್ಯವಸ್ಥೆ ದಶಕಗಳೊಳಗೆ ಕೊನೆಗೊಳ್ಳುವುದು ... 26
- ಅಮೇರಿಕದ ಸೊಕ್ಕು ಮುರಿಯುವುದು ... 27
- ಅಹ್ಮದಿಯಾ ವಾರ್ತೆಗಳು ... 28
- ನಿಧನ ವಾರ್ತೆಗಳು ... 31
- ಸಂಪಾದಕರಿಗೆ ಪತ್ರ ... 33
- ಓದುಗರ ಓಲೆ ... 34


ಕನ್ನಡ, ಇಂಗ್ಲಿಷ್, ಮಲಯಾಳಂ, ಅರಬಿ, ಉರ್ದು ಮತ್ತು ಫಾರ್ಸಿ ಭಾಷೆಗಳಲ್ಲಿ

ಅಂದವಾದ ಮುದ್ರಣಕ್ಕಾಗಿ

## ಜೂಬಿಲಿ ಪ್ರಿಂಟಿಂಗ್ ಪ್ರೆಸ್

## JUBILEE PRINTING PRESS

ജൂബിലി പ്രിൻററിംഗ് പ്രസ്സ്

جوبلی پرنٹنگ پریس

*Quality Printers in:*

**KANNADA, ENGLISH, MALAYALAM, ARABIC, URDU *and* PERSIAN**

**Ansari Road, MANGALORE - 575 001.**

**PHONE: 32039**

بِسْمِ اللّٰهِ الرَّحْمٰنِ الرَّحِيْمِ

نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ

Muhammad Yusuf B.COM
MANJESHWAR


# ಯುಗರಶ್ಮಿ

ಸಂಪಾದಕ : ಮುಹಮ್ಮದ್ ಯೂಸುಫ್

| ಸಂಪುಟ : 16 | ಅಕ್ಟೋಬರ್ 1991 / ಇಖಾ 1370 | ಸಂಚಿಕೆ : 1–2 |
|---|---|---|


## ನಾನು ಮುಹಮ್ಮದ್ ಪೈಗಂಬರರ ಅನುಯಾಯಿ

"ನನ್ನ ನೇತಾರರೂ ಯಜಮಾನರೂ ಪ್ರವಾದಿಶ್ರೇಷ್ಠರೂ ಮನುಷ್ಯಕುಲೋತ್ತಮರೂ ಆದ ಹಝ್ರತ್ ಪೈಗಂಬರ್ ಮುಹಮ್ಮದ್ ಮುಸ್ತಫಾ(ಸ) ಅವರ ಮಾರ್ಗಗಳನ್ನು ನಾನು ಅನುಸರಿಸದಿರುತ್ತಿದ್ದರೆ ಈ ಅನುಗ್ರಹಗಳು ನನಗೆ ಲಭಿಸಲು ಸಾಧ್ಯವಿರಲಿಲ್ಲ. ನಾನು ಗಳಿಸಿದುದೆಲ್ಲವೂ ಅವರ ಅನುಸರಣೆಯಿಂದಾಗಿದೆ. ಆ ಪ್ರವಾದಿಶ್ರೇಷ್ಠರನ್ನು ಅನುಸರಿಸದೆ ದೇವಸಾಮಿಪ್ಯವನ್ನು ಸಿದ್ಧಿಸಲಿಕ್ಕೂ ದಿವ್ಯಜ್ಞಾನದ ಅಂಶವನ್ನು ಗಳಿಸಲಿಕ್ಕೂ ಯಾರಿಗೂ ಸಾಧ್ಯವಿಲ್ಲವೆಂದು ದಿಟವೂ ಸಂಪೂರ್ಣವೂ ಆದ ಜ್ಞಾನದ ಮೂಲಕ ನಾನು ಅರಿತುಕೊಂಡಿದ್ದೇನೆ. ಮುಹಮ್ಮದ್ ಪೈಗಂಬರ್(ಸ) ರವರನ್ನು ಪ್ರಾಮಾಣಿಕವಾಗಿಯೂ ಪರಿಪೂರ್ಣವಾಗಿಯೂ ಅನುಸರಿಸಿದ ಬಳಿಕ ಬೇರೆ ಯಾವುದಕ್ಕೂ ಮುಂಚೆ ಮನಸ್ಸಿನಲ್ಲಿ ಮೂಡುವ ವಿಚಾರವೇನೆಂದು ಸಹ ನಾನಿಲ್ಲಿ ವಿವರಿಸುತ್ತೇನೆ. ನೆನಪಿಟ್ಟುಕೊಳ್ಳಿರಿ, ಅದು ಅನ್ಯೂನ ಹೃದಯವಾಗಿದೆ. ಎಂದರೆ, ಹೃದಯದಿಂದ ಭೌತಿಕಾಸಕ್ತಿ ನಿಷ್ಕ್ರಮಿಸಿ ಹೃದಯವು ಶಾಶ್ವತವೂ ಅನಶ್ವರವೂ ಆದ ಅನುಭೂತಿಯನ್ನು ಅರಸುವ ಸ್ಥಿತಿಯನ್ನು ಹೊಂದುತ್ತದೆ. ತದನಂತರ ಆ ಸ್ವಸ್ಥ ಹೃದಯ ಮೂಲಕ ನಿರ್ಮಲವೂ ಪರಿಪೂರ್ಣವೂ ಆದ ದೇವಪ್ರೇಮ ಪ್ರಾಪ್ತಿಯಾಗುತ್ತದೆ. ಈ ಎಲ್ಲ ಅನುಗ್ರಹಗಳೂ ಹಝ್ರತ್ ಪೈಗಂಬರ್(ಸ) ರವರ ಅನುಸರಣೆಯ ಮೂಲಕ ವಾರೀಸು ಹಕ್ಕಿನಂತೆ ಲಭಿಸುತ್ತದೆ." (ರೂಹಾನೀ ಖಝಾಇನ್–ಸಂಪುಟ 22, ಹಖೀಖತುಲ್ ವಹ್ಯ್ ಪುಟ 64, 65)

— ಹಝ್ರತ್ ಮಿರ್ಝಾ ಗುಲಾಂ ಅಹ್ಮದ್
ಅಹ್ಮದಿಯಾ ಜಮಾಅತಿನ ಸಂಸ್ಥಾಪಕರು.

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

★ ತಾನು ಬಯಸುವುದನ್ನು ಬೇರೆಯವರಿಗೂ ಬಯಸದವನು ಸತ್ಯ ವಿಶ್ವಾಸಿಯಾಗಲಾರ.

★ ನೀವು ಅಲ್ಲಾಹನಿಗೆ ಭಯಭಕ್ತಿಯನ್ನು ತೋರಿಸಿರಿ. ಹಾಗೆ ಮಾಡಿದರೆ ನೀವು ಅಲ್ಲಾಹನ ಆರಾಧಕರ ಪೈಕಿ ಅತ್ಯುತ್ತಮರಾಗುವಿರಿ.

★ ನೀವು ನಿಮಗೆ ಲಭಿಸಿದುದರಲ್ಲಿ ತೃಪ್ತಿಪಡಿರಿ; ಆಗ ನೀವು ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸುವವರಲ್ಲಿ ಅತ್ಯುತ್ತಮರಾಗುವಿರಿ.

★ ನೀವು ನಿಮಗೆ ಇಷ್ಟಪಡುವುದನ್ನು ಬೇರೆಯವರಿಗೂ ಇಷ್ಟಪಡಿರಿ; ಆಗ ನೀವು ಸತ್ಯವಿಶ್ವಾಸಿಗಳಾಗುವಿರಿ.

★ ನೀವು ನಿಮ್ಮ ನೆರೆಹೊರೆಯವರೊಂದಿಗೆ ಅತ್ಯುತ್ತಮವಾಗಿ ವರ್ತಿಸಿರಿ; ಆಗ ನೀವು ನಿಜವಾದ ಮುಸ್ಲಿಮರಾಗುವಿರಿ.

★ ನೀವು ಅತಿಯಾಗಿ ನಗಬೇಡಿರಿ: ಏಕೆಂದರೆ ಅತ್ಯಧಿಕ ನಗುವುದರಿಂದ ಹೃದಯ ಮೃತಪ್ರಾಯವಾಗುವುದು.

★ ನಿಮ್ಮ ಬಂಧುಬಾಂಧವರೊಂದಿಗೆ ನಿಮಗಿರುವ ಕರ್ತವ್ಯವನ್ನು ಗಮನದಲ್ಲಿಟ್ಟುಕೊಳ್ಳಿರಿ.

★ ನೀವು ಮೂರು ಜನರು ಒಟ್ಟಿಗೆ ಇರುವಾಗ ನಿಮ್ಮ ಪೈಕಿ ಒಬ್ಬನನ್ನು ಬೇರೆಮಾಡಿ ಇಬ್ಬರು ಮಾತ್ರ ಮಾತನಾಡಬಾರದು. ಆದರೆ ನಿಮ್ಮ ಜೊತೆ ಇತರರು ಸೇರಿಕೊಂಡರೆ ಇಬ್ಬರು ಮಾತನಾಡಬಹುದು.

★ ಜನರಿಗೆ ಕೃತಜ್ಞನಾಗಿರದವನು ಅಲ್ಲಾಹನಿಗೂ ಕೃತಜ್ಞನಾಗಲಾರ.

★ ಅಲ್ಲಾಹನನ್ನೂ ಅಂತಿಮ ವಿಚಾರಣೆಯ ದಿನವನ್ನೂ ನಂಬುವವನು ತನ್ನ ನೆರೆಹೊರೆಯವರನ್ನು ತೊಂದರೆಗೆ ಗುರಿಪಡಿಸಬಾರದು; ತಮ್ಮ ಅತಿಥಿಗಳನ್ನು ಗೌರವದಿಂದ ಸತ್ಕರಿಸಬೇಕು; ಒಳ್ಳೆಯದನ್ನು ಮಾತ್ರ ಹೇಳಬೇಕು ಅಥವಾ ಸುಮ್ಮನಿರಬೇಕು.

# ದೇವನೂ ಸೃಷ್ಟಿಯೂ

★ ಎಂ. ಮುಹಮ್ಮದ್ ಯೂಸುಫ್ ಎಂ. ಎ., ಬಿ. ಎಲ್.

(ಮುಂದುವರಿದುದು)

## ನಿಸರ್ಗ ನಿಯಮಗಳಿಂದ ನಿಗಮನ

ಪವಿತ್ರ ಖುರ್‌ಆನ್ ಪ್ರಕೃತಿ ನಿಯಮಗಳನ್ನು ಎತ್ತಿ ತೋರಿಸುತ್ತಾ ಮನುಷ್ಯ ಬುದ್ಧಿಗೆ ಸಂತೃಪ್ತಿ ನೀಡುವಂತಹ ಶಕ್ತಿಯುತವಾದ ವಾದಗಳನ್ನು ಮಂಡಿಸುತ್ತದೆ. ಆ ಪವಿತ್ರ ಖುರ್‌ಆನ್ ಹೇಳುವುದನ್ನು ನೋಡಿರಿ:

"ನಿಸರ್ಗಕ್ಕೆ ಅನುಗುಣವಾದ ತರದಲ್ಲಿರುವ ಪ್ರತಿಯೊಂದು ವಸ್ತುವಿಗೆ ಸೃಷ್ಟಿಕೊಟ್ಟು, ಅನಂತರ ಅದನ್ನು ಅದರ ಪರಿಪೂರ್ಣ ಬೆಳವಣಿಗೆಗೆ ಮಾರ್ಗದರ್ಶನ ಮಾಡಿದವನು ನಮ್ಮ ಪ್ರಭುವೇ ಆಗಿದ್ದಾನೆ. "(20:51)

ಮನುಷ್ಯನಿಂದ ಹಿಡಿದು ಕೀಳ್ಮಟ್ಟದಲ್ಲಿರುವ ಸಕಲ ಜೀವಜಾಲಗಳ ಸೃಷ್ಟಿಯ ಕುರಿತು ಸೂಕ್ಷ್ಮವಾಗಿ ಪರಿಶೀಲಿಸುವಾಗ ಅವುಗಳ ಸೃಷ್ಟಿಯ ರೀತಿಯಲ್ಲೂ ವಿಧಾನದಲ್ಲೂ ಅದ್ಭುತಕರವಾದ ವೈಭವ ನಮಗೆ ಗೋಚರಿಸುತ್ತದೆ. ಅವುಗಳ ಬೆಳವಣಿಗೆಗೆ ತಕ್ಕುದಾದ ರೀತಿಯ ನೈಸರ್ಗಿಕ ಏರ್ಪಾಡುಗಳ ಅನುಕೂಲ ಪರಿಸ್ಥಿತಿಗಳನ್ನೂ ದೇವರು ನೀಡಿದುದಾಗಿ ನಮಗೆ ಮನಗಾಣಲು ಸಾಧ್ಯ.

ದೇವಾಸ್ತಿತ್ವವನ್ನು ರುಜುಪಡಿಸಲು ಪವಿತ್ರ ಖುರ್‌ಆನ್ ಮಂಡಿಸುವ ಇನ್ನೊಂದು ವಾದ 'ದೇವರು ಸಕಲ ಕಾರಣಗಳಿಗೂ ಕಾರಣನು' ಎಂಬ ತತ್ವವಾಗಿದೆ. ಆ ಪವಿತ್ರ ಗ್ರಂಥ ಹೀಗೆ ಹೇಳುತ್ತದೆ:

"ಎಲ್ಲ ಕಾರ್ಯಗಳಿಗಿರುವ ಕಾರಣಗಳೂ ಪ್ರತಿ ಕಾರಣಗಳೂ ನಿನ್ನ ಪ್ರಭುವಿನಲ್ಲಿ ಕೊನೆಗೊಳ್ಳುತ್ತವೆ." (53:43)

ಪ್ರಕೃತಿಯ ಅಪಾರತೆಯಲ್ಲಿ ಗೋಚರಿಸುವ ಕಾರ್ಯಕಾರಣಗಳಲ್ಲಿ ಅಧಿಷ್ಠಿತವಾದ ಕಾರಣತ್ವದಲ್ಲೇ ಈ ವಾದವು ನೆಲೆಗೊಳ್ಳುತ್ತದೆ. ಭೌತಿಕವಾದ ಹಲವು ವಿಜ್ಞಾನ ಶಾಸ್ತ್ರಗಳ ಬೆಳವಣಿಗೆ ಈ ತತ್ವದಲ್ಲಿ ಆಧಾರಿತವಾಗಿದೆ. ಅಂದರೆ ಕಾರ್ಯಕಾರಣ ಸಿದ್ಧಾಂತವನ್ನು ಆಧಾರವಾಗಿಟ್ಟುಕೊಂಡು ಪ್ರಕೃತಿ ಶಾಸ್ತ್ರದ ಅನುಸ್ಯೂತವಾದ ಬೆಳವಣಿಗೆ ಉಂಟಾಗಿದೆ. ಈ ತತ್ವವು ಹಲವು ಸತ್ಯಗಳೆಡೆಗೆ ಮನುಷ್ಯನ ಚಿಂತನೆಯನ್ನು ಕೊಂಡೊಯ್ಯುತ್ತದೆ. ಕಾರ್ಯಕಾರಣ ಸಂಬಂಧದ ಸಮೂಲವಾದ ಬೆಳವಣಿಗೆಯು ನಮ್ಮನ್ನು ಯೋಚನಾಮಗ್ನರನ್ನಾಗಿ ಮಾಡುತ್ತದೆ. 'ಅಂತ್ಯ'ವನ್ನು ಪಡೆಯುವ ಭೌತಿಕ ಶಾಸ್ತ್ರದ ಮಂಡಲದಲ್ಲಿ ನಿಂತುಕೊಂಡು ಅನಂತವೂ ಅತಿ ಸೂಕ್ಷ್ಮವೂ ಆದ ತತ್ವಗಳ ಕುರಿತು ಚಿಂತನೆ ಮಾಡುವುದು ಸರಿಯೆನಿಸದು. ಪ್ರಪಂಚದ ಸೃಷ್ಟಿಯ ಬಗ್ಗೆ ಚಿಂತನೆ ಮಾಡುವಾಗ ಅದರ ಅಂತಿಮ ಕಾರಣ ಎಲ್ಲಿಯಾದರೂ ಕೊನೆಗೊಳ್ಳಲೇ ಬೇಕಾಗಿದೆ. ಆದ್ದರಿಂದ, ಆ ಅಂತಿಮ ಕಾರಣ ಯಾವುದೋ, ಅದೇ ಆಗಿದೆ ಈ ಬ್ರಹ್ಮಾಂಡದ ಕರ್ತೃ. ಈ ಆದಿಕಾರಣದೆಡೆಗೆ ಮೇಲೆ ಕಾಣಿಸಿದ ಪವಿತ್ರ ಖುರ್‌ಆನಿನ ವಚನ ನಮ್ಮ ಗಮನವನ್ನು ಸೆಳೆಯುತ್ತದೆ.

ದೇವಾಸ್ತಿತ್ವವನ್ನು ಸಾಬೀತುಪಡಿಸಲು ಪವಿತ್ರ ಖುರ್‌ಆನ್ ಇನ್ನೊಂದು ವಾದವನ್ನು ಈ ರೀತಿ ಮಂಡಿಸುತ್ತದೆ:

"ಸೂರ್ಯನಿಗೆ ಚಂದ್ರನ ಜೊತೆಗೆ ಸೇರಲು ಸಾಧ್ಯವಿಲ್ಲ. ರಾತ್ರಿಗೆ ಹಗಲನ್ನು ಹಿಡಿದಿಡಲು ಸಾಧ್ಯವಿಲ್ಲ. ಕೋಟ್ಯಾನುಕೋಟಿ ನಕ್ಷತ್ರಗಳೂ ಇತರ ಗೋಳಗಳೂ ತಂತಮ್ಮ ಪಥದಲ್ಲಿ ಚಲಿಸುತ್ತವೆ." (36 : 41)

ಈ ವಿಶ್ವದಲ್ಲಿ ಕಾಣುವ ಅಸಂಖ್ಯಾತ ಗೋಳಗಳಿಗೂ ಸೌರವ್ಯೂಹಗಳಿಗೂ ಬುದ್ಧಿಶಾಲಿಯಾದ ಒಬ್ಬ

ಕರ್ತೃ ಮತ್ತು ನಿಯಂತ್ರಕನು ಇಲ್ಲದಿರುತ್ತಿದ್ದರೆ ಅವು ತಪ್ಪುದಾರಿಗಳಲ್ಲಿ ಸಂಚರಿಸಿ ಎಂದೋ ಚೂರುಚೂರಾಗುತ್ತಿದ್ದವು.

ಬೇರಾವುದೇ ಗೋಳದ ಭ್ರಮಣವನ್ನು ಭಂಗಪಡಿಸದೆ ನಿರ್ದಿಷ್ಟ ಪಥದಲ್ಲೇ ತಿರುಗುತ್ತಿರುವ ಭೌತಿಕ ಕಾಯಗಳಾದ ಅನೇಕ ಲಕ್ಷ ಗೋಳಗಳ ಭ್ರಮಣದಲ್ಲೂ ಅವುಗಳ ಶಿಸ್ತುಬದ್ಧ ಪ್ರವರ್ತನೆಯಲ್ಲೂ ಬುದ್ಧಿಶಾಲಿಯಾದ ಒಂದು ಅಪಾರ ಶಕ್ತಿಯ ನಿಯಂತ್ರಣ ನಮಗೆ ಕಂಡುಬರುತ್ತದೆ. ಈ ಅದ್ಭುತ ಪ್ರವರ್ತನೆ ಒಂದು ಜೀವಂತ ಸತ್ತೆಯ ಪ್ರಾಭವವನ್ನು ಸ್ಪಷ್ಟ ಪಡಿಸುತ್ತದೆ. ಲೋಕಾರಂಭ ಮೊದಲ್ಗೊಂಡು ತಿರುಗುತ್ತಿರುವ ಈ ಗೋಳಗಳ ಭ್ರಮಣವು ಯಾವ ವಿಧದಲ್ಲೂ ನಿರ್ದಿಷ್ಟ ಪಥದಿಂದ ಇಷ್ಟರ ವರೆಗೆ ತಪ್ಪದೆ ಸರಿಯಾದ ಕ್ರಮದಲ್ಲೇ ಅವು ಚಲಿಸುತ್ತವೆ. ಈ ಪ್ರಪಂಚಾದ್ಭುತಗಳ ಕುರಿತೆಲ್ಲ ಚಿಂತನೆ ಮಾಡುವಾಗ ಒಂದು ಜೀವಂತ ಶಕ್ತಿ ಇದರ ಹಿಂದೆ ವರ್ತಿಸುವುದಾಗಿ ವಿವೇಕಶಾಲಿಗಳಿಗೆ ಮನಗಾಣಲು ಪ್ರಯಾಸವಿಲ್ಲ. ಪವಿತ್ರ ಖುರ್‌ಆನ್ ಇನ್ನೊಂದೆಡೆಯಲ್ಲಿ ಹೀಗೆ ಹೇಳುತ್ತದೆ:

"ಅದ್ಭುತಕರವಾದ ಆಕಾಶಗೋಳಗಳನ್ನೂ ವಿಚಿತ್ರವಾದ ಭೂಮಿಯನ್ನೂ ಸೃಷ್ಟಿಸಿದ ಸರ್ವಶಕ್ತನಾದ ದೇವನ ಬಗ್ಗೆ (ನಿಮಗೆ) ಸಂಶಯವೇ? (14:11)

ದೇವಾಸ್ತಿತ್ವವನ್ನು ರುಜುವಾತು ಮಾಡಲು ಪವಿತ್ರ ಖುರ್‌ಆನ್ ಮುಂದಿಡುವ ಮತ್ತೊಂದು ವಾದ ಹೀಗೆ:

"ಭೂಮಿಯಲ್ಲಿರುವ ಸಕಲವೂ ನಶ್ವರ; ಪ್ರತಾಪಶಾಲಿಯೂ ಮಹೋನ್ನತನೂ ಆದ ನಿನ್ನ ಪ್ರಭುವಿನ ಮುಖ ಮಾತ್ರ ಎಂದೆಂದಿಗೂ ಬಾಕಿಯುಳಿಯುವುದು. (55:27, 28)

ಈ ಭೂಮಿ ಇಲ್ಲವಾದರೂ ಆಕಾಶಗೋಳಗಳೆಲ್ಲ ನಿರ್ನಾಮವಾದರೂ ಭೌತಿಕವಾದ ಈ ಬ್ರಹ್ಮಾಂಡವೇ ಅಸ್ತಿತ್ವವನ್ನು ಕಳಕೊಂಡರೂ ಏನೋ ಒಂದು ಅವಶೇಷವಾಗುತ್ತದೆ ಎಂದು ನಮ್ಮ ಬುದ್ಧಿ ನಮ್ಮನ್ನು ಎಚ್ಚರಿಸುತ್ತದೆ. ವ್ಯತ್ಯಾಸಗಳಿಗಾಗಲಿ, ನಾಶಕ್ಕಾಗಲಿ ಈಡಾಗದಂತಹ ಎಂದಿಗೂ ನಾಶಗೊಳ್ಳದಂತಹ ಒಂದು ಶಕ್ತಿ ಬಾಕಿಯುಳಿಯುತ್ತದೆ ಎಂಬುದಾಗಿದೆ ಸತ್ಯ. ಹಾಗಿರುವ ಒಂದು ಸತ್ತೆ ಶೂನ್ಯವಾದ ಒಂದು ಸ್ಥಿತಿಯಲ್ಲಿ ಎಲ್ಲ ವಸ್ತುಗಳನ್ನೂ ಸೃಷ್ಟಿಸಿದ ಮಹೋನ್ನತನಾದ ದೇವನಾಗಿದ್ದಾನೆ.

ಕೆಳಗಿನ ವಚನಗಳ ಮೂಲಕ ಪವಿತ್ರ ಖುರ್‌ಆನ್ ದೇವಾಸ್ತಿತ್ವವನ್ನು ಪ್ರಕಟಪಡಿಸಲಿಕ್ಕಾಗಿ ತುಂಬಾ ಬೆಳಕು ಚೆಲ್ಲುತ್ತಾ ಇನ್ನೊಂದು ವಾದವನ್ನು ಮಂಡಿಸುತ್ತದೆ. ಉಪಮಾ ರೂಪದಲ್ಲಿ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

"ಮಹೋನ್ನತನಾದ ದೇವನು ಆತ್ಮಗಳೊಡನೆ 'ನಾನು ನಿಮ್ಮ ಕರ್ತೃ ಮತ್ತು ರಕ್ಷಕನಲ್ಲವೇ?' ಎಂದು ಕೇಳಿದಾಗ ಅವು 'ಖಂಡಿತವಾಗಿಯೂ ಹೌದು; ನಾವು ಸಾಕ್ಷ್ಯವಹಿಸುತ್ತೇವೆ' ಎಂದು ಹೇಳಿದವು." (7:173)

ಈ ವಚನದಲ್ಲಿ ದೇವರು ಒಂದು ಪ್ರಶ್ನೋತ್ತರ ರೀತಿಯಲ್ಲಿ ಮನುಷ್ಯಾತ್ಮದ ನೈಸರ್ಗಿಕವಾದ ಸ್ವಭಾವ ಗುಣವನ್ನು ಸೂಚಿಸಿದ್ದಾನೆ. ಪ್ರಾಕೃತಿಕವಾಗಿ ಆತ್ಮದಲ್ಲಿ ನಿಕ್ಷಿಪ್ತವಾಗಿರುವ ವಿಶೇಷಗುಣವನ್ನು ದೇವನು ಇಲ್ಲಿ ಆಲಂಕಾರಿಕ ಭಾಷೆಯಲ್ಲಿ ಎತ್ತಿ ತೋರಿಸಿದ್ದಾನೆ. ಇದರಿಂದ ತಿಳಿದುಬರುವುದೇನೆಂದರೆ, ದೇವರನ್ನು ನಿರಾಕರಿಸದಿರುವಂತಹ ವಿಶಿಷ್ಟಗುಣವು ನೈಸರ್ಗಿಕವಾಗಿಯೇ ಮನುಷ್ಯಾತ್ಮದಲ್ಲಿ ಲೀನವಾಗಿರುತ್ತದೆ. ಒಬ್ಬ ನಾಸ್ತಿಕನು ದೇವರನ್ನು ಅಲ್ಲಗಳೆಯುವುದು ಅವನ ಆತ್ಮ ಆ ವಿಶ್ವಾಸದ ವಿರುದ್ಧವಾಗಿ ಅವನನ್ನು ಪ್ರೇರೇಪಿಸುವುದರಿಂದಲ್ಲ; ದೇವರಿದ್ದಾನೆಂಬುದಕ್ಕೆ ಅವನಿಗೆ ಸ್ಪಷ್ಟವಾದ ಪುರಾವೆಗಳು ಲಭಿಸದ ಕಾರಣದಿಂದಾಗಿದೆ. ಅವನು ನಿರೀಶ್ವರವಾದಿ ಆಗಿದ್ದರೂ ಸಹ ಪ್ರತಿಯೊಂದು ಸಂಗತಿಗೂ ಅದರ ಕಾರಣವಿರಬಹುದು; ಕಾರಣವಿರಬೇಕು ಎಂಬ ವಿಚಾರವನ್ನು ಅವನು ಒಪ್ಪುತ್ತಾನೆ. ಏಕೆಂದರೆ 'ಕಾರ್ಯಕಾರಣ' ಸಿದ್ಧಾಂತದ ಅಲ್ಲಗಳೆಯುವಿಕೆ ಎಲ್ಲ ಭೌತಿಕ ಶಾಸ್ತ್ರಗಳನ್ನೂ ತತ್ವ ಸಂಹಿತೆಗಳನ್ನೂ ನಿರಾಕರಿಸಲಿಕ್ಕೆ ಎಡೆಗೊಡುತ್ತದೆ. ಸೂರ್ಯ-ಚಂದ್ರ ಗ್ರಹಣಗಳ ಸಂಭವಿಕೆಯ ಕುರಿತು ಸಮಯ ನಿರ್ಣಯ, ಬಿರುಗಾಳಿ, ಭೂಕಂಪ ಇತ್ಯಾದಿಗಳು ಉಂಟಾಗುವುದರ ಸಮಯ ನಿರ್ಣಯ ಮಾತ್ರವಲ್ಲ ಇತರ ಹಲವು ಭೌತಿಕ

ಸಂಭವಗಳ ಕಾರಣಗಳು ಮೊದಲಾದುವನ್ನು ಸಹ ನಿರಾಕರಿಸಬೇಕಾದೀತು. ಪ್ರತಿಯೊಂದು ಸಂಭವಕ್ಕೆ ಅದರ ಕಾರಣವನ್ನು ಕಂಡುಹಿಡಿಯದಿದ್ದರೆ ಆ ತತ್ವ ಶಾಸ್ತ್ರವು ಸರಿಯೆನಿಸದು. ಪ್ರತಿಯೊಂದು ಸಂಭವವು ಬೇರೆ ಬೇರೆ ಕಾರಣದೊಂದಿಗೆ ಬಂಧಿಸಲ್ಪಟ್ಟಿದೆಯೆಂಬ ತತ್ವವನ್ನು ಅಂಗೀಕರಿಸಲೇ ಬೇಕು. ಒಬ್ಬ ತತ್ವಜ್ಞಾನಿ ದೇವಾಸ್ತಿತ್ವವನ್ನು ಅಲ್ಲಗಳೆಯುವನಾದರೂ ಸಹ ಸಕಲಕ್ಕೂ ಆದಿಕಾರಣವಾದ ಒಂದು 'ಕಾರಣ'ವನ್ನು ಅಂಗೀಕರಿಸಲು ನಿರ್ಬಂಧಿತನಾಗುತ್ತಾನೆ. ಏಕೆಂದರೆ, 'ಕಾರ್ಯಕಾರಣ' ಸಿದ್ಧಾಂತವನ್ನು ಅಂಗೀಕರಿಸದಿರಲಿಕ್ಕೆ ಆ ತತ್ವಜ್ಞಾನಿಗೆ ನಿರ್ವಾಹವಿಲ್ಲ. ಇದು ದೇವರ ಅಸ್ತಿತ್ವದ ಬಗೆಗಿರುವ ನಂಬಿಕೆಯನ್ನು ಒಪ್ಪುವುದಕ್ಕೆ ತುಲ್ಯವಾಗಿದೆ. ಮನುಷ್ಯನು ತನ್ನ ಕೀಳ್ಮಟ್ಟದಲ್ಲಿರುವ ಆಶೆಗಳನ್ನೂ ಭೌತಿಕ ಇಚ್ಛೆಗಳನ್ನೂ ತಳ್ಳಿಬಿಟ್ಟು ಉನ್ನತ ಉದ್ದೇಶಕ್ಕಾಗಿ ಸರ್ವಶಕ್ತವಾದ ಒಂದು ಶಕ್ತಿಗೆ ವಿಧೇಯವಾಗಿ ಜೀವಿಸಲು ಪ್ರಯತ್ನಿಸುವುದಾದರೆ, ಆ ಸ್ಥಿತಿಯಲ್ಲಿ ಅವನು ದೇವರ 'ಇರುವಿಕೆ'ಯನ್ನು ಸಮ್ಮತಿಸಲು ನಿರ್ಬಂಧಿತನಾಗಿ, ಅವನ ಅನುಭೂತಿ ಆ 'ಸತ್ಯ'ದ ಕುರಿತು ಯಥಾರ್ಥ ಜ್ಞಾನದೆಡೆಗೂ ದೃಢ ನಿಶ್ಚಯದೆಡೆಗೂ ದಾರಿಮಾಡಿ ಕೊಡುತ್ತದೆ. ಕೀಳ್ಮಟ್ಟದ ಚಿಂತನೆಯೂ ಆಶೆಯೂ ಒಬ್ಬನಲ್ಲಿ ಹೆಚ್ಚು ಶಕ್ತಿಯುತವಾಗಿ ವರ್ತಿಸುವಾಗ ಅವನಲ್ಲಿ ನಾಸ್ತಿಕತೆ ಉಂಟಾಗುತ್ತದೆಂದು ಮೇಲಿನ ಖುರ್‌ಆನ್ ವಚನ ಸೂಚಿಸುತ್ತದೆ. ಪರಿಶುದ್ಧವಾದ ಮನುಷ್ಯಗುಣವು 'ದೇವರಿದ್ದಾನೆ' ಎಂಬ ಪರಮ ಸತ್ಯವನ್ನು ಒಪ್ಪುವಂತೆ ಇದೆಯೆಂದು ಪವಿತ್ರ ಖುರ್‌ಆನ್ ತಿಳಿಸಿಕೊಡುತ್ತದೆ.

## ಆಧ್ಯಾತ್ಮಿಕ ಪುರಾವೆಗಳು

ದೇವರ ಅಸ್ತಿತ್ವವನ್ನು ನಂಬಬೇಕಾದ ಆವಶ್ಯಕತೆಯ ಬಗ್ಗೆ ಪವಿತ್ರ ಖುರ್‌ಆನ್ ಒತ್ತಿ ಹೇಳುತ್ತದೆ. ಆಧ್ಯಾತ್ಮಿಕ ಅಂಧಕಾರ ಲೋಕದಲ್ಲಿ ವ್ಯಾಪಿಸುವ ಕಾಲಗಳಲ್ಲೆಲ್ಲ ದೇವರು ತನ್ನ ವಚನವನ್ನು ದಿವ್ಯ ಪ್ರಕಟನೆಗಳ ಮೂಲಕ ಲೋಕಕ್ಕೆ ನೀಡುವುದು ಅವನ ಸನಾತನವಾದೊಂದು ನಿಯಮವೆಂದು ಪವಿತ್ರ ಖುರ್‌ಆನ್ ಹೇಳುತ್ತದೆ. ಅಷ್ಟೇ ಅಲ್ಲ, ದೇವರ ಮಹತ್ವವನ್ನೂ ಪ್ರತಾಪವನ್ನೂ ಆ ಮೂಲಕ ಜಗತ್ತಿನಲ್ಲಿ ಬಹಿರಂಗ ಪಡಿಸಿ ದೇವರ ಇರುವಿಕೆಯನ್ನು ಶಕ್ತಿಯುತವೂ ಅಖಂಡನೀಯವೂ ಆದ ದೃಷ್ಟಾಂತಗಳಿಂದ ಸ್ಪಷ್ಟಪಡಿಸುತ್ತದೆ. ಅವು ಮಾನವ ಹೃದಯಗಳಲ್ಲಿ ದೇವವಿಶ್ವಾಸವನ್ನು ದೃಢಪಡಿಸಲಿಕ್ಕಾಗಿ ಪ್ರವಾದಿಗಳೂ ಸದ್ಧರ್ಮಿಗಳಾದ ಅನುಯಾಯಿಗಳೂ ಮುಂದಿಡುವ ಉಪಾಧಿಗಳಾಗಿವೆ. ಸರ್ವಶಕ್ತನಾದ ದೇವರ ವಿಶೇಷಗುಣಗಳು ಅವನ ವರಪ್ರಸಾದ ಗಳಿಸಿದ ವರಿಷ್ಠ ದಾಸರಾದ ಪ್ರವಾದಿಗಳು ಮತ್ತು ಅವರ ಅನುಯಾಯಿಗಳ ಮೂಲಕ ಜಾಹೀರುಪಡಿಸುವ ಕ್ರಮವನ್ನು ದೇವರು ಕೊನೆಗೊಳಿಸುತ್ತಿದ್ದರೆ, ದೇವಾಸ್ತಿತ್ವದ ಕುರಿತಿರುವ ನಂಬಿಕೆ ಮನುಷ್ಯ ಹೃದಯಗಳಿಂದ ಮಾಯವಾಗಿ, ಮನುಷ್ಯರಾಶಿಗೆ ದೇವರ ಬಗ್ಗೆಯಿರುವ ನಂಬಿಕೆಯಲ್ಲಿ ಹಲವಿಧ ಸಂಶಯಗಳೂ ತಪ್ಪು ಕಲ್ಪನೆಗಳೂ ಉಂಟಾಗುತ್ತಿದ್ದವು. ಮಾನವಕೋಟಿ ಈ ಭೂಮಿಯಲ್ಲಿರುವ ಕಾಲದ ವರೆಗೆ ದೇವದರ್ಶನಗಳೂ ದೈವೀಪ್ರಕಾಶನಗಳೂ ಮನುಷ್ಯರಲ್ಲಿ ಕೆಲವರಿಗಾದರೂ ದೊರಕಬೇಕಾದುದು ಆವಶ್ಯ. ದೇವರ ಸತ್ಯೆಯಲ್ಲಿರುವ ವಿಶ್ವಾಸವನ್ನು ದೃಢಪಡಿಸಲಿಕ್ಕೆ ಅತಿ ಉತ್ತಮ ಮಾರ್ಗ ದೇವ ಪ್ರಕಟನೆಗಳ ಮೂಲಕವೆಂದು ನಮಗೆ ಮನವರಿಯಬಹುದು.

ಈ ಪ್ರಪಂಚದ ಆರಂಭದಿಂದಲೇ ದೇವರು ತನ್ನ ಆರಿಸಲ್ಪಟ್ಟ ವರಿಷ್ಠದಾಸರಾದ ಪ್ರವಾದಿಗಳ ಮುಖಾಂತರ ಮಾನವರಾಶಿಯೊಡನೆ ತನ್ನ ದಿವ್ಯವಾಣಿ ಮೂಲಕ ಸಂಬಂಧವನ್ನು ಸ್ಥಾಪಿಸಿದ್ದಾನೆ. ಆದಂ ಮೊದಲ್ಗೊಂಡು ಯೇಸುಕ್ರಿಸ್ತರ ವರೆಗೆ, ತದನಂತರ ಮುಹಮ್ಮದ್ ಪೈಗಂಬರರ ವರೆಗೆ ಈ ಪ್ರಕ್ರಿಯೆ ಮುಂದುವರಿಯುತ್ತಾ ಬಂತು. ಯಾವ ರೀತಿ ದೇವರು ತನ್ನ 'ಸೃಷ್ಟಿಸುವ', 'ಆಲಿಸು'ವ ವಿಶೇಷ ಗುಣಗಳನ್ನು ತೋರ್ಪಡಿಸಿದ್ದಾನೋ ಅದೇ ರೀತಿ ತನ್ನ 'ಮಾತನಾಡು'ವ ವಿಶೇಷ ಗುಣವನ್ನು ಸಹ ತೋರಿಸಿದ್ದಾನೆ. ಈ ಕ್ರಮವನ್ನು ದೇವರು ಸನಾತನವಾಗಿ ಲೋಕಾಂತ್ಯದ ವರೆಗೆ ಮುಂದುವರಿಸುತ್ತಾ, ತನ್ನ ಆಯ್ದ ವರಿಷ್ಠ ದಾಸರೊಡನೆ ಸಂಭಾಷಣೆ ನಡೆಸಿ ಅವನ ಇರುವಿಕೆಯನ್ನು ಪ್ರಕಟಪಡಿಸುವನು.

ಒಬ್ಬ ಜೀವಂತ ದೇವನೊಡನಿರುವ ನಂಬಿಕೆಯನ್ನು ಪವಿತ್ರ ಖುರ್‌ಆನ್ ಸಾರುತ್ತದೆ. ದಿವ್ಯದರ್ಶನ ಮತ್ತು ದೈವೀಪ್ರಕಾಶನ ದೇವಾಸ್ತಿತ್ವವನ್ನು ಸಾಬೀತುಪಡಿಸುವ ಸ್ಪಷ್ಟವಾದ ಪುರಾವೆಗಳೆಂದು

ಪವಿತ್ರ ಖುರ್‌ಆನ್ ಲೋಕದ ಮುಂದೆ ಸಾದರಪಡಿಸುತ್ತದೆ. ಚುನಾಯಿಸಲ್ಪಟ್ಟ ತನ್ನ ಭಕ್ತದಾಸರೊಡನೆ ಪೂರ್ವಕಾಲಗಳಲ್ಲಿ ದೇವರು ಹೇಗೆ ಮಾತನಾಡುತ್ತಿದ್ದನೋ ಹಾಗೆಯೇ ವರ್ತಮಾನ ಕಾಲದಲ್ಲೂ ಭವಿಷ್ಯತ್ಕಾಲದಲ್ಲೂ ಆ ಪ್ರಕ್ರಿಯೆ ಮುಂದುವರಿಯುತ್ತಲೇ ಹೋಗುವುದೆಂದು ಪವಿತ್ರ ಖುರ್‌ಆನ್ ಸ್ಪಷ್ಟಪಡಿಸಿರುತ್ತದೆ. ದೇವವಾಣಿ ಲಭಿಸುವ ಈ ಸಜ್ಜನರು ಪ್ರವಾದಿಗಳೇ ಆಗಿರಬೇಕೆಂಬ ನಿರ್ಬಂಧವೇನೂ ಇಲ್ಲ. ಆಧ್ಯಾತ್ಮಿಕ ನೆಲೆಯಲ್ಲಿ ಉನ್ನತಮಟ್ಟದಲ್ಲಿರುವ ಸಜ್ಜನರಾದ ಶ್ರೇಷ್ಠಾತ್ಮರುಗಳಿಗೂ ದೇವವಾಣಿ ಸಿದ್ಧಿಸಲು ಸಾಧ್ಯ. ಈ ಸಿದ್ಧಾಂತದ ಸತ್ಯತೆಗೆ ಬೆಳಕು ಚೆಲ್ಲುವಂತಹ ಹಾಗೂ ಸಾಕ್ಷ್ಯವಾಗುವಂತಹ ಹಲವು ಘಟನೆಗಳು ಮುಹಮ್ಮದ್ ಪೈಗಂಬರರ ಅನುಯಾಯಿಗಳಲ್ಲಿ ಸಂಭವಿಸಿವೆ.

ಆಧ್ಯಾತ್ಮಿಕವಾಗಿ ಉನ್ನತಿ ಪಡೆದ ಇಸ್ಲಾಮಿನ ಅನೇಕ ಸಚ್ಚರಿತ ಅನುಯಾಯಿಗಳಿಗೆ ದಿವ್ಯ ಪ್ರಕಟನೆಗಳೂ ದಿವ್ಯ ದರ್ಶನಗಳೂ ಉಂಟಾಗಿವೆ ಎಂಬ ವಿಷಯ ಇಸ್ಲಾಮಿನ ಸತ್ಯತೆಗೂ ದೇವಾಸ್ತಿತ್ವವನ್ನು ರುಜುಪಡಿಸಲಿಕ್ಕೂ ತಕ್ಕುದಾದ ಪುರಾವೆಗಳಾಗಿ ವಿರಾಜಿಸುತ್ತವೆ. ದಿವ್ಯದರ್ಶನ ಮತ್ತು ದೈವೀಪ್ರಕಾಶನಗಳು ಲಭಿಸದ ಓರ್ವ ದಿವ್ಯಾತ್ಮನಾದರೂ ಇಲ್ಲದಿದ್ದ ಒಂದು ಶತಮಾನವಾದರೂ ಇಸ್ಲಾಮಿನಲ್ಲಿ ಗತಿಸಲಿಲ್ಲ. ಉದಾಹರಣೆಗೆ, ಉಮರ್ ಇಬ್ನು ಅಬ್ದುಲ್ ಅಝೀಝ್, ಬಾಯಸಿದ್ ಬುಸ್ತಾಮಿ, ಜುನೈದ್ ಬಗ್ದಾದಿ, ಮುಹ್ಯುದ್ದೀನ್ ಇಬ್ನು ಅರಬಿ, ಶೈಖ್ ಅಬ್ದುಲ್ ಖಾದಿರ್ ಜೀಲಾನಿ ಮುಂತಾದವರು ದಿವ್ಯಾನುಭೂತಿ, ದೈವೀಪ್ರಕಾಶನ ಮತ್ತು ದಿವ್ಯದರ್ಶನಗಳು ಲಭಿಸಿದ ಪುಣ್ಯಾತ್ಮರುಗಳಲ್ಲಿ ಅಗ್ರಗಣ್ಯರಾಗಿದ್ದಾರೆ. ಇವರಲ್ಲದೆ, ನಮ್ಮ ಭಾರತ ದೇಶದಲ್ಲಿ ಹಝ್ರತ್ ಮುಈನುದ್ದೀನ್ ಚಿಶ್ತಿ, ಶೈಖ್ ಅಹ್ಮದ್ ಮುಜದ್ದಿದ್ ಅಲ್‌ಫಸಾನಿ, ನಿಝಾಮುದ್ದೀನ್ ಔಲಿಯಾ, ಫರೀದ್ ಶಕ್ಕರ್‌ಗಂಜ್, ದಾತಾಗಂಜ್‌ಬಕ್ಷ್, ಶಾಹ್ ವಲಿಯುಲ್ಲಾಹ್ ದೆಹ್ಲವಿ, ಸಯ್ಯದ್ ಅಹ್ಮದ್ ಬರೇಲ್ವಿ ಮೊದಲಾದ ಮಹಾತ್ಮರುಗಳು ಈ ರೀತಿ ದೇವವಚನ ಮತ್ತು ಆಧ್ಯಾತ್ಮಿಕ ದರ್ಶನಗಳಿಂದ ಅನುಗ್ರಹಿಸಲ್ಪಟ್ಟ ಪುಣ್ಯವಂತರಾಗಿದ್ದರು. ಇವರಲ್ಲದೆ, ಅಹ್ಮದಿಯಾ ಸಂಘಟನೆಯ ಸಂಸ್ಥಾಪಕರಾದ, ವಾಗ್ದತ್ತ ಮಹ್‌ದಿ-ಮಸೀಹರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್(ಅ) ಬಹಳ ಉನ್ನತ ಶ್ರೇಣಿಯಲ್ಲಿ ದೈವೀಪ್ರಕಾಶನಗಳೂ ದಿವ್ಯ ದರ್ಶನಗಳೂ ಲಭಿಸಿದ ಇಸ್ಲಾಮಿನ ಉತ್ಕೃಷ್ಟ ನೇತಾರ ಹಾಗೂ ಮುಹಮ್ಮದ್ ಪೈಗಂಬರರ ಆಧ್ಯಾತ್ಮಿಕ ಸಂತಾನ ಆಗಿದ್ದಾರೆ. ಈ ಶತಮಾನದ, ಇಸ್ಲಾಮಿನ ಅಜೇಯ ದುರ್ಗವಾಗಿದ್ದರು ಆ ಮಹಾತ್ಮರು. ಪೂರ್ವಕಾಲದ ಎಲ್ಲ ಪ್ರವಾದಿಗಳ ಆಧ್ಯಾತ್ಮಿಕ ಶಕ್ತಿಯಲ್ಲೂ ಗುಣದಲ್ಲೂ ಅವರು ಈ ಕಾಲದಲ್ಲಿ ಆಗಮಿಸಿ ಇಸ್ಲಾಮಿಕ ತತ್ವಗಳ ಸಜೀವತ್ವವನ್ನು ಸಾಬೀತು ಪಡಿಸಿದರು. ದಿವ್ಯ ಪ್ರಕಟನೆಯ ಸತ್ಯವನ್ನು ಅವರು ತನ್ನ ಅನುಭವಗಳ ಮೂಲಕ ಲೋಕಕ್ಕೆ ತೋರಿಸಿಕೊಟ್ಟರು. ಆ ಮೂಲಕ ದೇವರ ಅಸ್ತಿತ್ವವನ್ನು ರುಜುಪಡಿಸುತ್ತಾ ತನ್ನ ಅಂತ್ಯಶ್ವಾಸದ ವರೆಗೆ ಇಸ್ಲಾಮಿನ ಸೇವೆಗೈದರು.

ಮೇಲೆ ಹೇಳಲಾದ ಪವಿತ್ರ ಖುರ್‌ಆನಿನ ಎರಡು ರೀತಿಯ ತತ್ವವಾದಗಳು ಈ ಪ್ರಪಂಚಕ್ಕೆ ಒಬ್ಬ ಸೃಷ್ಟಿಕರ್ತನೂ ನಿಯಾಮಕನೂ ಇದ್ದಾನೆಂಬ ಸಂಗತಿಯನ್ನು ಸಂಶಯ ರಹಿತವಾದ ರೀತಿಯಲ್ಲಿ ರುಜುಪಡಿಸಿವೆ ಮತ್ತು ಸಮರ್ಥಿಸಿವೆ.

(ಸಶೇಷ)


"ಯುಗರಶ್ಮಿ" ಗೆ ಚಂದಾದಾರರಾಗಿರಿ

ವಾರ್ಷಿಕ ಚಂದಾದರ: ರೂ. 10-00 (ಅಂಚೆ ಮೂಲಕ)

# ನೈತಿಕ-ಧಾರ್ಮಿಕ ಶಿಕ್ಷಣ ಇಸ್ಲಾಮಿನಲ್ಲಿ

★ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್, ಎಂ. ಎ.

ಇಸ್ಲಾಮಿನ ಆಧ್ಯಾತ್ಮಿಕ ದೌತ್ಯವನ್ನು ಎರಡು ಮೂಲ ಘಟಕಗಳಾಗಿ ವಿಂಗಡಿಸಬಹುದೆಂದು ಪವಿತ್ರ ಖುರ್‌ಆನ್ ಮನವರಿಕೆ ಮಾಡಿಕೊಡುತ್ತದೆ. ಒಂದನೆಯದು 'ತಬ್ಲೀಗ್' (ಧರ್ಮ ಪ್ರಚಾರ). ಅಂದರೆ, ಅವಿಶ್ವಾಸಿಗಳಿಗೆ ಸತ್ಯಸಂದೇಶವನ್ನು ತಲಪಿಸಿ ಅವರನ್ನು ವಿಶ್ವಾಸದ ಪಥದೆಡೆಗೆ ಕೊಂಡೊಯ್ಯುವುದು. ಎರಡನೆಯದು 'ತರ್ಬಿಯತ್' (ತರಬೇತಿ ಮತ್ತು ಶಿಕ್ಷಣ). ಅಂದರೆ, ವಿಶ್ವಾಸಿಗಳನ್ನು ಭಕ್ತಿ ಮತ್ತು ಸದ್ವರ್ತನೆಗಳ ಉನ್ನತ ಪೀಠದಲ್ಲಿ ಸ್ಥಿರಗೊಳಿಸುವುದು. ಕೆಳಗೆ ಕಾಣುವ ಖುರ್‌ಆನ್ ವಚನ ಈ ಬಗ್ಗೆ ಬೊಟ್ಟುಮಾಡುತ್ತದೆ:

"ಜನರನ್ನು ಒಳಿತಿನ ಕಡೆಗೆ ಕರೆಯುವ, ಹಾಗೂ ಒಳಿತನ್ನು ಪ್ರಬೋಧಿಸಿ ಕೆಡುಕನ್ನು ವಿರೋಧಿಸುವ ಒಂದು ಸಮುದಾಯ ನಿಮ್ಮಲ್ಲಿ ಉಂಟಾಗಲಿ. ಅಭಿವೃದ್ಧಿ ಪಡೆಯುವವರು ಅವರೇ ಆಗಿದ್ದಾರೆ"(3: 105)

## ಶಿಕ್ಷಣದ ಪ್ರಾಧಾನ್ಯ

ಇಸ್ಲಾಮಿನ ಈ ಎರಡು ಘಟಕಗಳು ನಿಸ್ಸಂದೇಹವಾಗಿ ಬಹಳ ಪ್ರಾಧಾನ್ಯವೇ ಆಗಿವೆ. ಇವೆರಡರ ಬಗ್ಗೆ ನಿರ್ಲಕ್ಷ್ಯ ಇಸ್ಲಾಮಿಕ ವ್ಯವಸ್ಥೆಗೆ ಕುಠಾರಪ್ರಾಯವಾಗುವುದು. ಏಕೆಂದರೆ ಅವು ಅದರ ಸಂಖ್ಯೆಯನ್ನೂ ಗುಣವನ್ನೂ ಪ್ರತಿನಿಧೀಕರಿಸುತ್ತದೆ.

ಧರ್ಮ ಪ್ರಚಾರದಿಂದ ಮುಸ್ಲಿಮರ ಸಂಖ್ಯೆ ಹೆಚ್ಚುತ್ತದೆ. ಧರ್ಮ ಶಿಕ್ಷಣ ಇಸ್ಲಾಮಿನ ಯಥಾರ್ಥವಾದ ಸೊಬಗನ್ನು ಮನಗಾಣಲಿಕ್ಕೂ ಆಚರಿಸಲಿಕ್ಕೂ ಸಹಾಯಕವಾಗುತ್ತದೆ. ಆದರೆ ಕೆಲವು ವಿಚಾರಗಳಲ್ಲಿ ಶಿಕ್ಷಣವು ಧರ್ಮ ಪ್ರಚಾರಕ್ಕಿಂತ ಪ್ರಾಮುಖ್ಯವನ್ನು ಪಡೆಯುತ್ತದೆ.

ತಬ್ಲೀಗ್ ಇಸ್ಲಾಮಿನ ಬಾಹ್ಯ ರೂಪದ ಕುರಿತಾಗಿದೆ. ತರ್ಬಿಯತ್ ಇಸ್ಲಾಮಿನ ತಿರುಳನ್ನು ಸ್ಪರ್ಶಿಸುತ್ತದೆ. ಇವೆರಡರ ವ್ಯತ್ಯಾಸ ಸ್ಪಷ್ಟ. ಲೋಕದಲ್ಲಿರುವವರೆಲ್ಲರನ್ನೂ ಇಸ್ಲಾಂ ಧರ್ಮಕ್ಕೆ ಪರಿವರ್ತನೆಗೊಳಿಸುವುದರಲ್ಲಿ ನಾವು ಜಯ ಪಡೆದರೂ ಅವರು ನಾಮ ಮಾತ್ರದ ಮುಸ್ಲಿಮರಾಗಿರುತ್ತಾರೆ. ಅವರು ಇಸ್ಲಾಮಿಕ ಆಜ್ಞೆಗಳನ್ನು ಪಾಲಿಸದೆ ತಮ್ಮದೇ ಅನಿಸ್ಲಾಮಿಕ ಆಚಾರಗಳನ್ನು ಅನುಷ್ಠಿಸುತ್ತಿದ್ದರೆ ಅದು ನಮ್ಮ ವಿಜಯವೆಂದು ಹೇಳುವುದು ಹೇಗೆ?

ನಿಜವೇನೆಂದರೆ, ಆ ರೀತಿಯ ಇಸ್ಲಾಂ, ನಾಮಧಾರಿ ಮುಸ್ಲಿಮರಿಗೆ ಕೂಡ ಪ್ರಯೋಜನವಾಗಲಾರದು. ಬದಲಿಗೆ, ಅದು ಅವರ ವಿರುದ್ಧ ಒಂದು ಸಾಕ್ಷ್ಯವಾಗುವುದು. ಆದರೆ, ಸಂಖ್ಯೆಯಲ್ಲಿ ಕಡಿಮೆಯಿರುವ ಮುಸ್ಲಿಮರು ನಂಬಿಕೆಯಲ್ಲೂ ಪ್ರವರ್ತನೆಯಲ್ಲೂ ಉನ್ನತ ಮಟ್ಟವನ್ನು ಪಡೆದರೆ ಅವರು ದೈವಿಕ ಸಂರಕ್ಷಣೆಯ ಅಡಿಯಲ್ಲಿ ಅಜೇಯ ಶಕ್ತಿಯಾಗಿ ಮಾರ್ಪಡುವರು. ಅವರ ಆತ್ಮಶಕ್ತಿ, ಅವರ ಉನ್ನತ ನೈತಿಕಮಟ್ಟ, ಒಗ್ಗಟ್ಟು ಮತ್ತು ತ್ಯಾಗ ಮನೋಭಾವದ ಮುಂದೆ ಲೋಕವು ಕಂಪಿಸುವುದು.

ಅಂತಹ ಜನತೆಯನ್ನು ತೋರಿಸುತ್ತಾ ಖುರ್‌ಆನ್ ಹೀಗೆ ಹೇಳುತ್ತದೆ;

"ಅಲ್ಲಾಹನ ಅನುಮತಿಯೊಂದಿಗೆ ಎಷ್ಟೆಷ್ಟು ಸಣ್ಣ ಪಂಗಡಗಳು ದೊಡ್ಡ ಪಂಗಡಗಳನ್ನು ಪರಾಜಯ ಗೊಳಿಸಿವೆ." (2: 250)

ಈ ವೀಕ್ಷಣದಲ್ಲಿ ನೋಡುವಾಗ ತರ್ಬಿಯತ್ ತಬ್ಲೀಗ್‌ಗಿಂತ ಪ್ರಾಧಾನ್ಯವುಳ್ಳದ್ದಾಗಿದೆಯೆಂದು ಕಾಣಬಹುದು. ಆದ್ದರಿಂದ ನೈತಿಕ ಹಾಗೂ ಧಾರ್ಮಿಕ ಶಿಕ್ಷಣದೆಡೆಗೆ ಅಹ್ಮದೀಯರು ತಮ್ಮ ಸಂಪೂರ್ಣ ಗಮನವನ್ನು ಹರಿಸಬೇಕಾಗಿದೆ, ತನ್ಮೂಲಕ ಸಂಖ್ಯೆಯೊಂದಿಗೆ ಗುಣ ಸಹ ವೃದ್ಧಿಗೊಳ್ಳುವುದು. ಇಲ್ಲವಾದರೆ ಸಂಖ್ಯೆಯ ವೃದ್ಧಿ ಆಂತರಿಕ ಚೈತನ್ಯವನ್ನು ದುರ್ಬಲಗೊಳಿಸುವುದು. ಕೆಳಗಿನ ಖುರ್‌ಆನ್ ವಚನಗಳು ಈ ಅಪಾಯದ ಸೂಚನೆ ನೀಡುತ್ತವೆ:

"ಅಲ್ಲಾಹನ ಸಹಾಯ ಮತ್ತು ವಿಜಯ ಬಂದೊದಗುವಾಗ, ಅಲ್ಲಾಹನ ಧರ್ಮದೆಡೆಗೆ ಗುಂಪುಗುಂಪಾಗಿ ಜನರು ಪ್ರವೇಶಿಸುವುದನ್ನು ನೀನು ಕಾಣುವಾಗ ನಿನ್ನ ಪ್ರಭುವಿನ ಸ್ತುತಿಕೀರ್ತನೆ ಮಾಡುತ್ತಾ ಅವನೊಡನೆ ಕ್ಷಮೆಯೆನ್ನು ಕೋರು. ನಿಶ್ಚಯವಾಗಿಯೂ ಅವನು ಪದೇ ಪದೇ ಕರುಣೆ ತೋರಿಸುವವನಾಗಿದ್ದಾನೆ." (110: 1–4)

ಜನಸಂಖ್ಯೆಯ ವೃದ್ಧಿ ಅತ್ಯಾವಶ್ಯಕ ಶಿಕ್ಷಣವನ್ನು ದೋಷಕರವಾಗಿ ಬಾಧಿಸುವ ಅಪಾಯವುಂಟಾಗಬಹುದೆಂದು ಈ ವಚನಗಳು ಸೂಚಿಸುತ್ತವೆ. ಅಂತಹ ಸಂದರ್ಭಗಳಲ್ಲಿ ಮುಸ್ಲಿಮರು ಅಲ್ಲಾಹನ ಸ್ತುತಿ ಕೀರ್ತನೆಗಳನ್ನು ಹೆಚ್ಚು ಹೆಚ್ಚಾಗಿ ಮಾಡುತ್ತಾ ಅವನೊಡನೆ ಕ್ಷಮೆಯನ್ನು ಯಾಚಿಸುತ್ತಾ ಭಕ್ತಿ ವಿನಯಗಳನ್ನು ತೋರ್ಪಡಿಸಬೇಕಾಗಿದೆ. ಏಕೆಂದರೆ ಜನಸಂಖ್ಯೆಯ ವೃದ್ಧಿ ಹೆಚ್ಚುತ್ತಾ ಹೋಗುವ ಸಂದರ್ಭಗಳಲ್ಲಿ ಆಲಸ್ಯ ಮತ್ತು ಅಶಿಸ್ತು ತಲೆಯೆತ್ತುತ್ತವೆ.

ಶಿಕ್ಷಣ ಕ್ರಮವನ್ನು ಎರಡು ಬಗೆಯಾಗಿ ವಿಂಗಡಿಸಬಹುದು. ಒಂದನೆಯದು ಹೊಸ ತಲೆಮಾರನ್ನು ಬೆಳಸಿಕೊಂಡು ಬರುವುದು. ಎರಡನೆಯದು ಪ್ರಾಪ್ತ ವಯಸ್ಕರ ನೈತಿಕ ಮತ್ತು ಧಾರ್ಮಿಕ ಶಿಕ್ಷಣ. ಪ್ರತಿಯೊಂದು ಜನತೆಯಲ್ಲಿ ಈ ಎರಡು ವರ್ಗದ ಜನರಿರುತ್ತಾರೆ. ಕೆಲವರು ಮುಸ್ಲಿಂ ಕುಟುಂಬಗಳಲ್ಲಿ ಜನಿಸಿ ಮಾತಾಪಿತರ ಧರ್ಮವನ್ನೇ ಅನುಸರಿಸಿದವರು. ಇನ್ನು ಕೆಲವರು ಧರ್ಮ ಪ್ರಚಾರ ಮೂಲಕ ಇಸ್ಲಾಂ ಧರ್ಮಕ್ಕೆ ಪರಿವರ್ತಿತರಾದವರು.

ಈ ಎರಡು ವರ್ಗದ ಜನರ ನೈತಿಕ–ಧಾರ್ಮಿಕ ಶಿಕ್ಷಣಕ್ಕಾಗಿ ಬಹಳ ವಿವೇಕಯುತವಾದ ತತ್ವಗಳನ್ನು ಇಸ್ಲಾಂ ಮುಂದಿರಿಸುತ್ತದೆ. ಈ ತತ್ವಗಳನ್ನು ಅನುಸರಿಸುವ ಒಬ್ಬ ವ್ಯಕ್ತಿ ಅಥವಾ ಒಂದು ಸಮುದಾಯ ಅದರ ಮಹತ್ವಾದ ಪ್ರಯೋಜನಗಳನ್ನು ಪಡೆಯುವುದರಲ್ಲಿ ಪರಾಜಯಗೊಳ್ಳುವುದು ಅಸಾಧ್ಯ.

ಮಕ್ಕಳನ್ನು ಸರಿಯಾದ ರೀತಿಯಲ್ಲಿ ಬೆಳೆಸಿಕೊಂಡು ಬರಲಿಕ್ಕಾಗಿ ಇಸ್ಲಾಂ ಅದರ ಅನುಯಾಯಿಗಳಿಗೆ ಸಚ್ಚರಿತ ಸ್ತ್ರೀಯರನ್ನು ಮದುವೆಯಾಗಲು ಆದೇಶಿಸುತ್ತದೆ. ಆ ಮೂಲಕ ಅವರ ಭಕ್ತಿಪೂರ್ವಕವಾದ ಪ್ರಭಾವದಿಂದ ಅವರ ಮಕ್ಕಳು ಸಹ ಸತ್‌ಸ್ವಭಾವ ಮತ್ತು ಭಕ್ತಿಯನ್ನು ಪಡೆಯುತ್ತಾರೆ.

ಮುಹಮ್ಮದ್ ಪೈಗಂಬರ್(ಸ) ಹೀಗೆ ಹೇಳಿದ್ದಾರೆ: "ನಾಲ್ಕು ವಿಧಗಳಲ್ಲಿ ಪರಿಗಣಿಸಲ್ಪಟ್ಟು ಓರ್ವ ಸ್ತ್ರೀ ವಿವಾಹಿತಳಾಗುತ್ತಾಳೆ:

1. ಅವಳ ಸಂಪತ್ತು. 2. ಅವಳ ಮನೆತನ. 3. ಅವಳ ಸೌಂದರ್ಯ. 4. ಅವಳ ಧರ್ಮಭಕ್ತಿ ಮತ್ತು ಸತ್‌ಸ್ವಭಾವ.

ಏಲೈ ಮುಸ್ಲಿಮರೇ, ಧರ್ಮಭಕ್ತಿ ಮತ್ತು ಸುಸ್ವಭಾವದಿಂದ ಕೂಡಿದ ಜೀವನ ಸಂಗಾತಿಯನ್ನು ವಿವಾಹ ಮಾಡಿಕೊಂಡು ನೀವು ಜಯಗಳಿಸಿರಿ. ಇಲ್ಲವಾದರೆ ಎಂದಿಗೂ ನೀವು ಅಭಿವೃದ್ಧಿಗೊಳ್ಳಲಾರಿರಿ."

(ಬುಖಾರಿ – ಕಿತಾಬುನ್ನಿಕಾಹ್)

ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದ ಮಟ್ಟಿಗೆ ಇದು ಸ್ವರ್ಣಾಕ್ಷರಗಳಲ್ಲಿ ಬರೆಯಲ್ಪಡಬೇಕಾದ ಇಸ್ಲಾಮಿನ ಪ್ರಥಮ ನಿರ್ದೇಶನವಾಗಿದೆ. ಮಕ್ಕಳ ಶಿಕ್ಷಣದಲ್ಲಿ ತಾಯಿಯ ಪ್ರಭಾವ ಅಪಾರ. ಓರ್ವ ಸದ್ಗುಣ ಸಂಪನ್ನೆಯಾದ ತಾಯಿಗೆ ಒಂದು 'ಬದಲಿ'ಯನ್ನು ಇಂದಿನ ವರೆಗೆ ಕಂಡುಹಿಡಿಯಲಾಗಿಲ್ಲ. ಹದೀಸಿನಲ್ಲಿ ಹೇಳಲಾ

ದಂತೆ ಮಗುವಿನ ಮೇಲೆ ತಾಯಿಯ ಪ್ರಭಾವ ಅದರ ಜನನಕ್ಕೆ ಮುಂಚೆಯೇ ಆರಂಭಿಸುತ್ತದೆ. ಇಸ್ಲಾಂ ಶಿಶು ಪರಿಪಾಲನೆಯ ವ್ಯವಸ್ಥೆಯನ್ನು ಶಿಶುವಿನ ಅಸ್ತಿತ್ವ ಉಂಟಾಗುವುದಕ್ಕೆ ಎಷ್ಟೋ ಮೊದಲೇ ಅದರ ಮೂಲ ದಿಂದಲೇ ಆರಂಭಿಸುತ್ತದೆಂಬುದು ಇಸ್ಲಾಮಿಕ ಪಾಠಗಳ ಒಂದು ವಿಸ್ಮಯವೇ ಆಗಿದೆ.

ಒಬ್ಬನು ತನಗೆ ಉತ್ತಮ ಸಂತಾನ ಉಂಟಾಗ ಬೇಕೆಂದು ಬಯಸುವನಾದರೆ ಆತನು ಪ್ರಥಮವಾಗಿ ಸದ್ಗುಣ ಸಂಪನ್ನೆಯಾದ ಪತ್ನಿಯನ್ನು ಆರಿಸಬೇಕೆಂದು ಇಸ್ಲಾಂ ಕಲಿಸುತ್ತದೆ. ಎಂದರೆ, ಒಬ್ಬ ಪುರುಷನು ಧರ್ಮನಿಷ್ಠೆಯುಳ್ಳವಳನ್ನು ಪತ್ನಿಯಾಗಿ ಆಯ್ಕೆ ಮಾಡ ಬೇಕೆಂದು ತಾತ್ಪರ್ಯ. ಫಲವತ್ತಾದ ಮಣ್ಣು ಯಾವ ರೀತಿ ಬೆಳೆಯನ್ನು ಸಹಜವಾಗಿಯೇ ಉತ್ತಮಗೊಳಿಸು ವುದೋ ಅದೇ ರೀತಿ ಸದ್ಗುಣೆಯಾದ ತಾಯಿ ತಾನು ಜನ್ಮ ನೀಡುವ ಮಕ್ಕಳ ಸ್ವಭಾವವನ್ನು ಸಹಜವಾಗಿಯೇ ಉತ್ತಮಗೊಳಿಸುವಳು. ತಾನು ಜನ್ಮ ನೀಡಿದ ಮಕ್ಕ ಳನ್ನು ಪೋಷಿಸಿಕೊಂಡು ಬರುವುದರಲ್ಲಿ ಅವಳು ತುಂಬಾ ಪ್ರಭಾವವನ್ನು ಬೀರುತ್ತಾಳೆ.

ತಂದೆಗೆ ಮಕ್ಕಳ ಶಿಕ್ಷಣದ ವಿಚಾರದಲ್ಲಿ ಪಾತ್ರ ವಿದೆಯೆಂಬುದು ನಿಸ್ಸಂದೇಹ. ಆದರೆ ಆ ಬಗ್ಗೆ ತಾಯಿಯ ಮಹತ್ತರವಾದ ಪಾತ್ರಕ್ಕೆ ಎಣೆಯೇ ಇಲ್ಲ.

ಒಂದು ಮಗು ತಾಯಿಯ ಮೊಲೆಯುಣ್ಣುತ್ತದೆ. ಅವಳ ಮಡಿಲಲ್ಲಿ ಬೆಳೆಯುತ್ತದೆ. ರಾತ್ರಿ-ಹಗಲು ಅವಳೊಂದಿಗೆ ಇರುತ್ತದೆ. ಅವಳೊಂದಿಗೆ ಮಾತನಾ ಡುತ್ತದೆ. ತನಗೆ ಬೇಕಾದುದನ್ನು ಅವಳೊಡನೆ ಕೇಳು ತ್ತದೆ. ಎಲ್ಲ ವಿಚಾರಗಳಲ್ಲಿ ಅವಳ ಸಲಹೆಯನ್ನು ಕೇಳುತ್ತದೆ. ಅವಳ ಪ್ರೀತಿಯ ಮಾತುಗಳನ್ನು ಆಲಿಸು ತ್ತದೆ. ಕೆಲವೊಮ್ಮೆ ಅವಳು ಗದರಿಸಿದರೂ ಮಗು ಅವಳನ್ನು ಬಿಗಿಹಿಡಿಯುತ್ತದೆ. ಅವಳ ಎಲ್ಲ ವರ್ತನೆ ಗಳನ್ನು ಗಮನಿಸುತ್ತದೆ. ಅವಳು ಹೇಳುವುದನ್ನೆಲ್ಲ ಅನು ಸರಿಸುತ್ತದೆ. ಸಂಕ್ಷಿಪ್ತವಾಗಿ, ಮಗುವು ತಾಯಿಯ ಒಂದು ಅಂಶವಾಗಿ ಮಾರ್ಪಡುತ್ತದೆ.

ಈ ನಿತಾಂತ ಸಂಬಂಧದ ಮುಂದೆ ತಂದೆಯ ಸಾಮಾನ್ಯ ಸಂಬಂಧ ಹೆಚ್ಚಿನಾಂಶ ಔಪಚಾರಿಕವಾಗಿರು ತ್ತದೆ. ಆದಕ್ಕೆ ಅಷ್ಟೊಂದು ಪ್ರಭಾವವಿರುವುದಿಲ್ಲ. ಆದ್ದರಿಂದಲೇ ಮುಹಮ್ಮದ್ ಪೈಗಂಬರ್ (ಸ.) "ತಾಯಿಯ ಪಾದದಡಿಯಲ್ಲಿ ಸ್ವರ್ಗವಿದೆ" ಎಂದು ನುಡಿದಿದ್ದರು.

ತಾಯಿ ಸುಶೀಲೆಯಾಗಿದ್ದರೆ ಅವಳ ನಿತ್ಯ ಸಂಪ ರ್ಕದಿಂದ ಅವಳ ಮಕ್ಕಳು ಸ್ವರ್ಗವನ್ನು ಪ್ರವೇಶಿಸಲು ಅರ್ಹರಾಗುವರೆಂದು ಈ ಪ್ರವಾದಿನುಡಿಯು ನಮಗೆ ಮನವರಿಕೆ ಮಾಡಿಕೊಡುತ್ತದೆ. ಅದೇ ಪ್ರಕಾರ ಮಕ್ಕಳು ತಾಯಿಯ ಸೇವೆ ಮಾಡುತ್ತಾ ಸ್ವರ್ಗದ ಪ್ರವೇಶಕ್ಕೆ ಅರ್ಹತೆಯನ್ನು ಪಡೆಯುತ್ತಾರೆ.

ಇದನ್ನು ಬರೆಯುವ ನಾನು ಸಾವಿರಾರು ಗೃಹಗ ಳನ್ನು ಸಂದರ್ಶಿಸಿ ಅಲ್ಲಿನ ಸ್ಥಿತಿಗತಿಯ ಬಗ್ಗೆ ಅಧ್ಯಯನ ಮಾಡಿದ್ದೇನೆ. ಇದರಿಂದ ತಿಳಿದುಬಂದ ಒಂದು ವಾಸ್ತ ವಾಂಶವೇನೆಂದರೆ, ಮನೆಯ ರಾಣಿ ಹಾಗೂ ಮಕ್ಕಳ ಮಾತೆಯಾದ ಸ್ತ್ರೀ ಸದ್ಗುಣೆಯೂ ನೈತಿಕ - ಧಾರ್ಮಿಕ ಶಿಕ್ಷಣ ನೀಡಲು ಸಮರ್ಥಳೂ ಆಗಿದ್ದರೆ ಶಿಕ್ಷಣ ಮಟ್ಟ ಕ್ಕನುಗುಣವಾಗಿ ಅಂತಹ ತಾಯಿಯಂದಿರ ಮಕ್ಕಳ ಪೈಕಿ ನೂರರಲ್ಲಿ ಎಂಭತ್ತರಷ್ಟಾದರೂ ಸದ್ಗುಣ ಸಂಪನ್ನ ರಾಗುತ್ತಾರೆ – ದೊಡ್ಡದಾದ ನಂತರ ಕೆಟ್ಟ ಸ್ವಭಾವದ ಮಕ್ಕಳ ಸಂಪರ್ಕದಿಂದ ಹಾಳಾಗುವವರ ಹೊರತು. ಆದರೆ ಸಾಮಾನ್ಯವಾಗಿ, ತಂದೆಯ ಶಿಕ್ಷಣ ದಲ್ಲಿ ಅಷ್ಟೇ ಪ್ರಭಾವ ಕಂಡುಬರುವುದಿಲ್ಲ. ಇದಕ್ಕೆ ಅಪವಾದವಿರಬಹುದು. ಇದು ನಿಸರ್ಗದ ಬದಲಾಗದ ಒಂದು ನಿಯಮವಾಗಿದೆ. ನಮ್ಮ ನಾಯಕರಾದ ಮುಹಮ್ಮದ್ ಪೈಗಂಬರ್ (ಸ) ಈ ಬಗ್ಗೆ ಹೀಗೆ ಹೇಳಿ ದ್ದಾರೆ: "ವಿಜಯವನ್ನು ಪಡೆಯಿರಿ, ಧರ್ಮಭಕ್ತಿ ಮತ್ತು ಸತ್ ಸ್ವಭಾವವುಳ್ಳ ಓರ್ವಳನ್ನು ಧರ್ಮಪತ್ನಿ ಯಾಗಿ ವರಿಸದೆ ನಿಮಗೆ ಅಭಿವೃದ್ಧಿಯುಂಟಾಗಲಿಕ್ಕಿಲ್ಲ."

ಮಕ್ಕಳನ್ನು ಸಾಕಿ ಸಲಹಿಕೊಂಡು ಬರುವುದರ ಒಂದನೆಯ ತತ್ವವನ್ನು ಈ ರೀತಿ ಸಂಕ್ಷೇಪಿಸಿ ಹೇಳ ಬಹುದು:

ಪುರುಷರು ಅವರ ಜೀವನ ಸಂಗಾತಿಗಳನ್ನು ಆಯ್ಕೆ ಮಾಡುವಾಗ ಅವರ ಸೌಂದರ್ಯ, ಕುಟುಂಬ ಮಹಿಮೆ, ಸಂಪತ್ತು ಇವುಗಳ ಹಿಂದೆ ಓಡದೆ ದೇವಭಕ್ತಿ ಮತ್ತು ಸೌಶೀಲ್ಯಕ್ಕೆ ಆದ್ಯತೆ ನೀಡಬೇಕು. ಒಬ್ಬನು ಆರಿಸುವ ಪತ್ನಿಯಲ್ಲಿ ದೇವಭಕ್ತಿಯೊಂದಿಗೆ ಮತ್ತಿತರ ಗುಣಾರ್ಹತೆಗಳು ಸಹ ಇದ್ದರೆ ಭಾಗ್ಯಕರ ಎಂಬುದರಲ್ಲಿ ಸಂಶಯವಿಲ್ಲ. ಆದರೆ ಪತ್ನಿಯ ದೇವಭಕ್ತಿ ಮತ್ತು ಆಕೆಯ ಉನ್ನತ ನೈತಿಕ-ಧಾರ್ಮಿಕ ಮಟ್ಟವೇ ಉತ್ತಮ ಸಂತಾನ ಗಳಿಕೆಗೆ ಮೂಲ ಕಾರಣ. ಸುಶೀಲೆಯಾದ ಪತ್ನಿಯಿಂದ ಆಕೆಯ ಪತಿಗೆ ಮಾನಸಿಕಾನಂದ ಮತ್ತು ಮನಸ್ಸಮಾಧಾನ ಲಭಿಸುತ್ತದೆ. ಅವಳು ಮನೆಯನ್ನು ಭೂಮಿಯ ಮೇಲಿನ ಸ್ವರ್ಗವನ್ನಾಗಿ ಮಾಡುತ್ತಾಳೆ. ಅಕಟಾ, ನಮ್ಮ ಸ್ನೇಹಿತರು ಈ ವಾಸ್ತವಾಂಶವನ್ನು ಮನಗಾಣುತ್ತಿದ್ದರೆ!

## ಸಂಸರ್ಗದ ವೇಳೆಯಲ್ಲಿ ಪ್ರಾರ್ಥನೆ

ಉತ್ತಮ ಸಂತಾನವುಂಟಾಗಲಿಕ್ಕೆ ಇಸ್ಲಾಂ ಕಲಿಸುವ ಎರಡನೆಯ ಪಾಠವೇನೆಂದರೆ. ಪತಿ ಮತ್ತು ಪತ್ನಿ ಸದಾ ಉತ್ತಮ ಪರಿಭಾವನೆಯನ್ನು ಹೊಂದಿರಬೇಕು. ಮಾತ್ರವಲ್ಲ, ಅವರು ಸಂಸರ್ಗ ನಡೆಸುವ ವೇಳೆಯಲ್ಲಿ ಸಹ ಹೀಗೆ ಪ್ರಾರ್ಥಿಸಬೇಕು:

اَللّٰهُمَّ جَنِّبْنَا الشَّيْطَانَ وَجَنِّبِ
الشَّيْطَانَ مَا رَزَقْتَنَا

"ಓ ದೇವಾ, ಸೈತಾನನ ಪೀಡೆಯಿಂದ ನಮ್ಮನ್ನು ನೀನು ರಕ್ಷಿಸು. ನೀನು ನಮಗೆ ನೀಡುವ ಸಂತಾನಗಳಿಂದಲೂ ಸೈತಾನನ ಪೀಡೆಯನ್ನು ದೂರಮಾಡು." (ಬುಖಾರಿ – ಕಿತಾಬುನ್ನಿಕಾಹ್)

ಸಂಸರ್ಗದ ಸಂದರ್ಭದಲ್ಲಿ ಹೀಗೆ ಭಕ್ತಿಪೂರ್ವಕವಾಗಿ ಪ್ರಾರ್ಥಿಸುವ ದಂಪತಿಗಳಿಗೆ ಉಂಟಾಗುವ ಸಂತಾನ ಸೈತಾನನ ಸ್ಪರ್ಶದಿಂದ ರಕ್ಷಿಸಲ್ಪಡುವುದು– ಬಾಹ್ಯ ಪ್ರಭಾವಕ್ಕೊಳಗಾಗಿ ಸೈತಾನನ ಅನುಯಾಯಿಗಳಾಗುವ ಮಕ್ಕಳ ಹೊರತು. ಪತಿ-ಪತ್ನಿ ಕೂಡುವಿಕೆ ತೀವ್ರವಾದ ಲೈಂಗಿಕ ಪ್ರೇರಣೆಯಿಂದ ಉಂಟಾಗುತ್ತದೆಯಷ್ಟೆ. ಅಂತಹ ಸಂದರ್ಭದಲ್ಲಿ ಕೂಡ ತಮ್ಮ ರಕ್ಷಕನನ್ನು ಸ್ಮರಿಸಿ ಪರಿಶುದ್ಧಿಗೆ ಬೇಕಾಗಿ ಯಾಚಿಸುವ ದಂಪತಿಗಳ ಮಕ್ಕಳು ಅವರ ಅಸಾಮಾನ್ಯವಾದ ಸುಸ್ವಭಾವದ ಅಂಶವನ್ನೂ ಅವರ ಭಕ್ತಿಯಿಂದ ಕೂಡಿದ ಪ್ರಾರ್ಥನೆಯ ಫಲಗಳನ್ನೂ ಪಡೆಯುವರು.

ಆದ್ದರಿಂದ ತಮ್ಮ ಮಕ್ಕಳು ಉತ್ತಮರಾಗಬೇಕೆಂದು ಇಚ್ಛಿಸುವವರು ಈ ಪ್ರಾರ್ಥನೆ ಮತ್ತು ಅದರ ಪ್ರಾಧಾನ್ಯವನ್ನು ತಿಳಿದುಕೊಳ್ಳಲಿ. ಇದು ನಮ್ಮ ನಾಯಕರಾದ ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ನಮಗೆ ತೋರಿಸಿಕೊಟ್ಟ ಉತ್ತಮ ಹಾಗೂ ಸುಲಭ ಮಾರ್ಗವಾಗಿದೆ. ಇದೊಂದು ಮೂಢನಂಬಿಕೆಯಲ್ಲ. ಸಂಭೋಗ ಸಮಯದಲ್ಲಿ ಸ್ತ್ರೀ-ಪುರುಷರ ಮಾನಸಿಕ ಉದ್ವೇಗಗಳು ಖಂಡಿತವಾಗಿಯೂ ಸಂತಾನಗಳ ಮೇಲೆ ಪರಿಣಾಮವನ್ನುಂಟುಮಾಡುತ್ತವೆಂದು ಮನಃಶಾಸ್ತ್ರದಿಂದ ಸಹ ಸಾಬೀತಾಗಿದೆ. ಆದರೆ ಇಂತಹ ವಿವೇಕಯುತವಾದ ಮಾರ್ಗದರ್ಶನದಿಂದ ಪ್ರಯೋಜನ ಪಡೆಯುವವರು ತುಂಬಾ ವಿರಳ.

## ಮಗು ಹುಟ್ಟಿದ ಬಳಿಕ

ಇಷ್ಟರ ವರೆಗೆ ನಾನು ವಿವರಿಸಿದ್ದು ಮಗುವಿನ ಜನನಕ್ಕೆ ಮುಂಚೆ ಅದರ ಮೇಲೆ ಪ್ರಭಾವ ಬೀರುವ ವಿಚಾರದಲ್ಲಿ ಇಸ್ಲಾಂ ಕಲಿಸುವ ಪಾಠಗಳ ಕುರಿತಾಗಿದೆ, ಮಗುವಿನ ಜನನದ ಬಳಿಕದ ಕಾಲಕ್ಕೆ ಸಂಬಂಧಿಸಿ ಇಸ್ಲಾಮಿನ ವಿವೇಚನಾಪೂರ್ಣವಾದ ಪಾಠಗಳೇನೆಂಬುದನ್ನು ನಾನಿನ್ನು ವಿವರಿಸುವೆನು.

ಈ ಬಗ್ಗೆ ಹಝ್ರತ್ ಪೈಗಂಬರ್ (ಸ) ಹೀಗೆ ನುಡಿದಿದ್ದಾರೆ: ಯಾರಿಗಾದರೂ ಒಂದು ಮಗು ಜನಿಸಿದರೆ ಅದಕ್ಕೆ ಸ್ನಾನಮಾಡಿಸಿದ ಕೂಡಲೇ ಅದರ ಬಲಕಿವಿಯಲ್ಲಿ ಅದಾನ್ (ಪ್ರಾರ್ಥನೆಗೆ ಕರೆ)ನ ಪದಗಳನ್ನು ಉಸುರಬೇಕು. ಅದರ ಅರ್ಥ ಹೀಗೆ:

> "ಅಲ್ಲಾಹನು ಅತಿ ದೊಡ್ಡವನು" (ನಾಲ್ಕು ಸಲ)
> "ಅಲ್ಲಾಹನ ಹೊರತು ಬೇರೆ ಆರಾಧ್ಯನಿಲ್ಲವೆಂದು ನಾನು ಸಾಕ್ಷ್ಯ ವಹಿಸುತ್ತೇನೆ" (ಎರಡು ಸಲ)
> "ಮುಹಮ್ಮದ್ ಅಲ್ಲಾಹನ ದೂತರೆಂದು ನಾನು

ಸಾಕ್ಷ್ಯವಹಿಸುತ್ತೇನೆ" (ಎರಡು ಸಲ)
"ಪ್ರಾರ್ಥನೆಗೆ ಬನ್ನಿರಿ" (ಎರಡು ಸಲ)
"ವಿಜಯದೆಡೆಗೆ ಬನ್ನಿರಿ" (ಎರಡು ಸಲ)
"ಅಲ್ಲಾಹನು ಅತಿ ದೊಡ್ಡವನು" (ಎರಡು ಸಲ)
"ಅಲ್ಲಾಹನ ಹೊರತು ಬೇರೆ ಆರಾಧ್ಯನಿಲ್ಲ"
(ಒಂದು ಸಲ)

ಅನುಗ್ರಹೀತವೂ ಸಮಗ್ರವೂ ಆದ ಈ ವಚನಗಳು ಇಸ್ಲಾಮಿಕ ಅಧ್ಯಾಪನೆಗಳ ಸಂಕ್ಷೇಪವಾಗಿದೆ.

ಮಗುವಿಗೆ ಕೇವಲ ಒಂದು ಸಲ ಉಪದೇಶಿಸಿದರೆ ಸಾಕಾಗದು; ಬದಲಿಗೆ, ಅದರ ಹೃದಯದಲ್ಲಿ ಇಸ್ಲಾಮಿನ ಪಾಠಗಳು ಅಚ್ಚೊತ್ತಲ್ಪಡಲಿಕ್ಕಾಗಿ ಸದುಪದೇಶಗಳನ್ನು ಪದೇ ಪದೇ ಹೇಳುತ್ತಲೇ ಇರಬೇಕೆಂದೂ ಸದ್ವಿಚಾರಗಳು ಅದರ ಮನಸ್ಸಿನಲ್ಲಿ ನೆಲೆಯೂರುವಂತೆ ಮಾಡಬೇಕೆಂದೂ ಆಗಿದೆ ಮಗುವಿನ ಕಿವಿಯಲ್ಲಿ ಅದಾನ್ ಪದಗಳನ್ನು ಹೇಳುವುದರ ಉದ್ದೇಶ. ಶಿಶುವಿನ ಶಿಕ್ಷಣವನ್ನು ಅದು ಹುಟ್ಟಿದಾರಭ್ಯದಿಂದ ತೊಡಗಬೇಕೆಂಬ ಸೂಚನೆಯನ್ನು ಸಹ ಅದು ನೀಡುತ್ತದೆ.

ಮಗು ಎಳೆಯದಾದ ಕಾರಣ ಅದು ದೊಡ್ಡದಾದ ನಂತರ ಶಿಕ್ಷಣ ನೀಡಬಹುದೆಂಬ ಕಲ್ಪನೆ ಸರಿಯಲ್ಲ. ಹುಟ್ಟಿನಿಂದಲೇ ಅದರ ಶಿಕ್ಷಣವನ್ನು ಆರಂಭಿಸಬೇಕಾಗಿದೆ. ಅದಕ್ಕೆ ಆಗ ಏನೂ ತಿಳಿಯದಿದ್ದರೂ, ಅದರ ಕೇಳುವಿಕೆ ಮತ್ತು ಕಾಣುವಿಕೆ ಅಪೂರ್ಣಾವಸ್ಥೆಯಲ್ಲಿದ್ದರೂ ಜನನದ ಆರಂಭದಿಂದಲೇ ಪರಿಸರದ ಪ್ರಭಾವಕ್ಕೆ ಅದು ಒಳಗಾಗುತ್ತದೆ. ಇದು ಮನಃಶಾಸ್ತ್ರಕ್ಕೆ ಸಂಬಂಧಿಸಿದ ಸೂಕ್ಷ್ಮ ವಿಚಾರವಾಗಿದೆ. ಸಾಮಾನ್ಯ ಜನರಿಗೆ ಅದು ತಿಳಿಯಲಸಾಧ್ಯ. ಆದರೆ ಮನಃಶಾಸ್ತ್ರಜ್ಞರು ಇದನ್ನು ಚೆನ್ನಾಗಿ ಬಲ್ಲವರಾಗಿದ್ದಾರೆ.

ಮಗುವಿನ ಬಲ ಕಿವಿಯಲ್ಲಿ ಅದಾನ್ ಉಚ್ಚರಿಸಿದ ನಂತರ ಎಡ ಕಿವಿಯಲ್ಲಿ 'ಇಖಾಮತ್' ಉಚ್ಚರಿಸಬೇಕಾಗಿದೆ. ಆದರ್ಶನೀಯ ಶಿಕ್ಷಣ ಪಾಠಗಳೊಂದಿಗೆ ಅವನ್ನು ಪ್ರಾಯೋಗಿಕಗೊಳಿಸುವ ನಿರ್ದೇಶಗಳನ್ನು ಸಹ ಸರಿಯಾದ ಕಾಲದಲ್ಲಿ ಆರಂಭಿಸಬೇಕೆಂದು ಇದು ನಮಗೆ ಮನಗಾಣಿಸಿ ಕೊಡುತ್ತದೆ. "ನಿಶ್ಚಯವಾಗಿಯೂ ನಮಾಝ್ ಆರಂಭವಾಯಿತು" ಎಂಬ ಇಖಾಮತಿನ ಪದಗಳು ನವಜಾತ ಮಗುವಿನ ಕಿವಿಯಲ್ಲಿ ಉಸುರುತ್ತಾ (ದೇವದಾಸನಾಗುವ ಸಮಯ ಆರಂಭವಾಯಿತು ಎಂದು ತಾತ್ಪರ್ಯ) ಮುಂದಿನ ಪ್ರಾಯೋಗಿಕ ಜೀವಿತದ ಪಥದಲ್ಲಿ ಅವನನ್ನು ಸಿದ್ಧಗೊಳಿಸಲಾಗುತ್ತದೆ. ಮಗು ಮತ್ತು ಅದರ ಮಾತಾಪಿತರಿಗೆ ಜ್ಞಾನದ ಉತ್ತಮ ಪಾಠಗಳಾಗಿ ಮಾರ್ಪಡುವ ಎರಡು ಸೂಚನೆಗಳಾಗಿವೆ ಇವು.

## ಬಾಲ್ಯದಲ್ಲೇ ಆರಾಧನೆ

ಮಗು ತಿಳುವಳಿಕೆಯ ಪ್ರಾಯಕ್ಕೆ ಬರುವಾಗಲೇ ಧಾರ್ಮಿಕ ಮತ್ತು ನೈತಿಕ ಶಿಕ್ಷಣ ಆರಂಭಿಸಬೇಕು. ಈ ಘಟ್ಟದಲ್ಲಿ ಇಸ್ಲಾಂ ನಮಾಝಿಗೆ ಆದ್ಯತೆಯನ್ನು ನೀಡುತ್ತದೆ. ಅದು ಮನುಷ್ಯ ಮತ್ತು ಸೃಷ್ಟಿಕರ್ತನ ಮಧ್ಯೆ ಅನ್ಯೋನ್ಯ ಸಂಪರ್ಕವನ್ನು ಬೆಸೆಯುವ ಕೊಂಡಿಯಾಗಿದೆ. ನಮಾಝ್ ನಿರ್ವಹಿಸದ ಯಾವನೇ ಯಥಾರ್ಥ ಮುಸ್ಲಿಂ ಎಂದು ಕರೆಯಲ್ಪಡಲು ಅರ್ಹನಾಗುವುದಿಲ್ಲ.

ಮುಹಮ್ಮದ್ ಪೈಗಂಬರ್ (ಸ) ಹೇಳುತ್ತಾರೆ: "ಒಂದು ಮಗುವಿಗೆ ಏಳು ವರ್ಷ ಪ್ರಾಯವಾಗುವಾಗ ನಮಾಝ್ ಮಾಡಲಿಕ್ಕೆ ಆದೇಶಿಸಿರಿ. ಹತ್ತು ವರ್ಷ ಪ್ರಾಯವಾದರೆ ಅವನು ಆ ಬಗ್ಗೆ ಅಲಕ್ಷ್ಯ ಮಾಡುವನಾದರೆ ಅವನನ್ನು ಝುಂಕಿಸಬೇಕು."

ಬಾಲ್ಯ ಪ್ರಾಯದ ಅಲ್ಪ ತಿಳುವಳಿಕೆಯ ಘಟ್ಟದ ಮೊದಲ ಪಾಠ ಇದಾಗಿದೆ. ಧಾರ್ಮಿಕ ಪ್ರಜ್ಞೆಯುಳ್ಳ ಕುಟುಂಬಗಳ ಮಕ್ಕಳನ್ನು ಧಾರ್ಮಿಕವಾಗಿ ಪಳಗಿಸಿಕೊಂಡು ಬರುವುದಕ್ಕೆ ಇದಕ್ಕಿಂತ ಉತ್ತಮವಾದ ಆದೇಶ ಬೇರೆ ಇರಲಾರದು.

ಧರ್ಮವನ್ನು ಎರಡಾಗಿ ವಿಭಾಗಿಸಬಹುದು. ಒಂದನೆಯದು ಸೃಷ್ಟಿಕರ್ತನೊಡನೆ ತೋರಿಸಬೇಕಾದ ಕರ್ತವ್ಯಗಳು. ಎರಡನೆಯದು ಸೃಷ್ಟಿಗಳೊಡನೆ ತೋರಿಸಬೇಕಾದ ಕರ್ತವ್ಯಗಳು. ನಮಾಝ್ ಅಲ್ಲಾಹನೊಡನೆ ತೋರಿಸಬೇಕಾದ ಕರ್ತವ್ಯಗಳಲ್ಲಿ ಸೇರುತ್ತದೆ. ಖುರ್ಆನಿನ ಪಾಠವನ್ನನುಸರಿಸಿ ನಮಾಝ್ ಇಸ್ಲಾಮಿನ

ಎಲ್ಲ ಆರಾಧನಾ ಕ್ರಮಗಳಲ್ಲಿ ಪ್ರಧಾನವಾದುದು. ಸಣ್ಣ ಪ್ರಾಯದಲ್ಲೇ ಮಗುವನ್ನು ನಮಾಝ್ ಮಾಡಲು ಪ್ರೇರೇಪಿಸುವ ಮೂಲಕ ಒಂದು ವಿಚಾರವನ್ನು ಮನವರಿಕೆ ಮಾಡಿಕೊಡಲಾಗುತ್ತದೆ–ಪ್ರಾಪ್ತ ವಯಸ್ಕನಾಗುವಾಗ ಅವನು ತನ್ನ ಸೃಷ್ಟಿಕರ್ತನೊಡನೆ ವೈಯಕ್ತಿಕ ಸಂಬಂಧಗಳನ್ನೂ ಸಂಪರ್ಕಗಳನ್ನೂ ಸ್ಥಾಪಿಸಬೇಕೆಂದು.

ಅವನಿಗೆ ಬಾಂಧವರೂ ಸ್ನೇಹಿತರೂ ಇರಬಹುದು. ಮಗುವೆಂಬ ಸ್ಥಿತಿಯಿಂದ ಅವನೊಬ್ಬ ಪಿತನಾಗಿ ಮಾರ್ಪಡುವನು. ಅವನಿಗೆ ಬೇರೆ ಸಂಬಂಧಿಕರಿರಬಹುದು. ಅವನು ವಿದ್ಯಾರ್ಥಿ ಅಥವಾ ಅಧ್ಯಾಪಕನಾಗಿರಬಹುದು. ಅವನಿಗೆ ಅನೇಕ ಬಂಧು ಬಾಂಧವರಿರಬಹುದು. ಅವನೊಬ್ಬ ಮಾಲಿಕ ಅಥವಾ ನೌಕರನಾಗಿರಬಹುದು. ಅವನೊಬ್ಬ ಗುಮಾಸ್ತ ಅಥವಾ ಅಧಿಕಾರಿ ಆಗಿರಬಹುದು. ಆದರೆ, ಅವನ ಸೃಷ್ಟಿಕರ್ತನೂ ಒಡೆಯನೂ ಸಂರಕ್ಷಕನೂ ಪರಿಪಾಲಕನೂ ಆದ ದೇವರೊಡನಿರುವ ಸಂಬಂಧ ಇವಕ್ಕೆಲ್ಲ ಮಿಗಿಲಾದುದಾಗಿದೆ. ಸಂಕ್ಷಿಪ್ತವಾಗಿ, ಸೃಷ್ಟಿಕರ್ತನೊಡನೆ ವೈಯಕ್ತಿಕವಾದ ಸಾಮೀಪ್ಯ ಮತ್ತು ಅನುಸರಣೆಯ ಪಾಠಗಳನ್ನು ಮಕ್ಕಳಿಗೆ ಬಾಲ್ಯದಲ್ಲೇ ಕಲಿಸಬೇಕಾಗಿದೆ.

ಎಲ್ಲ ಸಂಬಂಧಗಳಿಗಿಂತ ಅತ್ಯಂತ ಉಪಕಾರಪ್ರದವೂ ಮನುಷ್ಯನ ಭೌತಿಕ ಮತ್ತು ಆಧ್ಯಾತ್ಮಿಕವಾದ ಜೀವಿತಕ್ಕೆ ಶಕ್ತಿಯುತವಾದ ಆಧಾರವೂ ದೇವರೊಡನಿರುವ ಸಂಬಂಧವಾಗಿದೆ. ನಮಾಝ್ ಮೂಲಕ ದೇವರೊಡನೆ ಸಂಬಂಧವನ್ನು ಸ್ಥಾಪಿಸುವ ಒಂದು ಮಗು, ಅದರ ನಮಾಝ್ ಕಪಟ ಅಥವಾ ಹೊರತೋರಿಕೆಯ ಅಥವಾ ಆಚಾರ ಮಾತ್ರವಾದುದು ಅಲ್ಲವಾದರೆ, ಪ್ರಾಮಾಣಿಕವೂ ಸ್ನೇಹಪೂರ್ಣವೂ ಭಕ್ತಿಯುಳ್ಳದ್ದೂ ಆಗಿದ್ದರೆ ಎಂದಿಗೂ ನಾಶವಾಗದೆಂದು ನಾನು ಪೂರ್ಣ ವಿಶ್ವಾಸದಿಂದ ಹೇಳುತ್ತೇನೆ. ಈ ಮಹತ್ವಾದ ಪಾಠವನ್ನು ಮನವರಿಕೆ ಮಾಡಿಕೊಂಡು ಎಲ್ಲ ಅಹ್ಮದೀ ಮಾತಾಪಿತರು ತಮ್ಮ ಸಂತಾನಗಳಿಗೆ ಸರಿಯಾದ ತರಬೇತಿಯನ್ನು ನೀಡಿ ಅವರಿಗೆ ದೇವರೊಡನೆ ಸಂಬಂಧ ಏರ್ಪಡುವಂತೆ ಮಾಡುವರೇ? ಈ ಲೋಕದಲ್ಲಿ ಮಾತ್ರವಲ್ಲ ಪರಲೋಕದ ಶಾಶ್ವತ ಜೀವಿತದಲ್ಲೂ ಇದು ಅವರ ರಕ್ಷಾಕವಚವಾಗಿದೆ.

## ಹೆಣ್ಣುಮಕ್ಕಳ ಬಗ್ಗೆ ವಿಶೇಷ ಗಮನ

ಹೆಣ್ಣು ಮಕ್ಕಳಿಗೆ ಚಿಕ್ಕ ಪ್ರಾಯದಲ್ಲೇ ಶಿಕ್ಷಣ ನೀಡುವುದರ ಬಗ್ಗೆ ಮಾತಾಪಿತರು ಹೆಚ್ಚಿನ ಕಾಳಜಿ ವಹಿಸಬೇಕೆಂದು ಮುಹಮ್ಮದ್ ಪೈಗಂಬರ್ (ಸ) ವಿಶೇಷವಾದ ನಿರ್ದೇಶನ ನೀಡಿರುವರು. ಅವರು ಹೀಗೆ ನುಡಿದಿದ್ದಾರೆ:

"ತನ್ನ ಹೆಣ್ಣು ಮಗುವನ್ನು ಒಬ್ಬನು ಸಜೀವ ದಫನ ಮಾಡದೆಯೂ ಅವಳನ್ನು ಕೀಳಾಗಿ ನೋಡದೆಯೂ ಗಂಡು ಮಕ್ಕಳನ್ನು ಅವಳಿಗಿಂತ ಮೇಲಾಗಿ ಪರಿಗಣಿಸದೆಯೂ ಇರುವನಾದರೆ ಅಲ್ಲಾಹನು ಆತನಿಗೆ ಸ್ವರ್ಗದಲ್ಲಿ ಪ್ರವೇಶ ನೀಡುವನು." (ತುರ್ಮದಿ)

ಪೈಗಂಬರರ ಈ ನಿರ್ದೇಶನ, ಧರ್ಮಭಕ್ತಿಯುಳ್ಳ ಪತ್ನಿಯರನ್ನು ಆಯ್ಕೆಮಾಡಬೇಕೆಂಬ ಮುಸ್ಲಿಂ ಪುರುಷರಿಗೆ ನೀಡಲಾದ ಆದೇಶದ ತತ್ವಶಾಸ್ತ್ರದಲ್ಲಿ ಬೇರೂರಿಕೊಂಡಿದೆ. ಮಾತಾಪಿತರು ಅವರ ಹೆಣ್ಣುಮಕ್ಕಳಿಗೆ ಸರಿಯಾದ ಧಾರ್ಮಿಕ ಶಿಕ್ಷಣ ನೀಡುವುದರಲ್ಲಿ ಆಸಕ್ತಿ ವಹಿಸಿ ಅವರ ಮಾತು ಮತ್ತು ಕೃತಿ ಸಾತ್ವಿಕತೆಯಿಂದ ಕೂಡಿರುವಂತೆ ತರಬೇತಿ ನೀಡಿ, ಅವರಲ್ಲಿ ಆತ್ಮಾಭಿಮಾನ ಹುಟ್ಟುವಂತೆ ಮಾಡುವಾಗ, ಅವರು ಮುಂದೆ ದೇಶದ ಉತ್ತಮ ಮಾತೆಯರಾಗಿ ಮಾರ್ಪಟ್ಟು ಸತ್ ಸಂತಾನಗಳನ್ನು ಬೆಳಸಿಕೊಂಡು ಬರುವ ಮಧ್ಯವರ್ತಿಗಳಾಗುತ್ತಾರೆ. ಈ ಪ್ರಕಾರದಲ್ಲಿ ಒಬ್ಬೊಬ್ಬ ಹೆಣ್ಣು ಮಗುವನ್ನು ದೇವಭಕ್ತಿಯುಳ್ಳ ಒಂದೊಂದು ತಲೆಮಾರು ಅನುಸರಿಸುತ್ತದೆ. ಕೊನೆಗೆ ಅದು ದೇಶದ ಏಳಿಗೆಗೆ ಕಾರಣವಾಗುತ್ತದೆ. ಇದು ಪೈಗಂಬರರ ಬಹಳ ಸರಳವಾದ ಒಂದು ಆದೇಶವಾದರೂ ಅದರ ಪ್ರತಿಕ್ರಿಯೆ ಮತ್ತು ಫಲಗಳು ರಾಷ್ಟ್ರದ ಅದೃಷ್ಟವನ್ನೇ ಬದಲಾಯಿಸಲು ಶಕ್ತವಾದುದಾಗಿದೆ.

## ಕುಟುಂಬದ ಸದಸ್ಯರನ್ನು ತರಬೇತಿಗೊಳಿಸುವುದರ ಬಗ್ಗೆ ನಿರ್ದೇಶಗಳು

ಕುಟುಂಬದ ಸದಸ್ಯರ ಸಾಮೂಹಿಕವಾದ ಧಾರ್ಮಿಕ ಮತ್ತು ನೈತಿಕ ಶಿಕ್ಷಣದ ಬಗ್ಗೆ ಮುಸ್ಲಿಂ ಪುರುಷರಿಗೆ ಇಸ್ಲಾಂ ನೀಡುವ ವಿಶೇಷ ಆದೇಶ ಖುರ್‌ಆನಿನಲ್ಲಿ ಈ ರೀತಿ ಉಲ್ಲೇಖಿಸಲ್ಪಟ್ಟಿದೆ:

اَلرِّجَالُ قَوَّامُوْنَ عَلَى النِّسَاءِ

"ಪುರುಷರು ಸ್ತ್ರೀಯರ ಮೇಲ್ನೋಟಗಾರರಾಗಿದ್ದಾರೆ." (4:35)

ಎಂದರೆ, ಕುಟುಂಬದ ಸ್ವಭಾವ ರೀತಿಗಳನ್ನೂ ಧಾರ್ಮಿಕತೆ-ನೈತಿಕತೆಯನ್ನೂ ನಿರೀಕ್ಷಿಸುವ ಜವಾಬ್ದಾರಿಕೆ ಪುರುಷರಿಗಿದೆ. ಕುಟುಂಬದ ನೈತಿಕ ಶಿಕ್ಷಣವನ್ನು ಅವರು ನಿಯಂತ್ರಿಸಬೇಕಾಗಿದೆ. ಅವರಿಂದ ಉತ್ತಮ ಪೀಳಿಗೆ ಸೃಷ್ಟಿಸಲ್ಪಡಲಿಕ್ಕೆ ನೇತೃತ್ವವನ್ನು ಸಹ ಪುರುಷರು ನೀಡಬೇಕಾಗಿದೆ. ಸ್ತ್ರೀಯರ ನೈತಿಕತೆ ಮತ್ತು ಧಾರ್ಮಿಕತೆಗೆ ಅಪಾಯ ಉಂಟುಮಾಡುವ ಪ್ರೇರಣೆಗಳನ್ನು ಅವರು ತಡೆಯಬೇಕಾಗಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

يَا أَيُّهَا الَّذِيْنَ آمَنُوْا قُوْا أَنْفُسَكُمْ وَأَهْلِيْكُمْ نَارًا

"ಎಲೈ ವಿಶ್ವಾಸಿಗಳೇ, ನಿಮ್ಮ ಆತ್ಮಗಳನ್ನು ಮಾತ್ರವಲ್ಲ, ನಿಮ್ಮ ಕುಟುಂಬವನ್ನೂ ನರಕ ಶಿಕ್ಷೆಯಿಂದ ಕಾಪಾಡಿರಿ" (66 : 7)

ಈ ವಚನ ಮೂಲಕ, ಸದಾ ಕುಟುಂಬದ ಮೇಲ್ನೋಟಗಾರರಾಗಲಿಕ್ಕೆ ಮುಸ್ಲಿಂ ಪುರುಷರಿಗೆ ಅಲ್ಲಾಹನು ಆಜ್ಞಾಪಿಸಿರುತ್ತಾನೆ. ಅವರು ಸ್ವತಃ ಉತ್ತಮರಾದರೆ ಸಾಕಾಗದು. ಅವರ ಪತ್ನಿಯಂದಿರ, ಹೆಣ್ಮಕ್ಕಳ, ಗಂಡುಮಕ್ಕಳ ಹಾಗೂ ಮನೆಯಲ್ಲಿರುವ ಇತರರ ವಿಷಯದಲ್ಲಿ ನಿಗಾ ವಹಿಸಿಕೊಳ್ಳಬೇಕಾಗಿದೆ. ಅವರಿಗೆ ಸರಿಯಾದ ನೈತಿಕ-ಧಾರ್ಮಿಕ ಶಿಕ್ಷಣ ನೀಡಿ ನರಕಾಗ್ನಿಯಿಂದ ಅವರನ್ನು ರಕ್ಷಿಸಬೇಕು. "ಕುಟುಂಬ" ಎಂದು ಅನುವಾದಿಸಲ್ಪಟ್ಟ "ಅಹ್ಲ್" ಎಂಬ ಪದದಲ್ಲಿ ಮನೆಯ ಕೆಲಸದವರು ಸಹ ಸೇರುತ್ತಾರೆ. ತಮ್ಮ ಕೆಲಸಗಾರರ ನೈತಿಕತೆಯನ್ನೂ ಸ್ವಭಾವವನ್ನೂ ನಿಗಾ ನೋಡಬೇಕಾದುದು ಸಹ ಮುಸ್ಲಿಮರ ಕರ್ತವ್ಯವಾಗಿದೆ. ಇದು ಹೇಳುವುದು ತಮ್ಮ ನೌಕರರು ತಮ್ಮ ಹಾಗೆಯೇ ದೇವರ ದಾಸರು ಆದ ಕಾರಣ ಮಾತ್ರದಿಂದಲ್ಲ; ಸದಾ ಸಂಪರ್ಕದಿಂದ ಮನೆಗೆಲಸದವರ ನೈತಿಕ ಸ್ಥಿತಿ ಮನೆಯಲ್ಲಿರುವ ಮಕ್ಕಳು ಮತ್ತು ಇತರರ ಮೇಲೆ ಪರಿಣಾಮ ಬೀರುವುದರಿಂದಲೂ ಆಗಿದೆ.

ಈ ವಚನವು ಬಹಳ ವ್ಯಾಪಕವಾದ ಅರ್ಥವನ್ನು ಒಳಗೊಂಡಿದೆ. ಹೇಗೆಂದರೆ, ಆ ಮೂಲಕ ದೇವ ವಿಶ್ವಾಸಿಗಳಾದ ಪುರುಷರನ್ನು ತಮ್ಮ ಪತ್ನಿ, ಮಕ್ಕಳು, ಮನೆಯಲ್ಲಿರುವ ಇತರರು, ಮನೆಗೆಲಸದವರು ಮೊದಲಾದವರೆಲ್ಲರ ಮೇಲೆ ನಿಗಾ ವಹಿಸುವವರನ್ನಾಗಿಯೂ ಮಾಡಲಾಗಿದೆ.

ಸ್ಪಷ್ಟವಾಗಿ ಹೇಳುವುದಾದರೆ, ಈ ಹೊಣೆಗಾರಿಕೆಯನ್ನು ಮೂರು ವಿಧದಲ್ಲಿ ನಿಭಾಯಿಸಲು ಸಾಧ್ಯ.

ಒಂದನೆಯದಾಗಿ, ತಮ್ಮ ಪತ್ನಿ, ಮಕ್ಕಳು, ಮನೆಯಲ್ಲಿರುವ ಇತರರು ಮತ್ತು ಮನೆಗೆಲಸದವರ ನೈತಿಕ ಮತ್ತು ಧಾರ್ಮಿಕತೆಯ ಮೇಲೆ ನಿಗಾ ಇಟ್ಟುಕೊಂಡು.

ಎರಡನೆಯದಾಗಿ, ಅವರಿಗೆ ಸದಾ ಸದುಪದೇಶಗಳನ್ನು ನೀಡುತ್ತಾ.

ಮೂರನೆಯದಾಗಿ, ದುಷ್ಟಸಂಗದಿಂದ ಅವರನ್ನು ತಡೆದುಕೊಂಡು.

ಈ ತ್ರಿವಿಧ ಪರಿಹಾರ ಮಾರ್ಗವನ್ನು ಕೈಗೊಂಡು ನರಕದಿಂದ ತನ್ನ ಕುಟುಂಬವನ್ನು ರಕ್ಷಿಸುವವನು ಖಂಡಿತವಾಗಿಯೂ ಭಾಗ್ಯಶಾಲಿ. ಅಲ್ಲಾಹನು ಒಬ್ಬನಿಗೆ ಪತ್ನಿ-ಮಕ್ಕಳನ್ನೂ ಬಂಧು-ಬಾಂಧವರನ್ನೂ ಮನೆಗೆಲಸದವರನ್ನೂ ಅನುಗ್ರಹಿಸಿರುವಾಗ, ಅವರನ್ನು ಅವನಿಗೆ ಇವೆಲ್ಲವನ್ನೂ ಅನುಗ್ರಹಿಸಿದ ಅಲ್ಲಾಹನ ಸಂತೃಪ್ತಿಯ ದಾರಿಯೆಡೆಗೆ ಕೊಂಡೊಯ್ಯುವುದರಲ್ಲಿ ಅವನು ಪರಾಜಿತನಾಗುವನಾದರೆ, ಅವನೇ ಅತಿ ನಿರ್ಭಾಗ್ಯವಂತನು.

# ವಿಶ್ವಶಾಂತಿಗೆ ಖುರ್‌ಆನಿನ ನಿರ್ದೇಶನಗಳು*

★ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್

ಮನುಷ್ಯನ ಪ್ರಗತಿ ಮತ್ತು ಪರಿಪೂರ್ಣತೆಗೋಸ್ಕರ ಶರೀಅತ್ ನಿಯಮ, ನೈತಿಕ ನಿಯಮ, ಸಾಮಾಜಿಕ ನಿಯಮ ಎಂಬ ನಿಯಮಗಳನ್ನು ದೇವರು ತನ್ನ ಪ್ರವಾದಿಗಳ ಮೂಲಕ ಪ್ರದಾನ ಮಾಡಿರುತ್ತಾನೆ. ಖುರ್‌ಆನ್ ಅತ್ಯಂತ ಪರಿಪೂರ್ಣವೂ ಅನ್ಯೂನವೂ ಆದ ದಿವ್ಯ ಗ್ರಂಥವಾದುದರಿಂದ ಅದು ಈ ಮೂರು ನಿಯಮಗಳನ್ನೂ ಕುರಿತು ವಿವರಿಸಿ ಕೊಡುತ್ತದೆ. ಅದು ಶರೀಅತ್ ನಿಯಮಗಳು ಮತ್ತು ನೈತಿಕ ನಿಯಮಗಳನ್ನು ಸಂಪೂರ್ಣ ರೀತಿಯಲ್ಲಿ ವಿವರಿಸಿ, ಸಾಮಾಜಿಕ ನಿಯಮಗಳ ಮೂಲ ತತ್ವಗಳನ್ನು ತಿಳಿಸಿಕೊಟ್ಟು ಸಾಮಾಜಿಕ ನಿಯಮಗಳ ಇತರ ಅಂಶಗಳನ್ನು ಮನುಷ್ಯನೇ ರೂಪಿಸಿಕೊಳ್ಳಲು ಅವನಿಗೆ ಅವಕಾಶ ನೀಡಿದೆ. ಮನುಷ್ಯಸಹಜ ಗುಣಗಳನ್ನು ಯುಕ್ತ ರೀತಿಯಲ್ಲಿ ವಿನಿಯೋಗಿಸುವುದರ ಮೂಲಕ ಉದಾತ್ತವಾದ ನೈತಿಕ ಗುಣಗಳು ರೂಪ ತಾಳುತ್ತವೆಯೆಂದು ನೈತಿಕ ನಿಯಮ ಮಂಡಲದಲ್ಲಿ ಖುರ್‌ಆನ್ ಕಲಿಸುತ್ತದೆ. ಮೂಲಭೂತವಾದ ಈ ತತ್ವವನ್ನು ಖುರ್‌ಆನ್ ಘೋಷಿಸುತ್ತದೆ. ಸಹಜ ಗುಣಗಳನ್ನು ಅದುಮಿಡುವುದು ಅಥವಾ ನಿರ್ವೀರ್ಯ ಗೊಳಿಸುವುದು, ಆ ಭಾವಾವೇಶಗಳಿಗೆ ಸಂಪೂರ್ಣವಾಗಿ ಅಧೀನವಾಗುವಂತೆಯೇ ಅನೈತಿಕವಾಗಿದೆ. ಸಹಜ ಉದ್ವೇಗಗಳನ್ನೂ ನೈಸರ್ಗಿಕ ಇಚ್ಛೆಗಳನ್ನೂ ನಿರ್ಮೂಲ ಗೊಳಿಸಲು ಶ್ರಮಿಸುವವನು ನಿಸರ್ಗನಿಯಮಗಳನ್ನು ಧಿಕ್ಕರಿಸುವವನಾಗಿದ್ದಾನೆ. ಮನಸ್ಸಿನಲ್ಲಿ ಸಹಜ ಇಚ್ಛೆಗಳು ಮಾತ್ರ ತುಂಬಿಕೊಂಡಿರುವವನೂ ಧರ್ಮ ನಿಯಮಗಳನ್ನು ಧಿಕ್ಕರಿಸುವವನೂ ಆಧ್ಯಾತ್ಮಿಕ ನಾಶದೆಡೆಗೆ ಸಾಗುತ್ತಾನೆ. ಈ ಎರಡು ಮಾರ್ಗಗಳೂ ಮನುಷ್ಯನ ವಿಕಾಸಕ್ಕೆ ಮಾರಕವಾದ ಕ್ಷತಿಯನ್ನುಂಟು ಮಾಡುತ್ತವೆ. ನಿಸರ್ಗ ನಿಯಮವನ್ನಾಗಲಿ ಧರ್ಮ ನಿಯಮವನ್ನಾಗಲಿ ಉಲ್ಲಂಘಿಸುವುದು ಅಪರಾಧವಾಗಿದೆ. ಆದ್ದರಿಂದಲೇ, ಎಲ್ಲ ವಸ್ತುಗಳೂ ಮನುಷ್ಯನ ಪ್ರಯೋಜನಕ್ಕಾಗಿ ಸೃಷ್ಟಿಸಲ್ಪಟ್ಟಿರುವುದರಿಂದ, ಹಾನಿಕರವಾದವುಗಳನ್ನು ಹೊರತು ಬಾಕಿಯೆಲ್ಲವನ್ನೂ ಅನುಮತಿಸಲಾಗಿದೆಯೆಂದು ಖುರ್‌ಆನ್ ಕಲಿಸುತ್ತದೆ. ಈ ತತ್ವಾನುಸಾರ ಸನ್ಯಾಸ ಅಥವಾ ಅವಧೂತತ್ವವನ್ನು ಒಂದು ಒಳಿತೆಂದಲ್ಲ ಕಡುಕೆಂದು ಇಸ್ಲಾಂ ಗಣಿಸುತ್ತದೆ. ಇದೇ ಪ್ರಕಾರ, ಶುದ್ಧವಾದ ಆಹಾರ ಪದಾರ್ಥಗಳನ್ನೂ ಪಾನೀಯಗಳನ್ನೂ ಇನ್ನಿತರ ಒಳ್ಳೆಯ ವಸ್ತುಗಳನ್ನೂ ಉಪಯೋಗಿಸುವುದರಿಂದ ಬಿಟ್ಟು ನಿಲ್ಲುವುದು ಸಹ ನಿಸರ್ಗ ನಿಯಮಗಳನ್ನು ಧಿಕ್ಕರಿಸುವುದಕ್ಕೂ ದೇವರ ಅಪಾರವಾದ ಅನುಗ್ರಹಕ್ಕೆ ಕೃತಘ್ನತೆ ತೋರಿಸುವುದಕ್ಕೂ ತುಲ್ಯವಾಗಿರುವುದರಿಂದ ಅದು ಕೆಡುಕಾಗಿದೆ, ಒಳಿತಲ್ಲ. ಆದರೆ, ಈ ವಸ್ತುಗಳನ್ನು ಅನುಭವಿಸಲು ಮಾತ್ರ ಕಾಲವನ್ನೆಲ್ಲ ವ್ಯಯಿಸಿ ಸುಖಾಡಂಬರಗಳಲ್ಲಿ ಮುಳುಗುವುದು ಸಹ ಅಷ್ಟೇ ಪಾಪಕರವಾಗಿದೆ. ಏಕೆಂದರೆ, ಹೀಗೆ ವರ್ತಿಸುವುದರಿಂದ ಒಬ್ಬನು ಮಾನವ ಜೀವಿತದ ಯಥಾರ್ಥ ಗುರಿಯಾದ ಆತ್ಮದ ಬೆಳವಣಿಗೆಯನ್ನು ಅವಗಣಿಸುತ್ತಾನೆ. ವಿಶ್ರಮವಿಲ್ಲದೆ ಕೆಲಸ ಮಾಡುತ್ತಾ ಆಹಾರವನ್ನು ಸೇವಿಸದಿರುವವನು ತಪ್ಪುಗಾರನಾಗಿದ್ದಾನೆ. ಏಕೆಂದರೆ ಆತನು ಮರಣವನ್ನು ಆಹ್ವಾನಿಸುತ್ತಿದ್ದಾನೆ. ಆತನು ತನ್ನ ಕರ್ತವ್ಯವನ್ನು ಪೂರ್ಣಗೊಳಿಸುವುದಿಲ್ಲ. ಹಾಗೆಯೇ, ತಿನ್ನುವುದು, ಕುಡಿಯುವುದು ಮತ್ತು ದೇಹೇಚ್ಛೆಯ ಈಡೇರಿಕೆಯಲ್ಲಿ ಮಾತ್ರ ಮಗ್ನನಾಗಿ ಸೇವಾ ಚಟುವಟಿಕೆಗಳಿಂದ ಅಗಲಿ

---

* Introduction to the Study of the Holy Quran ಎಂಬ ಗ್ರಂಥದಿಂದ.

ನಿಲ್ಲುವವನೂ ತಪ್ಪುಗಾರನಾಗಿದ್ದಾನೆ. ಅಂಥವನು ಸುಖ ಜೀವನವನ್ನು ಬೆನ್ನಟ್ಟಿಕೊಂಡು ಹೋಗಿ ಜೀವನದ ನಿಜವಾದ ಗುರಿಯನ್ನು ನಿರ್ಲಕ್ಷಿಸುತ್ತಾನೆ. ದಾರಿಯನ್ನು ಸುಗಮಗೊಳಿಸದೆ ಗುರಿ ಸಾಧಿಸಲು ಅಸಾಧ್ಯವಾಗಿರುವಂತೆಯೇ, ಸರಿಯಾದ ಉದ್ದೇಶವಿಲ್ಲದೆ ದಾರಿಯನ್ನು ಸುಗಮಗೊಳಿಸುವುದು ಸಹ ಅಸಾಧ್ಯ.

## ಸಾಮಾಜಿಕ ವ್ಯವಸ್ಥೆಗೆ ಮೂಲ ತತ್ವಗಳು

ಸಾಮಾಜಿಕ ವ್ಯವಸ್ಥೆಯನ್ನು ಸ್ಥಾಪಿಸಲಿಕ್ಕೂ ಅದನ್ನು ಪ್ರಯೋಜನಕರವನ್ನಾಗಿ ಮಾಡಲಿಕ್ಕೂ ಖುರ್‌ಆನ್ ಈ ಕೆಳಗಿನ ಮೂಲ ತತ್ವಗಳನ್ನು ನಿರ್ದೇಶಿಸುತ್ತದೆ:

1. ಸರ್ವಸ್ವಾಮ್ಯ ದೇವರಿಗೆ ಮಾತ್ರವಿದೆ. ಎಲ್ಲ ವಸ್ತುಗಳು ಅವನದಾಗಿವೆ.

2. ದೇವರು ಎಲ್ಲ ವಸ್ತುಗಳ ನಿಯಂತ್ರಣಾಧಿಕಾರವನ್ನು ಎಲ್ಲರ ಒಳಿತಿಗಾಗಿ ವಿನಿಯೋಗಿಸಲಿಕ್ಕೋಸ್ಕರ ಮನುಷ್ಯನ ಅಧೀನಕ್ಕೊಳಪಡಿಸಿರುವನು.

3. ಮನುಷ್ಯನ ಜೀವನೋದ್ದೇಶ ಅವನ ಆಧ್ಯಾತ್ಮಿಕ ಸಾಂಗತೆಯಾಗಿರುವುದರಿಂದ ಅವನ ವರ್ತನೆಯಲ್ಲಿ ಅವನಿಗೆ ಒಂದು ಮಿತಿಯೊಳಗೆ ಸ್ವಾತಂತ್ರ್ಯವಿರಬೇಕಾಗಿದೆ. ಅದರ ಜೊತೆಗೆ ಪುರೋಗತಿಗಾಗಿ ಒಂದು ಕಾರ್ಯ ಕ್ಷೇತ್ರವಿರಬೇಕಾಗಿದೆ.

4. ಮಾನವನ ಪ್ರಗತಿಗೆ ಆಧಾರವಾಗಿರುವ ಉಪಕರಣೋಪಾಧಿಗಳು ಮನುಷ್ಯ ಸಮುದಾಯದ ಎಲ್ಲರಿಗೂ ಸೇರಿದ ಸೊತ್ತಾಗಿರುವುದರಿಂದ ಮನುಷ್ಯನ ದುಡಿಮೆಯ ಫಲದಲ್ಲಿ ವ್ಯಕ್ತಿಗೂ ಸಮಾಜಕ್ಕೂ ನ್ಯಾಯವಾದ ಪಾಲು ದೊರಕುವ ರೀತಿಯಲ್ಲಿ ವಿತರಿಸಲ್ಪಡಬೇಕಾಗಿದೆ.

5. ಸಾಮಾಜಿಕ ವ್ಯವಸ್ಥೆಯ ನ್ಯಾಯಯುತವಾದ ಕ್ರಮೀಕರಣಕ್ಕೆ ಒಬ್ಬ ನಿರ್ವಾಹಕ ಅಧಿಕಾರಿ ಇರಬೇಕಾಗಿದೆ. ಆ ಅಧಿಕಾರಿ ಸಮುದಾಯದ ಸದಸ್ಯರ ಸಮಾಲೋಚನೆ ಮೂಲಕ ಆರಿಸಲ್ಪಟ್ಟ ವ್ಯಕ್ತಿಯಾಗಿರಬೇಕು. ಆತನ ಕರ್ತವ್ಯ ನಿಯಮ ನಿರ್ಮಾಣವಲ್ಲ, ದೈವಿಕ ನಿಯಮಗಳನ್ನು ಜಾರಿಗೆ ತರುವುದಾಗಿದೆ.

6. ಬೇರೆ ಬೇರೆ ದೇಶಗಳ ಆಡಳಿತ ವ್ಯವಸ್ಥೆಯನ್ನು ಗಮನದಲ್ಲಿಟ್ಟು ಖುರ್‌ಆನ್ ಹೀಗೆ ಕಲಿಸುತ್ತದೆ:

a) ಎರಡು ಅಥವಾ ಅದಕ್ಕಿಂತ ಹೆಚ್ಚು ರಾಷ್ಟ್ರಗಳ ಮಧ್ಯೆ ವಿವಾದವಿದ್ದರೆ ಇತರ ರಾಷ್ಟ್ರಗಳು ಒಟ್ಟು ಸೇರಿ ಅದಕ್ಕೆ ಪರಿಹಾರವನ್ನುಂಟುಮಾಡಲು ಯತ್ನಿಸಬೇಕು.

b) ತರ್ಕ ಮಾಡುತ್ತಿರುವ ಎರಡು ರಾಷ್ಟ್ರಗಳ ಮಧ್ಯೆ ಸರಿಯಾದ ಒಂದು ಒಡಂಬಡಿಕೆ ಆಗದಿದ್ದರೆ ಇತರ ರಾಷ್ಟ್ರಗಳು ಸಮಸ್ಯೆಗೆ ಒಂದು ನ್ಯಾಯಯುತ ಪರಿಹಾರವನ್ನು ಸೂಚಿಸಬೇಕು.

c) ವಿವಾದ ಮಾಡುತ್ತಿರುವ ಎರಡು ರಾಷ್ಟ್ರಗಳಲ್ಲಿ ಯಾವುದಾದರೊಂದು ರಾಷ್ಟ್ರವು ತೀರ್ಮಾನವನ್ನು ಒಪ್ಪಿಕೊಳ್ಳಲು ಸಿದ್ಧವಿಲ್ಲವೆಂದಾದರೆ, ಅಥವಾ ಒಪ್ಪಿಕೊಂಡ ಬಳಿಕ ಅದನ್ನು ಜಾರಿಗೊಳಿಸಲು ತಯಾರಿಲ್ಲವೆಂದಾದರೆ, ಇತರೆಲ್ಲ ರಾಷ್ಟ್ರಗಳು ಒಟ್ಟಿಗೆ ಸೇರಿ ಆ ರಾಷ್ಟ್ರದ ಮೇಲೆ ಒತ್ತಡ ಹೇರಬೇಕಾಗಿದೆ. ಅದು ಸಫಲವಾಗದಿದ್ದರೆ, ವಿಶ್ವಶಾಂತಿಗೋಸ್ಕರ ಆ ತೀರ್ಮಾನವನ್ನು ಒಪ್ಪುವಂತೆ ಮಾಡಲು ಆ ರಾಷ್ಟ್ರದ ವಿರುದ್ಧ ಬಲ ಪ್ರಯೋಗಿಸಬೇಕು.

d) ಒತ್ತಡ ಹೇರುವಿಕೆ ಅಥವಾ ಬಲಪ್ರಯೋಗದ ಕಾರಣದಿಂದ ಹಠಮಾರಿತನ ತೋರಿಸಿದ ರಾಷ್ಟ್ರ ಶರಣಾಗಿ ಶಾಂತಿ ಸಂಧಾನಕ್ಕೆ ಒಪ್ಪುವುದಾದರೆ, ಇತರ ರಾಷ್ಟ್ರಗಳು ಮೂಲ ತರ್ಕಕ್ಕೆ ಸಂಬಂಧಿಸಿದ ತೀರ್ಮಾನವನ್ನು ಜಾರಿಗೊಳಿಸುವುದರ ಹೊರತು, ಆ ರಾಷ್ಟ್ರದಿಂದ ಏನಾದರೂ ಪ್ರಯೋಜನ ಪಡೆಯಲು ಎಂದಿಗೂ ಹವಣಿಸಬಾರದು. ಏಕೆಂದರೆ ಇದು ಹೊಸ ಸಮಸ್ಯೆಗಳಿಗೆ ಬುನಾದಿಯಾಗುವುದು.*

* ಇಸ್ರೇಲ್ ನಡೆಸಿದ್ದ ಸ್ಪಷ್ಟವಾದ ಆಕ್ರಮಣಗಳ ಮುಂದೆ ಕಣ್ಣುಮುಚ್ಚುತ್ತಾ ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ಗೊತ್ತುವಳಿಗಳನ್ನು ಧಿಕ್ಕರಿಸಿದ ಆ ರಾಷ್ಟ್ರದ ವಿರುದ್ಧ ಯಾವುದೇ ಕ್ರಮವನ್ನು ಕೈಗೊಳ್ಳದೆ ಇದ್ದ ವಿಶ್ವಸಂಸ್ಥೆ ಇರಾಕಿನ ವಿರುದ್ಧ ಬಹುರಾಷ್ಟ್ರದ ಬಲ

ಇವು ಸುಮಾರು ಹದಿನಾಲ್ಕು ಶತಮಾನಗಳಿಗೆ ಪೂರ್ವದಲ್ಲಿ ಖುರ್‌ಆನ್ ನಿರ್ದೇಶಿಸಿದ ತತ್ವಗಳಾಗಿವೆ. ಈ ತತ್ವಗಳಲ್ಲಿ ಕೆಲವನ್ನು ಸಂಯುಕ್ತ ರಾಷ್ಟ್ರ ಸಂಘ (United Nations Organization) ಸ್ವೀಕರಿಸಿದೆ. ಆದರೆ ಎಲ್ಲವನ್ನೂ ಅಂಗೀಕರಿಸಲು ಅದು ಪ್ರಯತ್ನಿಸದ ಕಾರಣ ಅದರ ಗುರಿ ಸಾಧನೆಯಲ್ಲಿ ಅದು ವಿಫಲಗೊಳ್ಳುತ್ತಿದೆ. ಆಕ್ರಮಿ ರಾಷ್ಟ್ರವನ್ನು ಅಂತಾರಾಷ್ಟ್ರೀಯ ತೀರ್ಮಾನಕ್ಕೆ ಬಗ್ಗುವಂತೆ ಮಾಡಲು ಇತರ ರಾಷ್ಟ್ರಗಳು ಒಟ್ಟುಸೇರಿ ಬಲಪ್ರಯೋಗ ನಡೆಸಬೇಕೆಂಬ ಖುರ್‌ಆನಿನ ತತ್ವವನ್ನು ಅವಗಣಿಸಿದುದರಿಂದ 'ಲೀಗ್ ಓಫ್ ನೇಶನ್ಸ್' (League of Nations) ಅಸ್ತಿತ್ವವನ್ನು ಕಳಕೊಂಡಿತು. ಸೋತ ರಾಷ್ಟ್ರದ ಬಲಹೀನತೆಯ ದುರುಪಯೋಗವನ್ನು ಪಡೆಯಲು ಪ್ರಯತ್ನಿಬಾರದೆಂಬ ಖುರ್‌ಆನಿನ ತತ್ವವನ್ನು ವಿಶ್ವಸಂಸ್ಥೆ ನಿರ್ಲಕ್ಷಿಸಿದೆ. ಸಂಘರ್ಷಕ್ಕೆ ಹೇತುವಾದ ಮೂಲ ವಿವಾದದ ಪರಿಹಾರಕ್ಕೆ ಮಾತ್ರ ತಮ್ಮ ಶ್ರಮಗಳನ್ನು ಸೀಮಿತಗೊಳಿಸಬೇಕೆಂಬ ತತ್ವದಲ್ಲಿ ದೃಢನಿಲುವು ಕೈಗೊಳ್ಳಲು ಯು. ಎನ್. ಓ. ಕಾಳಜಿ ವಹಿಸಲಿಲ್ಲ.

ಒಟ್ಟಾರೆ, 'ಲೀಗ್ ಓಫ್ ನೇಶನ್ಸ್' ಸೋಲಲು ಕಾರಣವಾದ ದೌರ್ಬಲ್ಯಗಳೇ ಯು. ಎನ್. ಓ. ಗೆ ಸಹ ಬಂದೊದಗಿರುವುದರಿಂದ ಯು. ಎನ್. ಓ. ಗೆ ಕೂಡ ಲೀಗ್ ಓಫ್ ನೇಶನ್ಸ್‌ನ ಗತಿಯೇ ಉಂಟಾಗಬಹುದೆಂದು ಭಯಪಡಬೇಕಾಗಿದೆ. ಖುರ್‌ಆನ್ ನಿರ್ದೇಶಿಸುವ ತತ್ವಗಳನ್ನು ಜಾರಿಗೊಳಿಸುವುದರ ಮೂಲಕ ಮಾತ್ರವೇ ವಿಶ್ವಶಾಂತಿಯನ್ನು ಸ್ಥಾಪಿಸಲು ಸಾಧ್ಯ.★

---

ಪ್ರಯೋಗಕ್ಕೆ ಅನುಮತಿ ನೀಡಿತು. ಅಮೇರಿಕದ ನಾಯಕತ್ವದಲ್ಲಿ ವಿಶ್ವಸಂಸ್ಥೆ ದ್ವಿಮುಖ ನೀತಿಯನ್ನು ತೋರಿಸಿದುದಕ್ಕೆ ಇದು ಸ್ಪಷ್ಟವಾದ ಪುರಾವೆಯಾಗಿದೆ,

ಇರಾಕನ್ನು ಮಿತ್ರರಾಷ್ಟ್ರಗಳು ಶರಣಾಗುವಂತೆ ಮಾಡಿದ ನಂತರ ಆ ರಾಷ್ಟ್ರದ ಬಲಹೀನತೆಯ ದುರುಪಯೋಗವನ್ನು ಪಡೆಯಲು ಪ್ರಯತ್ನಿಸುತ್ತಿರುವ ಪಾಶ್ಚಾತ್ಯ ರಾಷ್ಟ್ರಗಳಿಗೆ ವಿಶ್ವಸಂಸ್ಥೆ ಬೆಂಬಲ ನೀಡುವುದು ಸಹ ಅದರ ಸೋಲಿಗೆ ದ್ಯೋತಕವಾಗಿದೆ. —ಅನು.


ಓದಿರಿ—

# ಯೇಸು ಎಲ್ಲಿ ಮಡಿದರು?

ಬೈಬಲ್, ಖುರ್‌ಆನ್ ಮತ್ತು ಇತರ ಐತಿಹಾಸಿಕ ಸಾಕ್ಷ್ಯಗಳ ಆಧಾರದಲ್ಲಿ ಬರೆದ ಸಂಶೋಧನಾತ್ಮಕ ಗ್ರಂಥ

ಗ್ರಂಥ ಕರ್ತ : ಜಲಾಲುದ್ದೀನ್ ಶಮ್ಸ್
(ಮಾಜಿ ಇಮಾಂ, ಲಂಡನ್ ಮಸೀದಿ, ಲಂಡನ್)

ಬೆಲೆ: ರೂ. 15 ಅಂಚೆ ವೆಚ್ಚ : ರೂ. 1

ವ್ಯವಹರಿಸಿರಿ:

ಅಹ್ಮದಿಯಾ ಮುಸ್ಲಿಂ ಮಿಶನ್
ಅನ್ಸಾರಿ ರೋಡ್, ಮಂಗಳೂರು-575 001.

ಮಕ್ಕಳ ಪಂಕ್ತಿ

# ಇಸ್ಲಾಮಿಕ ಪಾಠಾವಳಿ

## ಇಸ್ಲಾಂ

"ಇಸ್ಲಾಂ" ಎಂಬ ಪದದ ಅರ್ಥ ವಿಧೇಯತೆ, ಅನುಸರಣೆ ಎಂದಾಗಿದೆ. ಅಂದರೆ ಅಲ್ಲಾಹನಿಗೆ ಸಂಪೂರ್ಣವಾಗಿ ವಿಧೇಯವಾಗುವುದು ಎಂದು ತಾತ್ಪರ್ಯ. ಮುಹಮ್ಮದ್ ಪೈಗಂಬರ್ (ಸಲ್ಲಲ್ಲಾಹು ಅಲೈಹಿ ವ ಸಲ್ಲಮ್) ಮುಖಾಂತರ ಅಲ್ಲಾಹನು ಪ್ರಕಟಪಡಿಸಿದ ಪರಿಪೂರ್ಣವಾದ ಧರ್ಮಕ್ಕೆ "ಇಸ್ಲಾಂ" ಎಂದು ಹೆಸರಿಡಲಾಗಿದೆ. ಏಕೆಂದರೆ ಅದು ಅಲ್ಲಾಹನಿಗೆ ಸಂಪೂರ್ಣವಾಗಿ ವಿಧೇಯತೆಯನ್ನು ತೋರಿಸುವ ಏಕ ಮಾರ್ಗವಾಗಿದೆ.

ಇಸ್ಲಾಂ ಎಂಬ ಶಬ್ದಕ್ಕೆ ಶಾಂತಿ ಸಮಾಧಾನವನ್ನು ನೆಲೆಗೊಳಿಸುವುದು ಎಂದು ಸಹ ಅರ್ಥವಿದೆ. ವಿಶ್ವದಲ್ಲಿ ಶಾಶ್ವತ ಶಾಂತಿಯನ್ನು ಸ್ಥಾಪಿಸುವರೆ ಒಂದೇ ಒಂದು ಮಾರ್ಗ ಇಸ್ಲಾಂ ಮಾತ್ರವಾಗಿದೆ.

ಇಸ್ಲಾಂ ಧರ್ಮವನ್ನು ಸ್ವೀಕರಿಸುವವನನ್ನು "ಮುಸ್ಲಿಂ" ಎಂದು ಕರೆಯುತ್ತಾರೆ. ಒಬ್ಬ ನಿಜವಾದ ಮುಸ್ಲಿಮನು ಅಲ್ಲಾಹನಿಗೆ ಸಂಪೂರ್ಣವಾಗಿ ವಿಧೇಯನಾಗಿದ್ದುಕೊಂಡು ಮನುಷ್ಯರೆಡೆಯಲ್ಲಿ ಶಾಂತಿ-ಸಮಾಧಾನ ನೆಲೆಗೊಳಿಸಲಿಕ್ಕೆ ತನ್ನ ಕೈಲಾದಷ್ಟು ಶ್ರಮಿಸುತ್ತಾನೆ. ಅದಕ್ಕೆ ಅಗತ್ಯವಿರುವ ಎಲ್ಲ ನಿಯಮ ನಿರ್ದೇಶಗಳು ಇಸ್ಲಾಮಿನಲ್ಲಿವೆ.

ಇಸ್ಲಾಮಿನ ಎಲ್ಲ ಅಧ್ಯಾಪನೆಗಳು ಮನುಷ್ಯರಿಗೆ ಪ್ರಯೋಜನಕರವೂ ಪ್ರಾಯೋಗಿಕವೂ ಆಗಿವೆ. ಅದರ ಎಲ್ಲ ತತ್ವಗಳು ವಿವೇಕಯುತವಾಗಿವೆ.

ಇಸ್ಲಾಂ ಮಾನವರೆಲ್ಲರಿಗೋಸ್ಕರವಿರುವ ಒಂದು ಸಂದೇಶವಾಗಿದೆ. ಆದ್ದರಿಂದ ಪ್ರಪಂಚದಲ್ಲಿರುವ ಎಲ್ಲ ಜನರಿಗೂ ಇಸ್ಲಾಮನ್ನು ಬೋಧಿಸಿ ಎಲ್ಲರನ್ನೂ ಪ್ರೀತಿಯಿಂದ ಅದರೆಡೆಗೆ ಆಮಂತ್ರಿಸಬೇಕಾದುದು ಮುಸ್ಲಿಮರಾದ ನಮ್ಮ ಕರ್ತವ್ಯವಾಗಿದೆ.

## ಮೂಲ ಸಿದ್ಧಾಂತ

ಅಲ್ಲಾಹನು ಏಕನು ಮತ್ತು ಮುಹಮ್ಮದ್ ಮುಸ್ತಫಾ (ಸ) ಅಲ್ಲಾಹನ ಪ್ರವಾದಿ ಎಂಬುದಾಗಿದೆ ಇಸ್ಲಾಮಿನ ಮೂಲ ಸಿದ್ಧಾಂತ. ಒಬ್ಬನು ಅಲ್ಲಾಹನಿಂದ ನಿಜವಾದ ಮುಸ್ಲಿಮನೆಂದು ಅಂಗೀಕರಿಸಲ್ಪಡಲಿಕ್ಕೆ ಕೇವಲ ಈ

ವಿಶ್ವಾಸವನ್ನು ಇಟ್ಟುಕೊಂಡರೆ ಮಾತ್ರ ಸಾಲದು; ಅಲ್ಲಾಹನನ್ನೂ ಮುಹಮ್ಮದ್ ಪೈಗಂಬರ್ (ಸ)ರವರನ್ನೂ ಪರಿಪೂರ್ಣವಾಗಿ ಅನುಸರಿಸಬೇಕಾಗಿದೆ.

## ಇಸ್ಲಾಮಿನ ಮೂಲ ವಿಶ್ವಾಸಗಳು

ಎಲ್ಲ ಮುಸ್ಲಿಮರು ಈ ಕೆಳಗಿನ ಆರು ಮೂಲ ವಿಶ್ವಾಸಗಳನ್ನು ಹೊಂದಿರಬೇಕಾಗಿದೆ. ಅವೆಂದರೆ:

1. ಅಲ್ಲಾಹನಲ್ಲಿ ವಿಶ್ವಾಸವಿಡುವುದು.
2. ಅಲ್ಲಾಹನ ದೂತರಲ್ಲಿ (ಮಲಾಯಿಕ್) ವಿಶ್ವಾಸವಿಡುವುದು.
3. ಅಲ್ಲಾಹನ ಗ್ರಂಥ (ಕಿತಾಬ್)ಗಳಲ್ಲಿ ವಿಶ್ವಾಸವಿಡುವುದು.
4. ಅಲ್ಲಾಹನ ಪ್ರವಾದಿಗಳಲ್ಲಿ ವಿಶ್ವಾಸವಿಡುವುದು.
5. ಅಂತ್ಯದಿನ – ಮರಣಾನಂತರ ಜೀವನದಲ್ಲಿ ವಿಶ್ವಾಸವಿಡುವುದು.
6. ಒಳಿತು–ಕೆಡುಕುಗಳಿಗೆ ಸಂಬಂಧಿಸಿ ಎಲ್ಲ ನಿರ್ಣಯಗಳೂ ವಿಧಿಗಳೂ ಅಲ್ಲಾಹನಿಂದ ಎಂದು ವಿಶ್ವಾಸವಿಡುವುದು.

## ಇಸ್ಲಾಮಿನ ಅನುಷ್ಠಾನ ಕರ್ಮಗಳು

ಇಸ್ಲಾಮಿನ ಪ್ರಧಾನವಾದ ಐದು ಅನುಷ್ಠಾನ ಕರ್ಮಗಳು ಈ ಕೆಳಗಿನಂತಿವೆ:

1. ಶಹಾದತ್ ಕಲಿಮ (ಸಾಕ್ಷ್ಯವಚನ)

ಅಂದರೆ أَشْهَدُ أَنْ لَا إِلٰهَ إِلَّا اللهُ وَأَشْهَدُ أَنَّ مُحَمَّدًا رَسُوْلُ اللهِ

"ಅಶ್‌ಹದು ಅ(ನ್)ಲ್ಲಾ ಇಲಾಹ ಇಲ್ಲಲ್ಲಾಹು ವ ಅಶ್‌ಹದು ಅನ್ನ ಮುಹಮ್ಮದ(ನ್)ರ್ರಸೂಲುಲ್ಲಾಹ್" (ಅಲ್ಲಾಹನ ಹೊರತು ಬೇರೆ ಯಾರೂ ಆರಾಧನೆಗೆ ಅರ್ಹರಲ್ಲವೆಂದು ನಾನು ಸಾಕ್ಷ್ಯವಹಿಸುತ್ತೇನೆ; ಮುಹಮ್ಮದ್ (ಸ) ಅಲ್ಲಾಹನ ಪ್ರವಾದಿಯಾಗಿರುವರೆಂದೂ ನಾನು ಸಾಕ್ಷ್ಯವಹಿಸುತ್ತೇನೆ) ಎಂಬ ಮೂಲಮಂತ್ರವನ್ನು, ಅರ್ಥವನ್ನು ಗ್ರಹಿಸಿಕೊಂಡು ಉಚ್ಚರಿಸಬೇಕು.

2. ದಿನಂಪ್ರತಿ ಐದು ಹೊತ್ತು ನಿರ್ದಿಷ್ಟ ಸಮಯಗಳಲ್ಲಿ ನಮಾಝ್ ಮಾಡಬೇಕು.
3. ಧನವಂತರು "ಝಕಾತ್" ಎಂಬ ಕಡ್ಡಾಯ ದಾನ ನೀಡಬೇಕು.
4. ರಮಝಾನ್ ಮಾಸದಲ್ಲಿ ಉಪವಾಸ ಮಾಡಬೇಕು.
5. ಅನುಕೂಲವಿದ್ದವನು 'ಹಜ್ಜ್' ತೀರ್ಥಾಟನೆ ಮಾಡಬೇಕು.

# 'ಸನ್ಮಾರ್ಗ'ದ ಅಪಲಾಪ

★ ಎಂ. ಪಿ. ಐ.

ಮೌದೂದಿ ಪಂಥದವರ 'ಸನ್ಮಾರ್ಗ'ವೆಂಬ ವಾರ ಪತ್ರಿಕೆ (ಸೆ. 15, 1991)ಯ ಪ್ರಶ್ನೋತ್ತರ ವಿಭಾಗ ದಲ್ಲಿ ಪ್ರಕಟವಾದ ಒಂದು ಪ್ರಶ್ನೆ ಮತ್ತು ಮೌದೂದಿ ವಕ್ತಾರ ಮುಜೀಬ್ ಅದಕ್ಕೆ ನೀಡಿದ ಉತ್ತರ ಈ ಕೆಳಗಿನಂತಿದೆ:

ಪ್ರಶ್ನೆ: ಖಾದಿಯಾನಿಗಳೆಂದರೆ ಯಾರು? ಇವರ ಗುರು ಯಾರು? ಇವರ ತತ್ವಗಳೇನು?

ಉತ್ತರ: ಗುಲಾಮ್ ಅಹ್ಮದ್ ಕಾದಿಯಾನಿಯ ಅನುಯಾ ಯಿಗಳನ್ನು ಕಾದಿಯಾನಿಗಳೆಂದು ಹೇಳುತ್ತಾರೆ. ಗುಲಾಂ ಅಹ್ಮದ್ ಕಾದಿಯಾನಿಯನ್ನು ಇವರು ಪ್ರವಾದಿ ಎಂದು ನಂಬುತ್ತಾರೆ. ಅವರ ನಿಧನಾನಂತರ ಇವರು ವಿವಿಧ 'ಖಲೀಫಾ'ಗಳ ಹಿಂಬಾಲಕರಾಗಿದ್ದಾರೆ. ಇವರ ತತ್ವಗಳ ಬಗ್ಗೆ ಹೇಳುವುದಾದರೆ ಸ್ವತಃ ಗುಲಾಮ್ ಅಹ್ಮದ್‌ರ ಜೀವನಾವಧಿಯಲ್ಲೇ ಇವರ ತತ್ವಗಳು ಅನೇಕ ಸಲ ಬದಲಾಗಿವೆ. ಪ್ರವಾದಿ ಮುಹಮ್ಮದ್ (ಸ) ಅಂತಿಮ ಪ್ರವಾದಿಯೆಂಬ ಮತ್ತು ಲೋಕಾಂತ್ಯದ ವರೆಗೆ ಎಲ್ಲ ಮಾನವರ ವಿಮೋಚನೆಗೆ ಪ್ರವಾದಿ ಮುಹಮ್ಮದ್ (ಸ) ತೋರಿದ ಸನ್ಮಾರ್ಗವೇ ಸಾಕು ಎಂಬ ಮೂಲಭೂತ ಸತ್ಯವನ್ನು ಇವರ ನಿರಾಕರಿಸುತ್ತಾರೆ. ಆದ್ದರಿಂದ ಇವರು ಮುಸ್ಲಿಮರಂತೆ ಹೆಸರಿಟ್ಟುಕೊಂಡರೂ ಮುಸ್ಲಿ ಮರಲ್ಲ ಎಂಬುದು ಎಲ್ಲ ಮುಸಲ್ಮಾನರ ಒಮ್ಮತದ ಅಭಿಪ್ರಾಯವಾಗಿದೆ. ಇದೊಂದು ಪಥಭ್ರಷ್ಟ ಪಂಗಡ ವೆಂಬ ಬಗ್ಗೆಯೂ ಮುಸ್ಲಿಮರ ಎಲ್ಲ ಗುಂಪುಗಳ ಮಧ್ಯೆ ಒಮ್ಮತವಿದೆ.

'ಸನ್ಮಾರ್ಗ' ಪತ್ರಿಕೆಯಲ್ಲಿ ಇಂತಹ ಪ್ರಶ್ನೆಗಳೂ ಸಾಮಾನ್ಯ ಇದೇ ತರಹದ ಉತ್ತರಗಳೂ ಆಗಾಗ ಪ್ರಕಟ ವಾಗುತ್ತಿರುತ್ತವೆ. ಮೌದೂದಿಗಳ ಕಾಲಕ್ಕೆ ತಕ್ಕಂತೆ ಕೋಲಕಟ್ಟುವ ಹಾಗೂ ತಲೆಬುಡವಿಲ್ಲದ ಆದರ್ಶಗಳಂತೆ ಪ್ರಶ್ನೋತ್ತರಗಳು ಸಹ ಅತ್ಯಂತ ಕಳಪೆ ಮಟ್ಟದ್ದೂ ಪ್ರಶ್ನೆಗಳೊಂದಿಗೆ ತಾಳೆಯಿಲ್ಲದ ಉತ್ತರಗಳಿಂದ ಕೂಡಿ ದ್ದೂ ಆಗಿರುತ್ತವೆ. ಪ್ರಶ್ನೆಯಲ್ಲಿ ಖಾದಿಯಾನಿಗಳೆಂದರೆ ಯಾರೆಂದು ಕೇಳಲಾಗಿದೆ. ಗುಲಾಂ ಅಹ್ಮದ್ ಕಾದಿ ಯಾನಿಯ ಅನುಯಾಯಿಗಳನ್ನು ಕಾದಿಯಾನಿಗಳೆಂದು ಹೇಳುತ್ತಾರೆಂಬ ಉತ್ತರ ನೀಡಲಾಗಿದೆ. ಇದು ಸರಿಯಲ್ಲ. ಖಾದಿಯಾನಿಗಳೆಂದರೆ ಖಾದಿಯಾನ್ ಊರಿನ ನಿವಾಸಿಗಳು. ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ (ಅ) ಅವರನ್ನು ಇಸ್ಲಾಂ ಧರ್ಮದ ಉದ್ಧಾರಕ (ಇಮಾಂ ಮಹ್‌ದಿ) ಎಂದು ನಂಬುವವರನ್ನು ಅಹ್ಮದಿಯಾ ಮುಸ್ಲಿಮರು ಎಂದು ಹೇಳುತ್ತಾರೆ. 'ಸನ್ಮಾರ್ಗ'ವು ಅಹ್ಮದಿಯಾ ಜಮಾ ಅತಿಗೆ ಸೇರಿದ ಮುಸ್ಲಿಮರನ್ನೇ "ಕಾದಿಯಾನಿಗಳು" ಎಂದು ಹೇಳಿದ್ದಾದರೆ, ಹ॥ ಮಿರ್ಝಾ ಸಾಹೇಬರ ನಿಧನಾನಂತರ "ಇವರು ವಿವಿಧ ಖಲೀಫಗಳ ಹಿಂಬಾಲಕ ರಾಗಿದ್ದಾರೆ" ಎಂದು ಉತ್ತರದಲ್ಲಿ ಹೇಳಿರುವುದು ಸರಿ ಯಲ್ಲ. ಹಾಗೆ ನೋಡಿದರೆ 'ಸನ್ಮಾರ್ಗ'ದ ಈ ವಾಕ್ಯಕ್ಕೆ ಸ್ಪಷ್ಟವಾದ ಅರ್ಥವೇ ಇಲ್ಲ. ಅಹ್ಮದಿಯಾ ಮುಸ್ಲಿಂ ಜಮಾಅತಿನವರು ವಿವಿಧ ಖಲೀಫರುಗಳ ಹಿಂಬಾಲಕರಲ್ಲ.

ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ರವರ ನಿಧನಾ ನಂತರ ಸ್ಥಾಪನೆಗೊಂಡ ಖಿಲಾಫತ್ (ಮುಸಲ್ಮಾನರ ಜಾಗತಿಕ ನೇತೃತ್ವ) ಹಲವಾರು ಹಂತ ಗಳನ್ನು ದಾಟಿ ಬಂದು ಕೊನೆಗೆ ತುರ್ಕಿ ಖಿಲಾಫತ್‌ನೊಂ ದಿಗೆ ಕೊನೆಗೊಂಡಿತು. ಹಝ್ರತ್ ಅಬೂಬಕರ್, ಹ। ಉಮರ್, ಹ। ಉಸ್ಮಾನ್, ಹ। ಅಲೀ (ರ. ಅ.) ಇವರು ಹಝ್ರತ್ ಮುಹಮ್ಮದ್ ಪೈಗಂಬರರ ನಿಜ

ವಾದ ಪ್ರತಿನಿಧಿತ್ವ ವಹಿಸಿಕೊಂಡು ಜಾಗತಿಕ ಮುಸ್ಲಿಮರಿಗೆ ನೇತೃತ್ವ ನೀಡಿದರು. ಆದರ ನಂತರ ಖಿಲಾಫತ್‌ನ ಆಧ್ಯಾತ್ಮಿಕ ಗುಣಮಟ್ಟ ಕುಂದುತ್ತಾ ಬಂತು. ಆದರೂ ನಾಮ ಮಾತ್ರಕ್ಕಾದರೂ 1922ರ ವರೆಗೆ ಮುಸಲ್ಮಾನರಿಗೆ ಖಲೀಫ ಇದ್ದರು. ನಿಜಾರ್ಥವಲ್ಲಿ ಖಲೀಫ ಅಂದರೆ, ಜಗತ್ತಿನಾದ್ಯಂತ ಇರುವ ಸಮಸ್ತ ವಿಶ್ವಾಸಿಗಳಿಗೆ ನೇತೃತ್ವ ನೀಡುವ ಏಕಮಾತ್ರ ಮುಖಂಡ. ಈ ಖಿಲಾಫತ್ ವ್ಯವಸ್ಥೆಯು ಇಸ್ಲಾಂ ಧರ್ಮದ ಒಂದು ವೈಶಿಷ್ಟ್ಯವಾಗಿದೆ. ಒಂದು ಅನಿವಾರ್ಯತೆ ಕೂಡ. ಈ ರೀತಿಯ ನೇತೃತ್ವ ಇಲ್ಲದೆ ಮುಸ್ಲಿಮರು ಒಂದು ಸುಸಂಘಟಿತ ಜಮಾಅತ್ ಆಗಿರಲು ಸಾಧ್ಯವಿಲ್ಲ. ಆದ್ದರಿಂದಲೇ ಖಲೀಫ ಹಝ್ರತ್ ಉಮರ್ (ರ) ಹೀಗೆ ನುಡಿದಿದ್ದರು:

لا اسلام الا بالجماعة ولا جماعة الا بالامارة ولا امارة الا بالاطاعة

"ಜಮಾಅತ್ ಇಲ್ಲದೆ ಇಸ್ಲಾಂ ಇಲ್ಲ, ಇಮಾರತ್ (ಆಧ್ಯಾತ್ಮಿಕ ನೇತೃತ್ವ) ಇಲ್ಲದೆ ಜಮಾಅತ್ ಇಲ್ಲ. ಅನುಸರಣೆಯಿಲ್ಲದೆ ಇಮಾರತ್ ಇಲ್ಲ."

ಖಿಲಾಫತ್ ವ್ಯವಸ್ಥೆ ಇಲ್ಲವಾದರೆ, ಜನರ ಒಂದು ಗುಂಪು ಅದು ಎಷ್ಟು ದೊಡ್ಡ ಗುಂಪಾಗಿದ್ದರೂ ಅದನ್ನು ಒಂದು ಜಮಾಅತ್ ಎಂದು ಹೇಳಲು ಸಾಧ್ಯವಿಲ್ಲ. ಪ್ರಪಂಚದಲ್ಲಿರುವ ಎಲ್ಲ ವಿಶ್ವಾಸಿಗಳಿಗೂ ಒಬ್ಬನೇ ಧಾರ್ಮಿಕ ನೇತಾರ ಇರುವಾಗ ಮಾತ್ರ ಅವರನ್ನು ಖಲೀಫ ಎಂದು ಕರೆಯಲಾಗುತ್ತದೆ. ಇದೇ ನಿಜವಾದ ಖಿಲಾಫತ್. ಈ ರೀತಿ ನೇತೃತ್ವವಿಲ್ಲದ ಜನರ ಗುಂಪನ್ನು ಜಮಾಅತ್ ಎಂದು ಕರೆಯುವುದಾಗಲೀ ಅಂಥವರು 'ಜಮಾಅತ್' ಎಂದು ಹೆಸರಿಟ್ಟುಕೊಂಡರೂ ಕೂಡ ಅವರು ನಿಜವಾದ ಇಸ್ಲಾಮಿಕ ಜಮಾಅತ್ ಆಗಿರಲು ಸಾಧ್ಯವಾಗಲೀ ಇಲ್ಲವೆಂದು ಹಝ್ರತ್ ಉಮರ್ (ರ) ಅವರ, ಮೇಲೆ ಉದ್ಧರಿಸಲಾದ ನುಡಿಯಿಂದ ವ್ಯಕ್ತವಾಗುತ್ತದೆ.

ಹ। ಮುಹಮ್ಮದ್ ಪೈಗಂಬರರ ಭವಿಷ್ಯವಾಣಿಯ ಪ್ರಕಾರ ಮುಸ್ಲಿಂ ಸಮುದಾಯದಲ್ಲಿ ಈ ಕಳೆದ 13 ಶತಮಾನಗಳಲ್ಲಿ ಹಲವು ರೀತಿಯ ಖಲೀಫರುಗಳು ಆಗಿಹೋದರು. ಭವಿಷ್ಯವಾಣಿಯಂತೆಯೇ ಈಗ ಇಮಾಂ ಮಹ್‌ದಿಯವರ ಮೂಲಕ ನಿಜವಾದ ಖಿಲಾಫತ್ ವ್ಯವಸ್ಥೆ ಪುನಃಸ್ಥಾಪಿತಗೊಂಡಿದೆ. ಲೋಕದೆಲ್ಲೆಡೆ ಇರುವ ಸಮಸ್ತ ಅಹ್ಮದಿಯಾ ಮುಸ್ಲಿಮರು ಒಬ್ಬರೇ ಇಮಾಮರ ನೇತೃತ್ವದಲ್ಲಿ ಸಂಘಟಿತರಾಗಿದ್ದಾರೆ. ಮುಸ್ಲಿಂ ಸಮುದಾಯಕ್ಕೆ ಅನಿವಾರ್ಯವೆನಿಸಿದ ಈ ರೀತಿಯ ಖಿಲಾಫತ್ ವ್ಯವಸ್ಥೆ ಅಹ್ಮದಿಯಾ ಜಮಾಅತಿಗೆ ಅಲ್ಲದೆ ಪ್ರಪಂಚದಲ್ಲಿ ಇತರ ಯಾವುದೇ ಮುಸ್ಲಿಂ ಪಂಗಡದವರಿಗೂ ಇರುವುದಿಲ್ಲ. ಮೌದೂದಿಗಳಿಗೂ ಇಲ್ಲ. ಅಹ್ಮದಿಯಾ ಜಮಾಅತ್ ನಿಜವಾದ ಮುಸ್ಲಿಂ ಜಮಾಅತ್ ಆಗಿದೆ ಎಂಬುದಕ್ಕೆ ಇದು ಸಹ ಒಂದು ಪುರಾವೆಯಾಗಿದೆ. 'ಸನ್ಮಾರ್ಗ' ಹೇಳುವಂತೆ ಅಹ್ಮದೀಯರು ವಿವಿಧ ಖಲೀಫರುಗಳ ಹಿಂಬಾಲಕರಲ್ಲ.

ಅಹ್ಮದೀಯರ ತತ್ವಗಳೇನು? ಎಂಬ ಪ್ರಶ್ನೆಗೆ ಉತ್ತರಕಾರ ಸರಿಯಾದ ಉತ್ತರವನ್ನು ನೀಡದೆ ನಕಾರಾತ್ಮಕ ಶೈಲಿಯಲ್ಲಿ ಉತ್ತರ ನೀಡಿದ್ದಾರೆ. "ಪ್ರವಾದಿ ಮುಹಮ್ಮದ್ (ಸ) ಅಂತಿಮ ಪ್ರವಾದಿಯೆಂಬ ಮತ್ತು ಲೋಕಾಂತ್ಯದ ವರೆಗೆ ಎಲ್ಲ ಮಾನವರ ವಿಮೋಚನೆಗೆ ಮುಹಮ್ಮದ್ (ಸ) ತೋರಿದ ಸನ್ಮಾರ್ಗವೇ ಸಾಕು ಎಂಬ ಮೂಲಭೂತ ಸತ್ಯವನ್ನು ಇವರು ನಿರಾಕರಿಸುತ್ತಾರೆ" ಎಂದು ಹೇಳುತ್ತಾ ಇದೇ ಅಹ್ಮದೀಯರ ತತ್ವಗಳು (?) ಎಂಬಂತೆ ಉತ್ತರಿಸಿದ್ದಾರೆ! ಪ್ರಶ್ನೆಗೂ ಉತ್ತರಕ್ಕೂ ಯಾವುದೇ ಸಂಬಂಧವಿಲ್ಲದಿರುವುದನ್ನು ಇಲ್ಲಿ ಗಮನಿಸಬಹುದು. ಕುಟಿಲತೆಯ ಮಾರ್ಗದಿಂದ ಜನರನ್ನು ಮೋಸಗೊಳಿಸುವುದು ಮೌದೂದಿಗಳ ಜಾಯಮಾನವಷ್ಟೇ. ತಮ್ಮ ವಾಡಿಕೆಯ ವಕ್ರ ದಾರಿಯನ್ನು ಅವರು ಇಲ್ಲಿಯೂ ಬಳಸಿದ್ದಾರೆ.

ಲೋಕಾಂತ್ಯದ ವರೆಗೆ ಸಮಸ್ತ ಮಾನವ ಜನಾಂಗದ ಮೋಕ್ಷ ಮಾರ್ಗವು ಹ। ಮುಹಮ್ಮದ್ ಪೈಗಂಬರ್ (ಸ) ಪ್ರಬೋಧಿಸಿದ ಇಸ್ಲಾಂ ಧರ್ಮವೇ ಆಗಿದೆಯೆಂಬ ಪರಮ ಸತ್ಯವನ್ನು ಸುವ್ಯವಸ್ಥಿತವಾದ ರೀತಿಯಲ್ಲಿ ಸಮಸ್ತ ಲೋಕಕ್ಕೂ ಸಾರುತ್ತಿರುವ ಏಕಮಾತ್ರ ಜಮಾಅತ್ ಅಹ್ಮದಿಯಾ ಜಮಾಅತ್ ಆಗಿದೆ. ಇಮಾಂ

ಮಹ್‌ದಿಯ ಆವಿರ್ಭಾವದ ಉದ್ದೇಶವೇ ಈ ತತ್ವವನ್ನು ಲೋಕದ ಜನರಿಗೆ ತಿಳಿಸಿಕೊಡುವುದಾಗಿದೆ. ಈ ವಿಚಾರ 'ಸನ್ಮಾರ್ಗ'ದವರಿಗೆ ತಿಳಿಯದೆ ಇರಲಾರದು. ಆದರೂ ಆತ್ಮವಂಚನೆ ಮಾಡಿ ಸುಳ್ಳು ಹೇಳುತ್ತಾ ಜನರನ್ನು ತಪ್ಪುದಾರಿಗೆಳೆಯಲು ಯತ್ನಿಸುತ್ತಿದ್ದಾರೆ. ಹ। ಮುಹಮ್ಮದ್ ಪೈಗಂಬರರು ತಂದಿರುವ ಸಂದೇಶವನ್ನು ಪ್ರಪಂಚದಲ್ಲಿ ಸಾರುವುದಕ್ಕಾಗಿ ಅಹ್ಮದೀಯರು ತಮ್ಮ ಸರ್ವಸ್ವವನ್ನು ಮೀಸಲಿಟ್ಟಿದ್ದಾರೆ. ಅದಕ್ಕಾಗಿ ಅವರು ಜಗತ್ತಿನ ಮೂಲೆ ಮೂಲೆಗಳಲ್ಲೂ ಅಹೋರಾತ್ರಿ ಪರಿಶ್ರಮಿಸುತ್ತಿದ್ದಾರೆ. ಅಂತಹ ಒಂದು ಸಂಘಟನೆಯ ಕುರಿತು 'ಸನ್ಮಾರ್ಗ'ದವರು, "ಎಲ್ಲ ಮಾನವರ ವಿಮೋಚನೆಗೆ ಪ್ರವಾದಿ ಮುಹಮ್ಮದ್(ಸ) ತೋರಿದ ಸನ್ಮಾರ್ಗವೇ ಸಾಕು ಎಂಬ ಮೂಲಭೂತ ಸತ್ಯವನ್ನು ಇವರು ನಿರಾಕರಿಸುತ್ತಾರೆ" ಎಂಬುದಾಗಿ ನಗ್ನವಾದ ಸುಳ್ಳು ಹೇಳಿರುತ್ತಾರೆ. ಸುಳ್ಳು ಹೇಳುವುದನ್ನೇ ಅಭ್ಯಾಸ ಮಾಡಿಕೊಂಡವರಿಗೆ ಇದೊಂದು ದೊಡ್ಡ ವಿಷಯವೇ ಅಲ್ಲವಲ್ಲ.

ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್(ಅ) ಅವರು ತನ್ನ ಜಮಾಅತ್ ಸದಸ್ಯರಿಗೆ ಉಪದೇಶದ ರೂಪದಲ್ಲಿ ಬರೆದ "ಕಿಶ್ತೀ ನೂಹ್" ಎಂಬ ಗ್ರಂಥದಿಂದ ಒಂದು ಭಾಗವನ್ನು ನಾನು ಅಲ್ಲಿ ಉದ್ಧರಿಸುತ್ತೇನೆ:

> "ನೀವು ಪವಿತ್ರ ಖುರ್‌ಆನನ್ನು ಒಂದು ಉಪೇಕ್ಷಿತ ಗ್ರಂಥದಂತೆ ಎಂದಿಗೂ ಕೈಬಿಡಬಾರದೆಂಬುದೇ ನಿಮಗೆ ನಾನು ನೀಡುತ್ತಿರುವ ಅತಿ ಪ್ರಧಾನವಾದೊಂದು ಉಪದೇಶ. ಯಾಕೆಂದರೆ, ನಿಮ್ಮ ಜೀವನದ ಸಮಸ್ತ ಮಾರ್ಗಗಳೂ ಅದರಲ್ಲಡಕವಾಗಿವೆ. ಪವಿತ್ರ ಖುರ್‌ಆನನ್ನು ಮಹತ್ವಪಡಿಸುವವನು ಪರಲೋಕದಲ್ಲಿ ಆದರಿಸಲ್ಪಡುವನು.......ಈಗ ಮಾನವ ಕುಲದ ಮೋಕ್ಷಕ್ಕೆ ದಾರಿದೀಪವಾಗಿ ಪವಿತ್ರ ಖುರ್‌ಆನ್ ಅಲ್ಲದೆ ಬೇರಾವ ಗ್ರಂಥವೂ ಇರುವುದಿಲ್ಲ. ಆದಂ ಸಂತತಿಗಳಿಗೆ ಹ॥ ಮುಹಮ್ಮದ್ ಮುಸ್ತಫಾ(ಸ)ರ ಹೊರತು ಮತ್ತಾರೂ ಶಿಫಾರಸು ಮಾಡುವವರು ಇರುವುದಿಲ್ಲ. ಆದುದರಿಂದ ನೀವು ಆ ಪುಣ್ಯಾತ್ಮರೊಂದಿಗೆ ಪ್ರಾಮಾಣಿಕವಾದ ಆತ್ಮೀಯ ಸಂಬಂಧವನ್ನು ಬೆಳೆಸಲು ಪ್ರಯತ್ನಿಸಿರಿ. ಲೋಕ ಗುರುವಾದ ಹ॥ ಮುಹಮ್ಮದ್ ಮುಸ್ತಫಾ (ಸ) ಅವರಿಗಿಂತ ಹೆಚ್ಚಿನ ಮಹತ್ವವನ್ನು ಲೋಕದಲ್ಲಿ ಮತ್ತಾರಿಗೂ ನೀವು ನೀಡಬಾರದು. ಹಾಗಾದರೆ ಮಾತ್ರವೇ ನಿಮಗೆ ಅಲ್ಲಾಹನ ಬಳಿ ಸ್ವೀಕೃತಿ ಮತ್ತು ಮೋಕ್ಷ ಲಭಿಸುವುದು."
>
> "ನನ್ನ ಈ ಆಧ್ಯಾತ್ಮಿಕ ಸಂಘಟನೆಯೊಂದಿಗೆ ಸಂಬಂಧ ಹೊಂದಿರುವ ಜನರೇ, ......ನೀವು ಅಲ್ಲಾಹನ ಉಪದೇಶಕ್ಕೂ ಪವಿತ್ರ ಖುರ್‌ಆನಿನ ಮಾರ್ಗದರ್ಶನಕ್ಕೂ ಮೀರಿ ಒಂದು ಹೆಜ್ಜೆಯನ್ನಾದರೂ ಇಡದಿರುವಂತೆ ಎಚ್ಚರಿಕೆ ವಹಿಸಿರಿ. ಪವಿತ್ರ ಖುರ್‌ಆನಿನ ಏಳುನೂರು ಆಜ್ಞೆಗಳಲ್ಲಿ ಒಂದನ್ನಾದರೂ – ಒಂದು ಚಿಕ್ಕ ನಿರ್ದೇಶವನ್ನಾದರೂ – ಉಲ್ಲಂಘಿಸುವಾತನು ಮೋಕ್ಷ ಮಾರ್ಗವನ್ನು ತನ್ನ ಸ್ವಂತ ಕೈಗಳಿಂದಲೇ ಮುಚ್ಚುವವನಾಗಿದ್ದಾನೆಂದು ನಾನು ನಿಮ್ಮೊಡನೆ ಸತ್ಯಪ್ರಮಾಣ ಮಾಡಿ ಹೇಳುತ್ತೇನೆ. ಯಥಾರ್ಥವೂ ಪರಿಪೂರ್ಣವೂ ಆದ ಮೋಕ್ಷ ಮಾರ್ಗವನ್ನು ತೆರೆದಿಟ್ಟಿರುವ ಗ್ರಂಥ ಪವಿತ್ರ ಖುರ್‌ಆನ್ ಒಂದು ಮಾತ್ರವಾಗಿದೆ. ಉಳಿದವುಗಳು ಅದರ ನೆರಳಿನಂತೆ ಇರುವುವು. ಆದುದರಿಂದ ಪವಿತ್ರ ಖುರ್‌ಆನನ್ನು ನೀವು ಭಕ್ತಿಯಿಂದಲೂ ಶ್ರದ್ಧೆಯಿಂದಲೂ ಪಾರಾಯಣ ಮಾಡಿರಿ. ಲೋಕದ ಮತ್ತಾವ ವಸ್ತುವಿನಲ್ಲೂ ನಿಮಗೆ ಇಲ್ಲದಿರುವಷ್ಟು ಪ್ರೀತಿ ಪವಿತ್ರ ಖುರ್‌ಆನಿನಲ್ಲಿ ನಿಮಗೆ ಉಂಟಾಗಲಿ." (ಕಿಶ್ತೀ ನೂಹ್)

ಅಹ್ಮದೀಯರು ಹ। ಮುಹಮ್ಮದ್ ಮುಸ್ತಫಾ (ಸ) ಪ್ರಬೋಧಿಸಿದ ಇಸ್ಲಾಂ ಧರ್ಮ ತತ್ವಗಳಲ್ಲಿ ಅಚಂಚಲವಾದ, ಸುದೃಢವಾದ ವಿಶ್ವಾಸ ಹೊಂದಿದವರಾಗಿದ್ದಾರೆ. ಒಬ್ಬನೇ ಧಾರ್ಮಿಕ ಮುಖಂಡ (ಖಲೀಫ)ರ ಕೈಕೆಳಗೆ ಸುಸಂಘಟಿತರಾಗಿದ್ದು ಲೋಕದ ಜನರಿಗೆ ಇಸ್ಲಾಂ ಧರ್ಮದ ಮಹತ್ವವನ್ನು ಸುವ್ಯವಸ್ಥಿತವಾದ ರೀತಿಯಲ್ಲಿ ಪ್ರಬೋಧಿಸುತ್ತಿರುವ ಒಂದು ಸಂಘಟನೆ

ಯಾಗಿದೆ ಅಹ್ಮದಿಯಾ ಜಮಾಅತ್. ಅಹ್ಮದೀಯರು ಎಂದಿಗೂ ತಮ್ಮ ತತ್ವ ಸಿದ್ಧಾಂತಗಳನ್ನು ಕಾಲಕ್ಕೆ ತಕ್ಕಂತೆ ಬದಲಾವಣೆ ಮಾಡುವವರಲ್ಲ. ತಮ್ಮ ಅನುಕೂಲಕ್ಕೆ ಹೊಂದುವಂತೆ ಧಾರ್ಮಿಕ ಸಿದ್ಧಾಂತಗಳನ್ನು ಬದಲಾಯಿಸುವವರು ಮೌದೂದಿಗಳಾಗಿದ್ದಾರೆಂಬುದು ಎಲ್ಲರಿಗೂ ತಿಳಿದಿರುವ ಒಂದು ಸತ್ಯಸಂಗತಿಯಾಗಿದೆ. ಉದಾಹರಣೆಗೆ "ಜಮಾಅತೆ ಇಸ್ಲಾಮಿ ಸಂವಿಧಾನ"ದಲ್ಲಿ ಈ ರೀತಿ ಹೇಳಲಾಗಿದೆ:

"ದೈವೀಕವಲ್ಲದ ಯಾವುದಾದರೂ ಆಡಳಿತ ಕ್ರಮದಲ್ಲಿ ಯಾವುದಾದರೂ ಉನ್ನತ ಹುದ್ದೆಯನ್ನು ವಹಿಸುತ್ತಿದ್ದರೆ, ಅದರ ಶಾಸನ ಸಭೆಯ ಸದಸ್ಯನಾಗಿದ್ದರೆ, ಅದರ ನ್ಯಾಯಾಂಗದಲ್ಲಿ ನ್ಯಾಯಾಧೀಶನ ಸ್ಥಾನದಲ್ಲಿ ನೇಮಕಗೊಂಡಿದ್ದರೆ ಆ ಸ್ಥಾನವನ್ನು ತೊರೆಯುವುದು."

ಇದು ಜಮಾಅತೆ ಇಸ್ಲಾಮಿ ಸಂವಿಧಾನದಲ್ಲಿ ಹೇಳಲಾದ ಅವರ ಹೊಣೆಗಾರಿಕೆಯಾಗಿದೆ. ಆದರೆ, ಮೇಲಿನ ತತ್ವವನ್ನು ಅವರು ಸಂಪೂರ್ಣ ಬದಲಾಯಿಸಿದ್ದಾರೆಂದು ಜಮಾಅತೆ ಇಸ್ಲಾಮಿಗಳ ಇಂದಿನ ಆದರ್ಶಗಳಿಂದ ತಿಳಿದುಬರುತ್ತದೆ. ಇದೇ ರೀತಿ ಅವರು ತಮ್ಮ ಪ್ರತಿಯೊಂದು ಆದರ್ಶದಲ್ಲೂ ಆಗಾಗ ಬದಲಾವಣೆ ಮಾಡುತ್ತಿರುತ್ತಾರೆ.

ಚುನಾವಣೆ, ಮತದಾನ ಇತ್ಯಾದಿಗಳ ಕುರಿತು ಮೌದೂದಿ ಸಾಹೇಬ್ ಹೇಳುವುದನ್ನು ನೋಡಿರಿ:

"ಇಂದು ವಿಧಾನ ಸಭೆ ಇತ್ಯಾದಿಗಳಲ್ಲಿ ಸದಸ್ಯನಾಗುವುದು ಹರಾಂ (ನಿಷಿದ್ಧ) ಆಗಿದೆ. ಅವರಿಗೆ ಓಟು ನೀಡುವುದು ಕೂಡಾ ಹರಾಂ. ಉಮೇದ್ವಾರನಾಗಿ ನಿಲ್ಲುವವರನ್ನು, ಅವರು ಇಂದಿನ ಚುನಾವಣಾ ವ್ಯವಸ್ಥೆಯ ಆಧಾರದಲ್ಲಿ ನಿಯಮ ನಿರ್ಮಾಣ ಮಾಡಲಿಕ್ಕೂ ರೂಢಿಯಲ್ಲಿರುವ ಕಾನೂನುಗಳಿಗೆ ಬೆಂಬಲ ನೀಡಲಿಕ್ಕೋ ನಾವು ಅವರನ್ನು ಅಭಿಪ್ರಾಯಪಟ್ಟು ಕಳುಹಿಸುತ್ತೇವೆ ಎಂಬುದೇ ಮತದಾನದ ಅರ್ಥವಾಗಿದೆ. ಅದು ಏಕದೇವ ವಿಶ್ವಾಸಕ್ಕೆ ಸಂಪೂರ್ಣ ವಿರುದ್ಧವಾಗಿರುತ್ತದೆ." (ರಸಾಯಿಲ್ ವ ಮಸಾಯಿಲ್)

ಇದಕ್ಕೆ ಅನುಗುಣವಾಗಿ ಮೌದೂದಿ ಪತ್ರಿಕೆ 'ಸನ್ಮಾರ್ಗ' ಫೆಬ್ರವರಿ 3, 1985ರ ಸಂಚಿಕೆಯಲ್ಲಿ, "ಚುನಾವಣೆಗಳಲ್ಲಿ ಮಾಡಲಾಗುವ ಮತದಾನವೂ ಬೈಅತ್‌ಗೆ ಸಮಾನವಾಗಿದೆ" ಎಂದು ಬರೆದು ಒಂದು ತಿಂಗಳು ಕಳೆಯುವಷ್ಟರಲ್ಲೇ ಅದು ಏನು ಹೇಳಿತೆಂದು ನೋಡಿರಿ:

"1985ರ ಫೆಬ್ರವರಿಯಲ್ಲಿ ಸೇರಿದ ಜಮಾಅತ್ ಕೇಂದ್ರ ಸಲಹಾ ಮಂಡಳಿಯು, ಜಮಾಅತ್ ಸದಸ್ಯರು ಪಾರ್ಲಿಮೆಂಟ್ ಮತ್ತು ಎಸೆಂಬ್ಲಿ ಚುನಾವಣೆಗಳಲ್ಲಿ ಕೆಲವು ಶರ್ತಗಳನ್ನು ಪಾಲಿಸಿ ತಮ್ಮ ಮತ ಚಲಾಯಿಸಬಹುದೆಂದು ತೀರ್ಮಾನಿಸಿದೆ. ಜಮಾಅತ್‌ನ ಪ್ರಸ್ತುತ ಉದ್ದೇಶಗಳೊಂದಿಗೆ ಸಹಮತವಿರುವ ಉಮೇದ್ವಾರನು ಮಾತ್ರ ಅವನು ಮುಸಲ್ಮಾನನಾಗಿರಲಿ, ಮುಸ್ಲಿಮೇತರನಾಗಿರಲಿ – ನಮ್ಮ ಮತ ಪಡೆಯಲು ಅರ್ಹನು." ('ಸನ್ಮಾರ್ಗ' ಮಾರ್ಚ್ 3, 1985)

ಪಾಕಿಸ್ಥಾನದಲ್ಲಿ ಬೇನಜೀರ್ ಭುಟ್ಟೋ ಅಧಿಕಾರಕ್ಕೆ ಬಂದಾಗ, ಮಹಿಳೆಯರು ಆಡಳಿತ ನಡೆಸುವುದು ಇಸ್ಲಾಮಿಕ ನೀತಿಗೆ ವಿರುದ್ಧವೆಂದು ಹೇಳಿ ಅಲ್ಲಿನ ಜಮಾತೆ ಇಸ್ಲಾಮಿಗಳು ಅವರನ್ನು ವಿರೋಧಿಸಿದರು. ಆದರೆ ಬಾಂಗ್ಲಾದೇಶದಲ್ಲಿ ಬೇಗಂ ಖಾಲಿದಾ ಜಿಯಾರನ್ನು ಅಲ್ಲಿನ ಜಮಾತೆ ಇಸ್ಲಾಮಿಗಳು ಬೆಂಬಲಿಸಿದ್ದಾರೆ. ಬೇಗಂ ಜಿಯಾರನ್ನು ಬೆಂಬಲಿಸುವಾಗ, ಮಹಿಳೆಯರು ಆಡಳಿತ ನಡೆಸಬಾರದೆಂಬ ಇಸ್ಲಾಮಿಕ ಆದರ್ಶವನ್ನು ಅವರ ಅನುಕೂಲಕ್ಕಾಗಿ ಗಾಳಿಗೆ ತೂರಿಬಿಟ್ಟರು.

ಜಮಾತೆ ಇಸ್ಲಾಮಿ ಪಂಥವನ್ನು ಸ್ಥಾಪಿಸಿದ ಮೌಲಾನಾ ಮೌದೂದಿಯವರು – ಇಸ್ಲಾಮಿಕ ನಿಯಮದ ಪ್ರಕಾರ ಮುಸ್ಲಿಮರು ಫೋಟೋ ತೆಗೆಸಬಾರದು ಎಂದು ಆದೇಶ ನೀಡಿದರು, ಆದರೆ, ಇಂದಿನ ಜಮಾತೆ ಇಸ್ಲಾಮಿಗಳು ಈ ತತ್ವವನ್ನು ಬದಲಾವಣೆ ಮಾಡಿ ಅವರಿಗೆ ಅನುಕೂಲದ ಹಾದಿ ಹಿಡಿದಿದ್ದಾರೆ. ಈ ಕುರಿತು ವಾಚಕರೊಬ್ಬರ ಪ್ರಶ್ನೆಗೆ 'ಸನ್ಮಾರ್ಗ' ನೀಡಿದ ಉತ್ತರದಲ್ಲಿ "ಫೋಟೊ ತೆಗೆಸುವುದು ನಿಷಿದ್ಧವೋ

ಅಲ್ಲವೋ ಎಂಬ ಬಗ್ಗೆ ಇಸ್ಲಾಮಿ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದೆ......ಜಮಾಅತೆ ಇಸ್ಲಾಮಿ ಇಂತಹ ಭಿನ್ನಾಭಿಪ್ರಾಯವಿರುವ ವಿಷಯದಲ್ಲಿ ಮೌಲಾನಾ ಮೌದೂದಿಯವರ ಅಭಿಪ್ರಾಯವನ್ನಾಗಲೀ ಅಥವಾ ಇನ್ನಾವುದೇ ಧರ್ಮ ಪಂಡಿತರ ಅಭಿಪ್ರಾಯವನ್ನಾಗಲೀ ತನ್ನ ಸದಸ್ಯರ ಮತ್ತು ಕಾರ್ಯಕರ್ತರ ಮೇಲೆ ಹೇರುವುದಿಲ್ಲ" ಎಂಬುದಾಗಿ ಯಾವುದೇ ಸಂಕೋಚವಿಲ್ಲದೆ ಬರೆದಿದ್ದಾರೆ ('ಸನ್ಮಾರ್ಗ' 11-8-1991). ಫೋಟೋ ತೆಗೆಸುವುದು ಮತ್ತು ವಿಡಿಯೋ ರೆಕಾರ್ಡಿಂಗ್ ಮಾಡುವುದು ಇಸ್ಲಾಂ ಧರ್ಮದಲ್ಲಿ ನಿಷಿದ್ಧವೆಂದು ಮೌದೂದಿ ಸಂಘಟನೆಯ ಸ್ಥಾಪಕ ನೇತಾರ ಹೇಳಿದ್ದರೂ ಕೂಡ ಅದು ತಮಗೆ ಅಗತ್ಯವೆಂದು ಕಂಡಾಗ ಮೌದೂದಿಗಳು ಈ ಇಸ್ಲಾಮಿಕ ನಿರ್ದೇಶ (?) ವನ್ನು ಬದಲಾಯಿಸಿಕೊಂಡು ಇಂತಹ ಭಿನ್ನಾಭಿಪ್ರಾಯವಿರುವ ವಿಷಯದಲ್ಲಿ ತನ್ನ ಸದಸ್ಯರ ಮೇಲೆ ಯಾವುದನ್ನೂ ಅದು ನಿರ್ಬಂಧಿಸುವುದಿಲ್ಲವೆಂದು ಹೇಳುತ್ತಾರೆ! ಹಾಗಾದರೆ, ಉರೂಸ್ ಮಾಡಬಹುದೇ ಅಥವಾ ಮಾಡಬಾರದೇ ಎಂಬ ವಿಷಯದಲ್ಲೂ ಮುಸ್ಲಿಂ ವಿದ್ವಾಂಸರ ಮಧ್ಯೆ ಮತಭೇದವಿದೆ. ಮತ್ಯಾಕೆ ಮೌದೂದಿಗಳು ಆ ವಿಷಯದಲ್ಲಿ ಮೊಂಡುತನ ತೋರಿಸುವುದು? ಇಂದಿನ ಮುಸ್ಲಿಂ ಸಮುದಾಯದಲ್ಲಿ ಭಿನ್ನಾಭಿಪ್ರಾಯವಿಲ್ಲದ ವಿಷಯವಾದರೂ ಯಾವುದು? ಭಿನ್ನಾಭಿಪ್ರಾಯವಿರುವ ವಿಷಯದಲ್ಲಿ ವ್ಯಕ್ತಿಗತ ಸ್ವಾತಂತ್ರ್ಯಕ್ಕೆ ಇವರು ಮಾನ್ಯತೆ ನೀಡುವರಾದರೆ ಮತ್ತೆ ಇವರ ನೀತಿ ನಿಯಮಗಳ ತಳಹದಿ ಯಾವುದು? ಇವರ ನೇತಾರರನ್ನೇ ಇವರು ತಿರಸ್ಕರಿಸುವರಾದರೆ ಮತ್ತೆ ಇವರಿಗೆ ಒಂದು ಪ್ರತ್ಯೇಕ ಸಂಘಟನೆ ಯಾಕೆ?

ಒಟ್ಟಿನಲ್ಲಿ, ಧರ್ಮವನ್ನು ತಮಗೆ ಬೇಕಾದಂತೆ ಬಳಸುತ್ತಾ ಧರ್ಮದ ಮರೆಯಲ್ಲಿ ನಿಂತುಕೊಂಡು ಸಮಾಜದಲ್ಲಿ ಅಶಾಂತಿ ಹರಡಿ ಅದರಿಂದ ತಮ್ಮ ರಾಜಕೀಯ ಲಾಭ ಸಾಧಿಸಿಕೊಳ್ಳುತ್ತಿರುವ ಒಂದು ಅಪ್ಪಟ ರಾಜಕೀಯ ಸಂಘಟನೆಯಾಗಿದೆ ಜಮಾತೆ ಇಸ್ಲಾಮಿ ಎಂಬುದು. ಕಾವತಾಲೆ ರೋಗಿಗೆ ಎಲ್ಲವೂ ಹಳದಿಯಾಗಿ ಕಂಡಂತೆ ಇವರಿಗೆ ಅಹ್ಮದಿಯಾ ಜಮಾಅತ್ ಅದೇ ರೀತಿ ಕಾಣುತ್ತದೆ. ಆದರೆ ಅದು ರೋಗಿಯ ದೃಷ್ಟಿದೋಷವೇ ಹೊರತು ನೋಡಲ್ಪಡುವ ವಸ್ತುವಿನ ದೋಷವಲ್ಲ.

## ಯಾರು ಮುಸ್ಲಿಂ?

ಉತ್ತರದ ಕೊನೆಯ ಭಾಗ ಈ ರೀತಿಯಿದೆ: "ಆದ್ದರಿಂದ ಇವರು ಮುಸ್ಲಿಮರಂತೆ ಹೆಸರಿಟ್ಟುಕೊಂಡರೂ ಮುಸ್ಲಿಮರಲ್ಲ ಎಂಬುದು ಎಲ್ಲ ಮುಸಲ್ಮಾನರ ಒಮ್ಮತದ ಅಭಿಪ್ರಾಯವಾಗಿದೆ. ಇದೊಂದು ಮತ ಭ್ರಷ್ಟ ಪಂಗಡವೆಂಬ ಬಗ್ಗೆಯೂ ಮುಸ್ಲಿಮರ ಎಲ್ಲ ಗುಂಪುಗಳ ಮಧ್ಯೆ ಒಮ್ಮತವಿದೆ." ಈ ಹೇಳಿಕೆಯನ್ನು 'ಸನ್ಮಾರ್ಗ'ದಲ್ಲಿ ಓದಿದ ವಾಚಕರು ಆ ಪತ್ರಿಕೆಯ ಬಗ್ಗೆ ಏನು ಅಭಿಪ್ರಾಯ ಹೊಂದುತ್ತಾರೋ ತಿಳಿಯದು. ಅಂತೂ ಇದೊಂದು ನಗ್ನವಾದ ಸುಳ್ಳಾಗಿದೆ. "ಅಹ್ಮದೀಯರು ಮುಸ್ಲಿಮರಲ್ಲ" ಎಂಬುದಾಗಿ ಎಲ್ಲ ಮುಸಲ್ಮಾನರು ಒಮ್ಮತದಿಂದ ಹೇಳುತ್ತಿಲ್ಲ. ಮುಸ್ಲಿಂ ಸಮುದಾಯದಲ್ಲಿ ನ್ಯಾಯನಿಷ್ಠರೂ ದೇವಭಯವಿರುವವರೂ ಆದ ಯಾರೂ ಸಹ ಅಹ್ಮದೀಯರನ್ನು 'ಮುಸ್ಲಿಮರಲ್ಲ' ಎಂದು ಹೇಳುವುದಿಲ್ಲ. ಆದರೆ ಈ ಮೌದೂದಿಗಳು ಎಲ್ಲರನ್ನೂ ತಮ್ಮ ಪಟ್ಟಿಗೆ ಸೇರಿಸಿಬಿಟ್ಟಿದ್ದಾರೆ! ಅಹ್ಮದೀಯರ ಧರ್ಮ ನಿಷ್ಠೆಯನ್ನೂ ಪ್ರಾಮಾಣಿಕತೆಯನ್ನೂ ಬಹಳವಾಗಿ ಹೊಗಳಿ, ಧಾರ್ಮಿಕ ಭಿನ್ನಾಪ್ರಾಯವಿದ್ದರೂ ಕೂಡ ಈ ಕಾದಿಯಾನಿಗಳು ಇಸ್ಲಾಂ ಧರ್ಮದ ನಿಜವಾದ ಸೇವಕರೆಂಬುದನ್ನು ಒಪ್ಪದೆ ನಿರ್ವಾಹವಿಲ್ಲವೆಂದು ಹೇಳಿದ ಅನೇಕ ಪಂಡಿತರೂ ನೇತಾರರೂ ಮುಸ್ಲಿಮರೆಡೆಯಲ್ಲಿದ್ದಾರೆ.

ಹಾಗೆ ನೋಡಿದರೆ, ಮುಸ್ಲಿಂ ಜನಸಾಮಾನ್ಯರು ಮೌದೂದಿಗಳನ್ನು ಅತ್ಯಂತ ಜಿಗುಪ್ಸೆಯಿಂದ ಕಾಣುತ್ತಾರೆ. ಜಮಾತೆ ಇಸ್ಲಾಮಿ ಎಂಬ ಹೆಸರಿದ್ದರೂ ಕೂಡಾ ಇದೊಂದು ರಾಜಕೀಯ ಸಂಸ್ಥೆಯೆಂದೂ ಇಸ್ಲಾಂ ಧರ್ಮದಿಂದ ಭ್ರಷ್ಟಗೊಂಡ ಮುಸ್ಲಿಮೇತರ ಪಂಗಡವೆಂದೂ ಅನೇಕ ಮುಸ್ಲಿಂ ವಿದ್ವಾಂಸರು ಫತ್ವಾ ಹೊರಡಿಸಿದ್ದಾರೆ. ಮಾತ್ರವಲ್ಲ, ಈ ಮೌದೂದಿಗಳು ಇತರ ಮುಸ್ಲಿಮರೊಂದಿಗೇ ಬೆರೆತುಕೊಂಡು ಮುಸ್ಲಿಮರನ್ನು ದಾರಿ ತಪ್ಪಿಸುತ್ತಿರುವ, ಮುಸ್ಲಿಮರೆಡೆಯಲ್ಲಿ ಒಡಕುಂಟುಮಾಡಿ ಅಶಾಂತಿ ಹಬ್ಬಿಸುತ್ತಿರುವ ಅತ್ಯಂತ ಅಪತ್ಕಾರಿ ಸಂಘವೆಂದೂ, ಮುಸ್ಲಿಮರೆಡೆಯಲ್ಲಿ ಅಭಿಪ್ರಾಯವಿದೆ. ಜನಾಭಿಪ್ರಾಯ ನೋಡಿ ಒಂದು ಪಂಗಡ

ದವರ ಧಾರ್ಮಿಕ ಸ್ಥಿತಿ ನಿರ್ಧರಿಸಲ್ಪಡುವುದೆಂದಾದರೆ, ಎಲ್ಲ ದೃಷ್ಟಿಯಲ್ಲೂ ಅತ್ಯಂತ ಆಪತ್ಕಾರಿ ಸಂಘಟನೆ ಜಮಾತೆ ಇಸ್ಲಾಮಿಯೇ ಆಗಿದೆ.

ಜಮಾತೆ ಇಸ್ಲಾಮಿಗಳನ್ನು ಮುಸ್ಲಿಮರಲ್ಲ ಎಂದು ಇತರರು ಹೇಳುವಾಗ ಅವರಿಗೆ ಅದು ಸಹಿಸಲಾಗುವುದಿಲ್ಲ. ಆಗ ಅವರಿಗೆ ನೀತಿ ಪ್ರಜ್ಞೆ, ಧಾರ್ಮಿಕ ಪ್ರಜ್ಞೆ ಎಲ್ಲ ಮೂಡಿ ಬರುತ್ತವೆ. ಇದೇ ಕಳೆದ ಎಪ್ರಿಲ್ ತಿಂಗಳ 14ರ 'ಸನ್ಮಾರ್ಗ'ದಲ್ಲಿ "ಯಾರು ಮುಸ್ಲಿಮ್?" ಎಂಬ ಒಂದು ಕಿರು ಲೇಖನ (ಹದೀಸ್ ದರ್ಶನ) ಪ್ರಕಟವಾಯಿತು. ಸಹೀಹ್ ಬುಖಾರಿಯಲ್ಲಿ ಉಲ್ಲೇಖಿತವಾಗಿರುವ ಒಂದು ಹದೀಸನ್ನು ವ್ಯಾಖ್ಯಾನಿಸುತ್ತಾ ಲೇಖಕ ಈ ರೀತಿ ಬರೆಯುತ್ತಾರೆ: "ನಾವು ನಮಾಝ್ ಮಾಡುವಂತೆ ಕಿಬ್ಲಾಕ್ಕೆ ತಿರುಗಿ ನಮಾಝ್ ಮಾಡುವ ಹಾಗೂ ನಾವು ಕೊಯ್ದುದನ್ನು ಅಥವಾ ನಮ್ಮ ಆಹಾರವನ್ನು ಸೇವಿಸುವವರೆಲ್ಲರನ್ನೂ ನೀವು ಮುಸ್ಲಿಮರೆಂದು ಪರಿಗಣಿಸಬೇಕು. ಅವರು ನೈಜ - ವಿಶ್ವಾಸಿಗಳೇ ಅಥವಾ ಅವರು ಕಪಟಿಗಳೇ ಎಂಬುದನ್ನು ನೀವು ಕೆದಕಿ ನೋಡಬೇಕಾಗಿಲ್ಲ... ಅವರು ಅವಿಶ್ವಾಸಿಗಳು, ಕಪಟ ವಿಶ್ವಾಸಿಗಳು ಎಂದು ಪ್ರಚಾರ ಮಾಡಬೇಡಿರಿ. ಅಂಥ ಧೋರಣೆಯು ಅಲ್ಲಾಹನ ಹೊಣೆಗಾರಿಕೆಯಲ್ಲಿ ಹಸ್ತಕ್ಷೇಪ ನಡೆಸಿದಂತಹ ಘೋರ ಪಾಪವಾಗುವುದು. ಕುಂದು ಕೊರತೆ, ಭಿನ್ನಾಭಿಪ್ರಾಯಗಳ ಹೆಸರಲ್ಲಿ ಮುಸ್ಲಿಮರನ್ನು ಸಾಮೂಹಿಕವಾಗಿ ಇಸ್ಲಾಮಿನಿಂದ ಹೊರಹಾಕಿ ಕಾಫಿರ್, ಮುಶ್ರಿಕ್ ಎಂದು ವಿಧಿಸುವವರು ಈ ಪ್ರವಾದಿ ವಚನವನ್ನು ಕೂಲಂಕುಷವಾಗಿ ಪರಿಶೀಲಿಸಬೇಕು. ತಾನು ಮುಸ್ಲಿಮನೆಂಬ ಓರ್ವನ ಘೋಷಣೆಯನ್ನು ಆತನ ಕರ್ಮ ಜೀವನದ ವಿವರಣೆ ಅಥವಾ ಅಭಿಪ್ರಾಯಗಳ ಆಧಾರದಲ್ಲಿ ವಿಶ್ಲೇಷಿಸಬಾರದು. ಆತನು ನಮಾಝ್ ಮಾಡುತ್ತಿದ್ದಾನೆಯೇ, ಮುಸ್ಲಿಮರ ಆಹಾರ ಸೇವಿಸುತ್ತಿದ್ದಾನೆಯೇ ಅಥವಾ ಸಾಮಾಜಿಕ ಜೀವನದಲ್ಲಿ ಮುಸ್ಲಿಮರ ಜೊತೆ ಸೇರುತ್ತಾನೆಯೇ ಎಂಬುದನ್ನು ಮಾತ್ರ ನೋಡಬೇಕು. ಅವೆರಡೂ ಇದ್ದರೆ ಆತ ಮುಸ್ಲಿಮನೇ ಸರಿ. ತರುವಾಯ ಆತನನ್ನು ಕಾಫಿರ್ ಅಥವಾ ಮುಷ್ರಿಕ್ ಎಂದು ಕರೆಯುವ ಹಕ್ಕು ಯಾರಿಗೂ ಇಲ್ಲ. ಆತನೊಳಗೆ ಶಿರ್ಕ್ ಮತ್ತು ಕುಫ್ರ್‌ನ ಅಂಶಗಳಿದ್ದರೆ ಆ ಬಗ್ಗೆ ಅಲ್ಲಾಹನೇ ವಿಚಾರಿಸಿಕೊಳ್ಳುತ್ತಾನೆ. ಅದನ್ನು ನೋಡುವ ಹೊಣೆ ನಮಗಿಲ್ಲ." ('ಸನ್ಮಾರ್ಗ'-ಎಪ್ರಿಲ್ 14, 1991).

ಆಹಾ! ತಮ್ಮನ್ನು ಕಾಫಿರ್ ಎಂದು ಇತರರು ಹೇಳುವಾಗ ಮೌದೂದಿಗಳು ಎಂಥ ನ್ಯಾಯವಾದ ಮಂಡಿಸುತ್ತಾರೆ! ಅವರು ನೈಜ ಮುಸ್ಲಿಮರೇ ಕಪಟಿಗಳೇ ಎಂದು ಕೆದಕಿ ನೋಡಬಾರದಂತೆ. ಕುಂದು ಕೊರತೆ, ಭಿನ್ನಾಭಿಪ್ರಾಯಗಳ ಹೆಸರಿನಲ್ಲಿ ಮುಸ್ಲಿಮರನ್ನು ಸಾಮೂಹಿಕವಾಗಿ ಇಸ್ಲಾಮಿನಿಂದ ಹೊರಹಾಕಿ ಕಾಫಿರ್, ಮುಶ್ರಿಕ್ ಎಂದು ವಿಧಿಸಬಾರದಂತೆ. ಆದರೆ, ಈ ವಿಚಾರ ಮೌದೂದಿಗಳನ್ನು ಇತರರು ಕಾಫಿರ್ ಎಂದಾಗ ಮಾತ್ರ ಅವರಿಗೆ ನೆನಪಾಗುತ್ತದೆ. ಅಹ್ಮದಿಯಾ ಜಮಾಅತಿನ ಕುರಿತು ಮಾತನಾಡುವಾಗ ಇವರು ಅಲ್ಲಾಹನ ಹೊಣೆಗಾರಿಕೆಯಲ್ಲಿ ಹಸ್ತಕ್ಷೇಪ ನಡೆಸಿ ಘೋರ ಪಾಪವನ್ನು ಮಾಡುತ್ತಾರೆ. ಇವರಿಗೆ ಅಲ್ಲಾಹನ ಬಗ್ಗೆ ಸ್ವಲ್ಪವೂ ಭಯವಿಲ್ಲವೇ?

ಸಹೀಹ್ ಬುಖಾರಿಯಲ್ಲಿ ಉಲ್ಲೇಖಿತವಾಗಿರುವ ಆ ಹದೀಸ್ ಈ ರೀತಿಯಿದೆ: "ಪ್ರವಾದಿ (ಸ) ಹೇಳಿರುವರು – ನಮ್ಮ ನಮಾಝ್‌ನಂತೆ ನಮಾಝ್ ಮಾಡಿ ನಮ್ಮ ಖಿಬ್ಲವನ್ನು ಖಿಬ್ಲ ಎಂದು ಅಂಗೀಕರಿಸಿ, ನಾವು ಕೊಯ್ದುದನ್ನು (ಝಿಬ್ಹ್ ಮಾಡಿದ್ದನ್ನು) ತಿನ್ನುವವನಾರೋ, ಆತನೇ ಮುಸ್ಲಿಂ. ಅಲ್ಲಾಹನಿಗೂ ಅವನ ಪ್ರವಾದಿಗೂ ಆತವಲ್ಲಿ ಹೊಣೆಗಾರಿಕೆಯಿದೆ. ಆದ್ದರಿಂದ ಅಲ್ಲಾಹನ ಹೊಣೆಗಾರಿಕೆಯನ್ನು ಉಲ್ಲಂಘಿಸದಿರಿ."

ಈ ನಬಿ ವಚನದಲ್ಲಿ ಓರ್ವ ಮುಸಲ್ಮಾನ, ಆತನು ಸ್ವಯಂ ಮುಸ್ಲಿಮನೆಂದು ಹೇಳಿಕೊಳ್ಳುವನಾದರೆ, ಆತನನ್ನು ಮುಸ್ಲಿಮನಾಗಿ ಅಂಗೀಕರಿಸಲು ಬಾಹ್ಯವಾಗಿ ಆತನಲ್ಲಿ ಇರಬೇಕಾದ ಮೂರು ಲಕ್ಷಣಗಳನ್ನು ವಿವರಿಸಲಾಗಿದೆ. ಒಂದನೆಯದಾಗಿ, ಆತ ಮುಸ್ಲಿಮರಂತೆ ಐದು ಸಮಯದ ನಮಾಝ್ ನಿರ್ವಹಿಸುವವನಾಗಿರಬೇಕು. ಎರಡನೆಯದು, ಕಅಬವನ್ನು ತನ್ನ ಖಿಬ್ಲ ಆಗಿ ಅಂಗೀಕರಿಸಬೇಕು. ಮೂರನೆಯದಾಗಿ, ಮುಸಲ್ಮಾನರು ಝಿಬ್ಹ್ ಮಾಡಿದ ಪ್ರಾಣಿಗಳ ಮಾಂಸ

ವನ್ನು ಆತನು ತಿನ್ನುವವನಾಗಿರಬೇಕು. ಈ ಮೂರು ಬಾಹ್ಯ ಲಕ್ಷಣಗಳು ಯಾರಲ್ಲಿವೆಯೋ ಆತನನ್ನು ಸಮಾಜ ಮುಸ್ಲಿಮನೆಂದು ಪರಿಗಣಿಸಬೇಕು. ಆ ಬಗ್ಗೆ ಅಲ್ಲಾಹು ಮತ್ತು ಅವನ ಪ್ರವಾದಿ ಖಾತ್ರಿ ನೀಡುತ್ತಾರೆ. ಆ ನಂತರದ ಹೊಣೆಗಾರಿಕೆ ಅಲ್ಲಾಹನಿಗೆ ಸೇರಿದ್ದು. ಆದ್ದರಿಂದ ಈ ಲಕ್ಷಣಗಳಿರುವ ಯಾರನ್ನು ಸಹ ಮುಸ್ಲಿಮನಲ್ಲವೆಂದು ಹೇಳುವ ಅಧಿಕಾರ ಯಾರಿಗೂ ಇರುವುದಿಲ್ಲ. ಹಾಗೆ ಮಾಡುವುದು ಅಲ್ಲಾಹನ ಹೊಣೆಗಾರಿಕೆಯಲ್ಲಿ ಹಸ್ತಕ್ಷೇಪ ಮಾಡಿದಂತೆ ಎಂದು ಈ ಹದೀಸಿನಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ.

ಈ ಹದೀಸಿನ ಮಾನದಂಡದಂತೆ ಮೌದೂದಿಗಳನ್ನು ಅಳೆಯಬೇಕೆಂದು ಅವರು ಬಯಸುತ್ತಾರೆ. ಮೌದೂದಿಗಳನ್ನು ಕಾಫಿರ್ ಎಂದು ಹೇಳಿದರೆ ಅದು ತಪ್ಪು. ಆದರೆ, ಈ ಮೂರೂ ಲಕ್ಷಣಗಳು ಇರುವ ಅಹ್ಮದೀಯರನ್ನು ಕಾಫಿರ್ ಎಂದು ಎಲ್ಲರೂ ತೀರ್ಮಾನಿಸಿದ್ದಾರಂತೆ! ಇದೆಂತಹ ವಿಪರ್ಯಾಸ. ಇವರ ಈ ವಿಚಿತ್ರವಾದ ನೀತಿನಿಷ್ಠೆಯಿಂದಾಗಿ ಇಸ್ಲಾಂ ಧರ್ಮದ ಸುಂದರ ಮುಖದ ಮೇಲೆ ಕೆಸರೆರಚಿದಂತಾಗುತ್ತದೆ. ಮೇಲಿನ ಹದೀಸಿನಲ್ಲಿ ಓರ್ವನನ್ನು ಮುಸ್ಲಿಮನೆಂದು ಪರಿಗಣಿಸಲು ಆ ಮೂರು ಲಕ್ಷಣಗಳಲ್ಲದೆ ಬೇರೆ ಯಾವ ಶರ್ತವನ್ನೂ ವಿಧಿಸಲಾಗಿಲ್ಲವೆಂಬುದು ಗಮನಾರ್ಹ. ಆದುದರಿಂದ ಅಹ್ಮದೀಯರನ್ನು ಮುಸ್ಲಿಮರಲ್ಲವೆಂದು ಹೇಳುವ ಅಧಿಕಾರ ಯಾರಿಗೂ ಇರುವುದಿಲ್ಲ. ಹಾಗೆ ಯಾರಾದರೂ ಹೇಳುವರಾದರೆ, ಅದು ಅಲ್ಲಾಹನ ಮತ್ತು ಪ್ರವಾದಿ (ಸ)ರ ಹೊಣೆಗಾರಿಕೆಯಲ್ಲಿ ಹಸ್ತಕ್ಷೇಪ ನಡೆಸುವಂತಹ ಘೋರ ಪಾಪವಾಗುವುದು.

ಆದುದರಿಂದ ಮೌದೂದಿಗಳೇ, ನೀವು ಅಳತೆ ಮಾಡುವಾಗ ನ್ಯಾಯದ ಅಳತೆಗೋಲನ್ನು ಎಲ್ಲರಿಗೂ ಸಮಾನವಾಗಿ ಹಿಡಿಯಿರಿ. "ಯಾರೊಡನೆಯೂ ಅನ್ಯಾಯದಿಂದ ವರ್ತಿಸಬೇಡಿರಿ" (ಖುರ್ಆನ್) ಎಂಬ ಅಲ್ಲಾಹನ ಆಜ್ಞೆಯನ್ನು ಪಾಲಿಸಿರಿ.

ಮತ್ತೆ, "ಮುಸ್ಲಿಮರ ಎಲ್ಲ ಗುಂಪುಗಳ ಮಧ್ಯೆ ಒಮ್ಮತವಿದೆ," "ಇವರು ಮುಸ್ಲಿಮರಲ್ಲ ಎಂಬುದು ಎಲ್ಲ ಮುಸಲ್ಮಾನರ ಒಮ್ಮತದ ಅಭಿಪ್ರಾಯವಾಗಿದೆ" ಎಂಬ ಭಾಗವನ್ನು ಓದಿ ನಗುಬಂತು. ಮುಸ್ಲಿಂ ಸಮುದಾಯದಲ್ಲಿ ಒಮ್ಮತದ ಅಭಿಪ್ರಾಯವೇ?!. ಮುಸಲ್ಮಾನರಲ್ಲಿ ಆ ಆಧ್ಯಾತ್ಮಿಕ ಚೈತನ್ಯ ನಾಸ್ತಿಯಾಗಿ ಶತಮಾನಗಳೇ ಕಳೆದವು ಎಂದು ಮೌದೂದಿಗಳಿಗೆ ತಿಳಿದಿಲ್ಲವೇ? ರಬೀಉಲ್ ಅವ್ವಲ್ ತಿಂಗಳ ಚಂದ್ರ ದರ್ಶನವಾಗಿ 12 ದಿನಗಳ ನಂತರದ "ಮಿಲಾದುನ್ನಬಿ" ದಿನಾಚರಣೆಯನ್ನು ಒಂದೇ ಊರಿನಲ್ಲಿ ಯಾವ ದಿನ ಆಚರಿಸಲ್ಪಡಬೇಕೆಂಬ ಅತಿ ಸಣ್ಣ ವಿಚಾರದಲ್ಲಿ ಸಹ ಒಮ್ಮತದ ಒಂದು ಅಭಿಪ್ರಾಯ ಹೊಂದಲು ಸಾಧ್ಯವಾಗದ ಈ ಸಮುದಾಯ, ದುಲ್‌ಹಿಜ್ಜ ತಿಂಗಳ ಚಂದ್ರದರ್ಶನದ ಬಳಿಕ 10 ದಿನಗಳ ಕಾಲಾವಕಾಶವಿದ್ದೂ ಒಂದು ಊರಿನಲ್ಲಿ ಬಕ್ರೀದ್ ಯಾವ ದಿನ ಆಚರಿಸಬೇಕೆಂದು ಒಮ್ಮತಾಭಿಪ್ರಾಯ ಹೊಂದಲು ಸಾಧ್ಯವಾಗದ ಈ ಸಮುದಾಯ– ಒಂದು ಕೋಟಿಗಿಂತಲೂ ಹೆಚ್ಚು ಸದಸ್ಯರನ್ನು ಹೊಂದಿ ಅತ್ಯಂತ ಶಿಸ್ತುಬದ್ಧವಾಗಿ ಇಸ್ಲಾಂ ಧರ್ಮದ ಸೇವೆಮಾಡುತ್ತಿರುವ ಜಾಗತಿಕ ಅಹ್ಮದಿಯಾ ಮುಸ್ಲಿಂ ಜಮಾಅತನ್ನು ಕಾಫಿರ್ ಎಂದು ವಿಧಿಸುವಲ್ಲಿ 'ಒಮ್ಮತದ' ಅಭಿಪ್ರಾಯ ಹೊಂದಿದೆಯಂತೆ! 'ಒಮ್ಮತ' ಒಂದೊಮ್ಮೆ ಇತ್ತು. ಈಗ ಅದು ಇಲ್ಲ. ಅಹ್ಮದೀಯರನ್ನು ಯಾರಾದರೂ ಕಾಫಿರ್ ಎಂದು ಹೇಳಿರುವುದನ್ನು ನೀವು ಆಧಾರ ಮಾಡಿಕೊಂಡಿದ್ದರೆ, ಮೌದೂದಿಗಳೇ, ನಿಮ್ಮನ್ನು ಸಹ ಮುಸಲ್ಮಾನರಲ್ಲಿ ಹೆಚ್ಚಿನವರು ಕಾಫಿರ್ ಎಂದು ಹೇಳುತ್ತಾರಲ್ಲ! ★

"ಯುಗರಶ್ಮಿ"ಗೆ ಚಂದಾದಾರರಾಗಿರಿ.

ವಾರ್ಷಿಕ ಚಂದಾ ದರ: ರೂ. 10 – 00 (ಅಂಚೆ ಮೂಲಕ)

# ಕಮ್ಯೂನಿಸ್ಟ್ ವ್ಯವಸ್ಥೆ ದಶಕಗಳೊಳಗೆ ಕೊನೆಗೊಳ್ಳುವುದು

## 1975ರಲ್ಲಿ ಅಹ್ಮದಿಯಾ ಖಲೀಫರ ಭವಿಷ್ಯ ನುಡಿ

1975ರಲ್ಲಿ ರಬ್ವದಲ್ಲಿ ಸಮಾವೇಶಗೊಂಡ ಜಾಗತಿಕ ಅಹ್ಮದಿಯಾ ವಾರ್ಷಿಕ ಸಮ್ಮೇಳನವನ್ನು ಉದ್ಘಾಟಿಸುತ್ತಾ ಅಹ್ಮದಿಯಾ ಜಮಾಅತಿನ ತೃತೀಯ ಖಲೀಫ ಹಝ್ರತ್ ಹಾಫಿಝ್ ಮಿರ್ಝಾ ನಾಸಿರ್ ಅಹ್ಮದ್ ಸಾಹೇಬ್ [H.A., M.A. (Oxon)] ಹೀಗೆ ಹೇಳಿದರು:

"ಬಂಡವಾಳಶಾಹಿ ರಾಷ್ಟ್ರಗಳು ಇಂದು ಎಲ್ಲಿವೆ? ಒಂದು ಕಾಲದಲ್ಲಿ ಬಂಡವಾಳಶಾಹಿತ್ವವು ಲೋಕವನ್ನಿಡೀ ಅಧೀನಪಡಿಸಿ, ಬಂಡವಾಳಶಾಹಿತ್ವ ವಿನಾ ಮನುಷ್ಯರನ್ನು ಆಳಲು ಸಾಧ್ಯವಿಲ್ಲವೆಂದು ಭಾವಿಸುವಂತಾಗಿತ್ತು. ಅದು ಈಗ ಹಿಂದಕ್ಕೆ ತಳ್ಳಲ್ಪಟ್ಟಿದೆ. ಈಗ ಕಮ್ಯುನಿಸಂ ಮುಂಚೂಣಿಯಲ್ಲಿದೆ. ಇದು ಸಹ ಹಿಂದಕ್ಕೆ ತಳ್ಳಲ್ಪಡುವುದು. ನೂರಾರು ವರ್ಷಗಳ ನಂತರದ ವಿಚಾರವನ್ನಲ್ಲ ನಾನು ಹೇಳುತ್ತಿರುವುದು. ನೆನಪಿಡಿರಿ, ಇದು ನೂರಾರು ವರ್ಷಗಳ ಬಳಿಕದ ವಿಚಾರವೇನಲ್ಲ. ಕೆಲವೇ ದಶಕಗಳೊಳಗೆ ಕಮ್ಯೂನಿಸ್ಟ್ ವ್ಯವಸ್ಥೆ ಜಗತ್ತಿನಿಂದ ಕಣ್ಮರೆಯಾಗುವುದು. ಆ ಬಳಿಕ ದೇವರ ಮತ್ತು ಅವನ ಪ್ರವಾದಿಯ ನಾಮವನ್ನು ಉನ್ನತಗೊಳಿಸುವ ಜಮಾಅತ್, ಹಝ್ರತ್ ಮುಹಮ್ಮದ್ ಪೈಗಂಬರ್ (ಸ)ರವರೊಡನೆ ದೃಢ ಸಂಬಧವನ್ನಿರಿಕೊಂಡ ಜಮಾಅತ್, ಪವಿತ್ರ ಖುರ್‌ಆನಿನ ಅಧ್ಯಾಪನಗಳನ್ನು ವಿಶ್ವದಲ್ಲಿ ಜಾರಿಗೊಳಿಸುವ ಜಮಾಅತ್, ಇಸ್ಲಾಮಿನ ಪತಾಕೆಯನ್ನು ಪ್ರಪಂಚದ ಮನೆಮನೆಗಳಲ್ಲಿ ಹಾರಿಸುವ ಜಮಾಅತ್ ವಿಜಯಶಾಲಿಯಾಗಿ ಮುನ್ನೇರುವುದು. ಮತ್ತೆ ಈ ಲೋಕದಲ್ಲಿ ಸ್ವರ್ಗಸದೃಶವಾದೊಂದು ವಾತಾವರಣ ಸೃಷ್ಟಿಸಲ್ಪಡುವುದು. ಹಾಗೆ ಮನುಷ್ಯರಿಗೆಲ್ಲ ಆನಂದದ ದಾರಿಗಳು ತೆರೆಯಲ್ಪಡುವುವು.

("ಬದ್ರ್" ಉರ್ದು ವಾರ ಪತ್ರಿಕೆ : 13–5–1976)

# ಅಮೇರಿಕದ ಸೊಕ್ಕುಮುರಿಯುವುದು

— ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್

ಅಹ್ಮದಿಯಾ ಖಲೀಫರಾದ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬ್ 1991 ಜನವರಿ 25ರಂದು ಲಂಡನ್‌ನಲ್ಲಿ ಮಾಡಿದ ಖುತ್ಬದಲ್ಲಿ ಕೊಲ್ಲಿ ಯುದ್ಧದ ಕುರಿತು ಸವಿಸ್ತಾರವಾಗಿ ಪ್ರತಿಪಾದಿಸಿದರು. ಅದರಲ್ಲಿ ಕೆಲವಂಶವನ್ನು ಇಲ್ಲಿ ಉಲ್ಲೇಖಿಸಲಾಗಿದೆ.

ಇಸ್ಲಾಮಿನ ಮೇಲೆ ಪಾಶ್ಚಾತ್ಯ ಜನತೆಯ ವೈರ, ಅದನ್ನು ನಾಶಪಡಿಸಲು ಅವರ ಕುಟಿಲ ಪ್ರಯತ್ನಗಳ ಬಗ್ಗೆ ಖಲೀಫ ವಿವರಿಸಿದರು. ವಿಶ್ವಸಂಸ್ಥೆಯ ಕುರಿತು ಅವರು ಹೀಗೆ ಹೇಳಿದರು: ತಾವು ಇಚ್ಛಿಸುವಾಗ ಒಂದು ರಾಷ್ಟ್ರವನ್ನು ಸ್ಥಾಪಿಸಲಿಕ್ಕೂ ಇಚ್ಛಿಸುವಾಗ ಒಂದು ರಾಷ್ಟ್ರವನ್ನು ನಾಶಮಾಡಲಿಕ್ಕೂ ಅವರಿಗೆ ಹಕ್ಕಿದೆಯೆಂದು ಅವರು ಭಾವಿಸಿಕೊಂಡಿದ್ದಾರೆ. ಒಂದು ಜನತೆಯಿಂದ ಆ ಜನತೆಯ ಸಂಸ್ಕೃತಿ ಸುಧಾರಣೆಗಳಿಂದ ಒಂದು ದೇಶ ರೂಪಗೊಳ್ಳುತ್ತದೆ; ಗೊತ್ತುವಳಿ ಮೂಲಕವಲ್ಲ.

ಇಸ್ರೇಲ್ ರಾಷ್ಟ್ರವನ್ನು ಸ್ಥಾಪಿಸುವುದರ ಹಿಂದೆ ಇದ್ದ ಪಾಶ್ಚಾತ್ಯ ಜನತೆಯ ಮತ್ತು ವಿಶ್ವಸಂಸ್ಥೆಯ ಚಟುವಟಿಕೆಗಳನ್ನು ಖಲೀಫ ವಿವರಿಸಿದರು. ಎಲ್ಲ ರಾಷ್ಟ್ರಗಳೂ ಒಮ್ಮತದಿಂದ ಏನನ್ನಾದರೂ ತೀರ್ಮಾನಿಸಿದರೂ ವಿಶ್ವದ ಒಡೆತನ ತನಗಿದೆಯೆಂಬ ಭಾವನೆಯಿಂದ ಅಮೇರಿಕ ಆ ತೀರ್ಮಾನಕ್ಕೆ ವಿರುದ್ಧವಾಗಿ ವೀಟೊ ಪ್ರಯೋಗಿಸುತ್ತದೆ.

ಇರಾಕ್ ಇಸ್ರೇಲನ್ನು ಆಕ್ರಮಿಸಿತು. ಅಲ್ಲಿ ಸ್ವಲ್ಪ ನಾಶವನ್ನುಂಟುಮಾಡಿತು. ಆಗ ಪಾಶ್ಚಾತ್ಯ ಲೋಕವಿಡೀ ಅಲಾಪಿಸಲು ತೊಡಗಿತು. ಆದರೆ ಇಸ್ರೇಲ್ ಪೆಲಿಸ್ತೀನಿನ ಮೇಲೆ ಎಸಗಿದ ಆಕ್ರಮಣಗಳನ್ನೂ, ಈಗಲೂ ಅವರನ್ನು ಬೀದಿಗಳಲ್ಲಿ ಹತ್ಯಾಕಾಂಡ ಮಾಡುವುದನ್ನೂ ಪ್ರಶ್ನಿಸಲು ಯಾರೂ ಇಲ್ಲ!

ಖಲೀಫರು ಅಮೇರಿಕ ಮತ್ತು ಅಮೇರಿಕದ ಅಧ್ಯಕ್ಷರನ್ನು ಉಗ್ರವಾಗಿ ಖಂಡಿಸಿ ನುಡಿದರು: ಅಧ್ಯಕ್ಷ ಬುಶ್ ತಾನೇ ಲೋಕದೊಡೆಯ ಎಂಬಂತೆ ವರ್ತಿಸುತ್ತಾರೆ. ಖಂಡಿತವಾಗಿಯೂ ಅವರ ಮತ್ತು ಅವರ ಜನರ ಸೊಕ್ಕು ಮುರಿಯುವುದು. ಅದು ಯಾವಾಗೆಂದು ಗೊತ್ತಿಲ್ಲ. ನಮಗಾಗಲೀ ನಮ್ಮ ಸಂತಾನಗಳಿಗಾಗಲೀ ಅದು ಕಾಣಲು ಸಾಧ್ಯ. ಹೇಗಿದ್ದರೂ ಈ ಹಮ್ಮು ಕೊನೆಗಾಣುವುದು ದಿಟ.

ಕೊನೆಗೆ ಖಲೀಫರು ಬಹಳ ಗಾಂಭೀರ್ಯದಿಂದ ಹೇಳಿದರು: ಖುತ್ಬಗಳಲ್ಲಿ ಇಷ್ಟು ಬಹಿರಂಗವಾಗಿ ಈ ಬಗ್ಗೆ ಹೇಳಬಾರದೆಂದು ಕೆಲವರು ನನ್ನೊಡನೆ ಹೇಳುತ್ತಾರೆ. ನಾನು ಮುಹಮ್ಮದ್ ಪೈಗಂಬರ್ (ಸ)ರವರ ದಾಸನು. ತೌಹೀದ್ (ದೇವೇಕತ್ವ)ನ ಮೇಲೆ ಉಂಟಾಗುವ ಎಲ್ಲ ಆಕ್ರಮಣಗಳನ್ನೂ ಪೈಗಂಬರರು ಸದಾ ವಿರೋಧಿಸುತ್ತಿದ್ದರು. "ನನ್ನ ಬಲಗೈಯಲ್ಲಿ ಸೂರ್ಯನನ್ನೂ ಎಡಗೈಯಲ್ಲಿ ಚಂದ್ರನನ್ನೂ ತಂದಿಟ್ಟರೆ ಸಹ ತೌಹೀದಿನ ಬೋಧನೆಯಿಂದ ನನ್ನನ್ನು ತಡೆಯಲು ನಿಮಗೆ ಸಾಧ್ಯವಿಲ್ಲ" ಎಂದು ಪೈಗಂಬರರು ಹೇಳಿದ್ದರು. ನನ್ನ ನಿಲುವು ಸಹ ಅದೇ ಆಗಿದೆ. ನಾನು ಸತ್ಯವನ್ನೇ ನುಡಿಯುತ್ತಿರುವೆನು. ತೌಹೀದಿಗೆ ಬೇಕಾಗಿ ನಾನು ತುಂಡು ತುಂಡು ಮಾಡಲ್ಪಟ್ಟರೂ ನನ್ನ ಹೃದಯದಿಂದ ಹೊರಡುವ ಶಬ್ದ ಇದಾಗಿರುವುದು:

فُزْتُ بِرَبِّ الْكَعْبَةِ - فُزْتُ بِرَبِّ الْكَعْبَةِ "ಕಅಬದ ಒಡೆಯನಾಣೆ ಸತ್ಯ, ನಾನು ಜಯಶಾಲಿಯಾದೆ; ಕಅಬದ ಒಡೆಯನಾಣೆ ಸತ್ಯ, ನಾನು ಜಯಶಾಲಿಯಾದೆ."

# ಅಹ್ಮದಿಯಾ ವಾರ್ತೆಗಳು

## ಖಾದಿಯಾನ್‌ನಲ್ಲಿ 100ನೇ ವಾರ್ಷಿಕ ಮಹಾ ಸಮ್ಮೇಳನ ಡಿಸೆಂಬರ್ 26ರಿಂದ 28ರ ವರೆಗೆ

ಭಾರತದ ಅಹ್ಮದಿಯಾ ಕೇಂದ್ರವಾದ ಖಾದಿಯಾನ್‌ನಲ್ಲಿ ಇದೇ ಬರುವ ಡಿಸೆಂಬರ್ 26ರಿಂದ 28ರ ವರೆಗೆ 100ನೇ ಅಹ್ಮದಿಯಾ ವಾರ್ಷಿಕ ಮಹಾ ಸಮ್ಮೇಳನ ಬಹಳ ವಿಜೃಂಭಣೆಯಿಂದ ಜರಗಲಿದೆ (ಇನ್‌ಷಾಅ್ ಅಲ್ಲಾಹ್).

ಈ ಸಮ್ಮೇಳನದಲ್ಲಿ ದೇಶ ವಿದೇಶಗಳ ಪ್ರಖ್ಯಾತ ಅಹ್ಮದಿಯಾ ಧರ್ಮ ಪಂಡಿತರು ಭಾಗವಹಿಸಿ, ದೇವಾಸ್ತಿತ್ವ, ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ರವರ ಜೀವನ, ಪವಿತ್ರ ಖುರ್‌ಆನಿನ ಮಹಾತ್ಮೆ, ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ಅ)ರವರ ಜೀವನ, ಅಹ್ಮದಿಯತ್‌ನ ಮುನ್ನಡೆ, ಹಝ್ರತ್ ಈಸಾನಬಿ(ಅ) ರವರ ಮರಣ, ಖಿಲಾಫತ್, ವಿಶ್ವಶಾಂತಿಗೆ ಇಸ್ಲಾಮಿನ ಕೊಡುಗೆ, ಮಾನವ ಮೈತ್ರಿ ಇತ್ಯಾದಿ ಇತ್ಯಾದಿ ವಿಷಯಗಳ ಬಗ್ಗೆ ಮಾತನಾಡಲಿರುವರು.

ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ಅ)ರವರಿಂದ ಆರಂಭಿಸಲ್ಪಟ್ಟ ಈ ವಾರ್ಷಿಕ ಮಹಾ ಸಮ್ಮೇಳನದ 100ನೇ ಸಮಾವೇಶ ಅನೇಕ ವೈಶಿಷ್ಟ್ಯಗಳಿಂದ ಕೂಡಿರುತ್ತದೆ.

ಸಮ್ಮೇಳನದಲ್ಲಿ ಭಾಗವಹಿಸುವ ಎಲ್ಲರಿಗೂ ಊಟ – ವಸತಿ ಸೌಕರ್ಯವಿದೆ.

## ಮೊಗ್ರಾಲ್‌ನಲ್ಲಿ ಖುರ್‌ಆನ್ ದಿನಾಚರಣೆ

ಖುದ್ದಾಮುಲ್ ಅಹ್ಮದಿಯಾ ಮೊಗ್ರಾಲ್‌ನ ವತಿಯಿಂದ ಕಳೆದ ಸಪ್ಟೆಂಬರ್ 15ರಂದು ಮೊಗ್ರಾಲ್‌ನ ಅಹ್ಮದಿಯಾ ಮಸೀದಿಯಲ್ಲಿ ಖುರ್‌ಆನ್ ದಿನವನ್ನು ಆಚರಿಸಲಾಯಿತು.

ಜಮಾಅತ್ ಪ್ರೆಸಿಡೆಂಟ್ ಜ| ಬಶೀರ್ ಅಹ್ಮದ್ ಸಿದ್ದೀಖ್ ಸಾಹೇಬರು ಅಧ್ಯಕ್ಷತೆ ವಹಿಸಿದ್ದರು. ಖಾಯಿದ್ ಎಂ. ಪಿ. ಮೂಸಾ ಸಾಹೇಬ್ ಖುರ್‌ಆನ್ ಪಠನ ಮಾಡಿದರು. ಮುಅ್‌ತಮಿದ್ ಮುಹಮ್ಮದ್ ರಫೀಕ್ ಸಾಹೇಬ್ ಸ್ವಾಗತಿಸಿದರು.

ಸಭಾಧ್ಯಕ್ಷರು, ಮೌಲ್ವಿ ವಸೀಂ ಅಹ್ಮದ್ ಸಾಹೇಬ್, ಮುಹಮ್ಮದ್ ಯೂಸುಫ್ ಸಾಹೇಬ್ ಎಂ. ಪಿ. ಮೂಸಾ ಸಾಹೇಬ್, ಎಂ. ಪಿ. ಉಸ್ಮಾನ್ ಸಾಹೇಬ್ ಮತ್ತು ಟಿ. ಕೆ. ಅಬೂಬಕರ್ ಸಿದ್ದೀಖ್ ಸಾಹೇಬ್ ಅವರು ಪವಿತ್ರ ಖುರ್‌ಆನಿನ ವೈಶಿಷ್ಟ್ಯಗಳ ಕುರಿತು ಭಾಷಣ ಮಾಡಿದರು.

# "ಯುಗರಶ್ಮಿ" ಅಹ್ಮದಿಯಾ ಶತಾಬ್ದ
# ವಿಶೇಷ ಸಂಚಿಕೆ ಬಿಡುಗಡೆ




ಅಹ್ಮದಿಯಾ ಶತಾಬ್ದ ಆಚರಣೆಯ ಅಂಗವಾಗಿ ಪ್ರಕಟಿಸಲಾದ "ಯುಗರಶ್ಮಿ"ಯ ವಿಶೇಷ ಸಂಚಿಕೆಯನ್ನು ಅಮೀರ್ ಜನಾಬ್ ಅಲ್‌ಹಾಜ್ ಡಾ। ಮನ್ಸೂರ್ ಅಹ್ಮದ್ ಸಾಹೇಬರು ಜನವರಿ 20ರಂದು ಮಂಗಳೂರಿನಲ್ಲಿ ನಡೆದ ಸರಳ ಸಮಾರಂಭದಲ್ಲಿ ಬಿಡುಗಡೆಗೊಳಿಸಿದರು.

ಈಗ ಅಸ್ತಿತ್ವದಲ್ಲಿರುವ ಇಸ್ಲಾಮೀ ಕನ್ನಡ ಪತ್ರಿಕೆಗಳ ಪೈಕಿ ಹಿರಿಯ ಪತ್ರಿಕೆಯಾದ "ಯುಗರಶ್ಮಿ" ಧಾರ್ಮಿಕ ರಂಗದಲ್ಲಿ ಕಳೆದ 15 ವರ್ಷಗಳಲ್ಲಿ ಸಲ್ಲಿಸುತ್ತಿರುವ ಸೇವೆಯನ್ನು ಅವರು ಶ್ಲಾಘಿಸಿದರು.

1975ರಲ್ಲಿ ಆರಂಭಿಸಲ್ಪಟ್ಟ "ಯುಗರಶ್ಮಿ" ನಡೆದು ಬಂದ ದಾರಿ, ಅದರ ಸಾಧನೆ ಹಾಗೂ ಅದರ ಮಾರ್ಗದಲ್ಲಿರುವ ಅಡೆತಡೆಗಳ ಕುರಿತು ಸಂಪಾದಕ ಮುಹಮ್ಮದ್ ಯೂಸುಫ್ ವಿವರಿಸಿದರು.

ವಿಶೇಷ ಸಂಚಿಕೆಯ ಪ್ರಥಮ ಪ್ರತಿಯನ್ನು ಮೇಲೆಪಾಳಯಂ (ತಮಿಳ್ನಾಡು) ಅಹ್ಮದಿಯಾ ಮಿಶನರಿ ಜನಾಬ್ ಮೌಲ್ವಿ ಯು. ಅಬೂಬಕ್ಕರ್ ಸಾಹೇಬ್ ಸ್ವೀಕರಿಸಿದರು. ಎಂ. ಪಿ. ಮೂಸಾ ಸಾಹೇಬ್ ಖುರ್‌ಆನ್ ಪಠಿಸಿದರು. ಎಂ. ಪಿ. ಇಬ್ರಾಹಿಂ ಸಾಹೇಬ್, ಸಿ. ಮುತೀಯುಲ್ಲಾ ಸಾಹೇಬ್ ಮತ್ತು ಎಸ್. ಎಂ. ಶರೀಫ್ ಸಾಹೇಬ್ ಅಭಿನಂದನ ಭಾಷಣ ಮಾಡಿದರು.

## ಅಹ್ಮದಿಯಾ ಕನ್ನಡ ಸಾಹಿತ್ಯ

| | |
|---|---|
| ✤ ಇಸ್ಲಾಮ್ ಧರ್ಮದ ವೈಶಿಷ್ಟ್ಯಗಳು | ರೂ. 2 – 00 |
| ✤ ಅಹ್ಮದೀ ಮುಸ್ಲಿಮರು ಮತ್ತು ಅಹ್ಮದಿಯೇತರ ಮುಸ್ಲಿಮರು— ಯಾರ ವಿಶ್ವಾಸಗಳು ಯಥಾರ್ಥ ಇಸ್ಲಾಮಿಕ? | 1 – 50 |
| ✤ ಪ್ರವಾದಿಗಳು ಮತ್ತು ಅವರ ಶತ್ರುಗಳು | 2 – 00 |
| ✤ 'ಸನ್ಮಾರ್ಗ'ದ ದುರ್ಬೋಧನೆ | 1 – 00 |
| ✤ ಕೊಲ್ಲಿ ಬಿಕ್ಕಟ್ಟು – ಇಸ್ಲಾಮಿಕ ಪರಿಹಾರ | 1 – 00 |

ಬರೆಯಿರಿ: **AHMADIYYA MUSLIM MISSION**
10-23-1008 Ansari Road, MANGALORE - 575 001.

# ಲಂಡನಿನಲ್ಲಿ 26ನೇ ಅಹ್ಮದಿಯಾ ವಾರ್ಷಿಕ ಸಮ್ಮೇಳನ

ಇಂಗ್ಲೇಂಡಿನ ಅಹ್ಮದಿಯಾ 26ನೇ ವಾರ್ಷಿಕ ಸಮ್ಮೇಳನವು ಕಳೆದ ಜುಲಾಯಿ 26ರಿಂದ 28ರ ವರೆಗೆ ಟಿಲ್‌ಫೋರ್ಡ್ (ಇಸ್ಲಾಮಾಬಾದ್)ನಲ್ಲಿ ಜರಗಿತು.

46 ರಾಷ್ಟ್ರಗಳಿಂದ ಸುಮಾರು 9 ಸಾವಿರ ಮಂದಿ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಸಮ್ಮೇಳನದ ಅಂಗವಾಗಿ ಅಂತಾರಾಷ್ಟ್ರೀಯ ಪ್ರಚರಣ ವಿಚಾರಗೋಷ್ಠಿಯನ್ನು ಸಹ ಏರ್ಪಡಿಸಲಾಗಿತ್ತು.

ಸಮ್ಮೇಳವನ್ನು ಉದ್ಘಾಟಿಸುತ್ತಾ ಖಲೀಫ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರು ಖಿಲಾಫತ್‌ನ ಪ್ರಾಧಾನ್ಯ ಮತ್ತು ಅನುಸರಣೆಯ ಕುರಿತು ವಿವರಿಸಿ ಆ ಬಗ್ಗೆ ಅಹ್ಮದೀಯರ ಕರ್ತವ್ಯವನ್ನು ಬೋಧಿಸಿದರು.

ದ್ವಿತೀಯ ದಿನ ನಡೆದ ಮಹಿಳಾ ಸಮ್ಮೇಳನದಲ್ಲಿ ಹಝ್ರತ್ ಖಲೀಫರು, ಮಹಿಳೆಯರು ಉತ್ತಮ ಸ್ವಭಾವಗಳನ್ನು ಬೆಳೆಸಬೇಕೆಂದೂ ತಮ್ಮ ಮಕ್ಕಳಿಗೆ ಉತ್ತಮ ನೈತಿಕ-ಧಾರ್ಮಿಕ ಶಿಕ್ಷಣಗಳನ್ನು ನೀಡಿ ಅವರನ್ನು ಸತ್ಪ್ರಜೆಗಳನ್ನಾಗಿ ಪರಿವರ್ತಿಸಬೇಕೆಂದೂ ಉಪದೇಶಿಸಿದರು.

27ರಂದು ಜರಗಿದ ಸಮಾವೇಶದಲ್ಲಿ, ಪ್ರಸಕ್ತ ವರ್ಷದಲ್ಲಿ ಅರ್ಧ ಲಕ್ಷ ಜನರು ಅಹ್ಮದಿಯಾ ಜಮಾಅತಿಗೆ ಸೇರಿರುವರೆಂದೂ ಜಗತ್ತಿನ ಹಲವೆಡೆಗಳಲ್ಲಿ ಹೊಸದಾಗಿ ಅಹ್ಮದಿಯಾ ಚಟುವಟಿಕೆಗಳು ಆರಂಭಗೊಂಡಿವೆಯೆಂದೂ ಹೇಳಿದರು.

ಚರಿತ್ರೆಯಲ್ಲಿ ಪ್ರಥಮ ಬಾರಿಯಾಗಿ ರಶ್ಯಾದ ನಿಯೋಗವೊಂದು ಸಮ್ಮೇಳನದಲ್ಲಿ ಭಾಗವಹಿಸಿತು. ರಶ್ಯಾದ ಬುಖಾರ, ಲಿಥುವೇನಿಯಾ ಎಂಬೀ ಕಡೆಗಳಿಂದ ಆರೇಳು ಮಹಿಳೆಯರ ಸಹಿತ 20 ಮಂದಿ ಈ ಸಮ್ಮೇಳನದಲ್ಲಿ ಪಾಲ್ಗೊಂಡರು. ಈ ಪೈಕಿ ರಶ್ಯಾದ ಓರ್ವ ಸೆಂಟ್ರಲ್ ಪಾರ್ಲಿಮೆಂಟ್ ಮೆಂಬರ್ ತನ್ನ ಭಾಷಣದಲ್ಲಿ, ತಮ್ಮ ರಾಜ್ಯಗಳಿಗೆ ಖಲೀಫರು ಭೇಟಿ ಕೊಡಬೇಕಾಗಿ ಕೋರಿಕೊಂಡರು.

ಬರ್ಲಿನ್ ಗೋಡೆ ಕುಸಿದ ನಂತರ, ಅಲ್ಲಿ ಅಹ್ಮದಿಯಾ ಪ್ರಚಾರಕ್ಕೆ ತೆರೆಯಲ್ಪಟ್ಟ ಮಾರ್ಗಗಳನ್ನು ವಿವರಿಸಿದ ಖಲೀಫರು, ಪವಿತ್ರ ಖುರ್‌ಆನಿನ ಭಾಷಾಂತರದ ಲಕ್ಷಗಟ್ಟಲೆ ಪ್ರತಿಗಳಿಗೆ ಅಲ್ಲಿಂದ ಬಂದ ಬೇಡಿಕೆಯನ್ನು ಪೂರೈಸಿದ ಬಗ್ಗೆ ಹೇಳಿದರು. ರಶ್ಯನ್ ಭಾಷೆಯಲ್ಲಿ ಕೆಲವು ವರ್ಷಗಳ ಮೊದಲೇ ಖುರ್‌ಆನ್ ಅನುವಾದ ಸಿದ್ಧಗೊಂಡಿದೆಯೆಂದು ಸಹ ಅವರು ನುಡಿದರು.

ಮೆಕ್ಸಿಕೋದಿಂದಲೂ ಪ್ರಥಮವಾಗಿ ಕೆಲವು ಸದಸ್ಯರು ಈ ಸಮ್ಮೇಳನದಲ್ಲಿ ಭಾಗವಹಿಸಿದರು.

## ತಿದ್ದುಪಡಿ

"ಯುಗರಶ್ಮಿ"ಯ ಅಹ್ಮದಿಯಾ ಶತಾಬ್ದ ವಿಶೇಷ ಸಂಚಿಕೆಯ ಪುಟ 12(i)ರ 9ನೇ ಪಂಕ್ತಿಯಲ್ಲಿ ಲುಧಿಯಾನ ಎಂಬುದರ ಬದಲು ಕೆಲವು ಪ್ರತಿಗಳಲ್ಲಿ ಹೋಶಿಯಾರ್‌ಪುರ್ ಎಂದು ತಪ್ಪಾಗಿ ಅಚ್ಚಾಗಿದೆ. ಅದನ್ನು ತಿದ್ದಿ ಓದಬೇಕಾಗಿ ಕೋರಲಾಗಿದೆ.

— ಸಂಪಾದಕ

## ನಿಧನ ವಾರ್ತೆಗಳು

# ಜ| ಮಿರ್ಝಾ ನಈಂ ಅಹ್ಮದ್ ಸಾಹೇಬ್

ಅಹ್ಮದಿಯಾ ಜಮಾಅತಿನ ಭಾರತದ ಸರ್ವೋನ್ನತ ನಿರ್ದೇಶಕ ಹಝ್ರತ್ ಮಿರ್ಝಾ ವಸೀಂ ಅಹ್ಮದ್ ಸಾಹೇಬರ ಕಿರಿಯ ಸಹೋದರ ಸಾಹಿಬ್‌ಝಾದ ಮಿರ್ಝಾ ನಈಂ ಅಹ್ಮದ್ ಸಾಹೇಬರು ಕಳೆದ ಆಗಸ್ಟ್ 4 ರಂದು ರಾತ್ರಿ 11½ ಗಂಟೆಗೆ ರಬ್ವದಲ್ಲಿ ನಿಧನರಾದರು. (ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್)

ಅವರಿಗೆ 59 ವರ್ಷ ವಯಸ್ಸಾಗಿತ್ತು. ಅವರು ವಾಖಿಫ್ ಝಿಂದಗಿ (ಧರ್ಮ ಸೇವೆಗಾಗಿ ಜೀವನವನ್ನು ಅರ್ಪಿಸಿದವರು) ಆಗಿದ್ದರು. ತಹ್ರೀಕ್ ಜದೀದ್‌ನ ವಿವಿಧ ವಿಭಾಗಗಳಲ್ಲಿ ಅವರು ಸೇವೆ ಸಲ್ಲಿಸಿದ್ದಾರೆ. ಪತ್ನಿ ಅಮತುಲ್ ಮೂಅ್‌ಮಿನ್ (ಹಝ್ರತ್ ಮಿರ್ಝಾ ಶರೀಫ್ ಅಹ್ಮದ್ ಸಾಹೇಬರ ಮೊಮ್ಮಗಳು) ಮತ್ತು ಮೂವರು ಪುತ್ರರನ್ನು ಅವರು ಅಗಲಿದ್ದಾರೆ.

ಅಲ್ಲಾಹನು ದಿವಂಗತರಿಗೆ ಮಗ್‌ಫಿರತನ್ನೂ ಪರಲೋಕದಲ್ಲಿ ಉನ್ನತ ಸ್ಥಾನವನ್ನೂ ದಯಪಾಲಿಸಲಿ. ಆಮೀನ್.

# ಜ| ಟಿ. ಎ. ಅಬ್ದುಲ್ ಖಾದಿರ್ ಸಾಹೇಬ್



ಮೂಲತಃ ನೀಲೇಶ್ವರದವರಾದ ಮೊಗ್ರಾಲ್ ನಿವಾಸಿ ಜನಾಬ್ ಟಿ. ಎ. ಅಬ್ದುಲ್ ಖಾದಿರ್ ಸಾಹೇಬ್ ಕಳೆದ ಅಕ್ಟೋಬರ್ 12ರಂದು ನಿಧನ ರಾದರು. (ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್)

82 ವರ್ಷ ಪ್ರಾಯವಾಗಿದ್ದ ಅವರು ಸುಮಾರು 40 ವರ್ಷಗಳ ಮೊದಲು ಅಹ್ಮದಿಯಾ ಜಮಾಅತಿಗೆ ಸೇರಿದ್ದರು. ಅಹ್ಮದಿಯತ್ ಸ್ವೀಕರಿಸಿದ ಕಾರಣದಿಂದ ಅವರು ಹಲವಿಧ ಕಷ್ಟ ನಷ್ಟಗಳನ್ನು ಅನುಭವಿಸಿದ್ದಾರೆ. ಅವರು ಅನೇಕ ವರ್ಷಗಳ ಕಾಲ "ವಕ್ಫ್ ಜದೀದ್" ಸೆಕ್ರಟರಿ ಆಗಿಯೂ "ಝಈಂ ಅನ್ಸಾರುಲ್ಲಾ" ಆಗಿಯೂ ಸೇವೆ ಸಲ್ಲಿಸಿದ್ದಾರೆ. ಪುಸ್ತಕ ಪ್ರೇಮಿಯಾದ ಅವರು ಅನೇಕ ಪುಸ್ತಕಗಳ ಸಂಗ್ರಹವನ್ನಿಟ್ಟುಕೊಂಡಿದ್ದಾರೆ. ಅವರು "ಯುಗರಶ್ಮಿ"ಯ ಹಿತಕಾಂಕ್ಷಿಯೂ ಆಗಿದ್ದರು.

ಜ| ಅಬ್ದುಲ್ ಖಾದಿರ್ ಸಾಹೇಬರು ಮೊಗ್ರಾಲ್ ಜಮಾಅತಿನ ಪ್ರಥಮ ತಲೆಮಾರಿನ ಅಹ್ಮದಿಯರಲ್ಲಿ ಓರ್ವರಾಗಿದ್ದಾರೆ. ಪತ್ನಿಯನ್ನೂ ಪುತ್ರನನ್ನೂ ಇಬ್ಬರು ಪುತ್ರಿಯರನ್ನೂ ಅವರು ಅಗಲಿದ್ದಾರೆ. ಮೊಗ್ರಾಲ್ ಜಮಾಅತಿನ "ತಹ್ರೀಕ್ ಜದೀದ್" ಸೆಕ್ರಟರಿ ಟಿ. ಎ. ಮುಬಾರಕ್ ಸಾಹೇಬರು ಅವರ ಹಿರಿಯ ಪುತ್ರ. ಚಂಡೀಗಢದ ವಿಜಯಾ ಬೇಂಕ್ ಮೇನೇಜರ್ ಎಂ. ಅಬ್ದುಲ್ ಲತೀಫ್ ಸಾಹೇಬರ ಪತ್ನಿ ಹಲೀಮಾ ಮತ್ತು ಪಯಂಗಾಡಿಯ ಮದಾರ್ ಔಷಧಾಲಯದ ಹಮೀದ್ ಸಾಹೇಬರ ಪತ್ನಿ ನಫೀಸಾ ಇವರು ಅವರ ಪುತ್ರಿಯರು.

ದಿವಂಗತರಿಗೆ ಅಲ್ಲಾಹನು ಮಗ್‌ಫಿರತನ್ನು ದಯಪಾಲಿಸಲಿ. ಆಮೀನ್.

# ಜ| ಜಿ. ಸುಲೈಮಾನ್ ಸಾಹೇಬ್

ಮೂಲತಃ ಕಲ್ಲಡ್ಕದವರಾದ, ವಿಟ್ಲ ನಿವಾಸಿ ಜನಾಬ್ ಜಿ. ಸುಲೈಮಾನ್ ಸಾಹೇಬರು ಕಳೆದ ಆಗಸ್ಟ್ 10ರಂದು ಹೃದಯಾಘಾತದಿಂದ ನಿಧನರಾದರು. (ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್).

ಸುಮಾರು 20 ವರ್ಷಗಳ ಹಿಂದೆ ವಿರಾಜಪೇಟೆಯ ಎಂ. ಇ. ಮುಹ್ಯುದ್ದೀನ್ ಸಾಹೇಬರ ಫೋಟೋ ಸ್ಟುಡಿಯೋದಲ್ಲಿ ತರಬೇತಿ ಪಡೆಯುತ್ತಿದ್ದ ಜ| ಸುಲೈಮಾನ್ ಸಾಹೇಬರು ಅಹ್ಮದಿಯತ್‌ನ ಬಗ್ಗೆ ಕಲಿಯುತ್ತಿದ್ದರು. 1973ರಲ್ಲಿ ಮಡಿಕೇರಿಯಲ್ಲಿ ನಡೆದ ಕೇರಳ - ಕರ್ನಾಟಕ ಅಂತಾರ್‍ರಾಜ್ಯ ಸಮ್ಮೇಳನದ ಬಳಿಕ ಅಹ್ಮದಿಯಾ ವಿರೋಧಿಗಳಾದ ಮುಸ್ಲಿಂ ಮತ ಪಂಡಿತರು ಕೆಲವು ದಿನಗಳ ಕಾಲ ಮಡಿಕೇರಿಯಲ್ಲಿ ಅಹ್ಮದಿಯತ್‌ನ ವಿರುದ್ಧ ಅವಾಚ್ಯ ಮಾತುಗಳಿಂದ ಭಾಷಣ ಮಾಡುತ್ತಿದ್ದರು. ಅವರ ಅಸಂಬದ್ಧ ದುರಾರೋಪಗಳನ್ನು ಕೇಳಿದ ಸುಲೈಮಾನ್ ಸಾಹೇಬರಿಗೆ ಅಹ್ಮದಿಯತೇ ನಿಜವಾದ ಇಸ್ಲಾಂ ಎಂದು ಮನವರಿಕೆಯಾಗಿ, ತಾನು ಅಹ್ಮದಿಯತ್‌ಗೆ ಸೇರಿರುವುದಾಗಿ ಕರಪತ್ರಗಳ ಮೂಲಕ ಘೋಷಿಸಿದರು.

ಅವರು ಅಹ್ಮದಿಯಾ ಚಟುವಟಿಕೆಗಳಲ್ಲಿ ಆಸಕ್ತಿಯಿಂದ ಭಾಗವಹಿಸುತ್ತಿದ್ದರಲ್ಲದೆ "ಯುಗರಶ್ಮಿ"ಯ ಹಿತೈಷಿಯೂ ಆಗಿದ್ದರು. ಉತ್ತಮ ಛಾಯಾಗ್ರಾಹಕರೂ ವಿಟ್ಲದ ಸ್ಟುಡಿಯೋ 'ಫೋಟೋ ಸೆಂಟರ್'ನ ಮಾಲಕರೂ ಆಗಿದ್ದ ಸುಲೈಮಾನ್ ಸಾಹೇಬರು ಎಲ್ಲ ಮತಸ್ಥರೊಂದಿಗೆ ಬಹಳ ಸೌಹಾರ್ದದಿಂದಿದ್ದವರು.

ಅವರು ತಾಯಿ, ಪತ್ನಿ, ನಾಲ್ಕು ಗಂಡು ಐದು ಹೆಣ್ಣು ಮಕ್ಕಳು ಮತ್ತು ಅಪಾರ ಬಂಧು ಮಿತ್ರಾದಿಗಳನ್ನು ಅಗಲಿದ್ದಾರೆ. ಅವರಿಗೆ 42 ವರ್ಷ ವಯಸ್ಸಾಗಿತ್ತು. ದಿವಂಗತರಿಗೆ ಅಲ್ಲಾಹನು ಮಗ್‌ಫಿರತನ್ನು ಕರುಣಿಸಲಿ, ಆಮೀನ್.

## ಲೇಖನ ಕೃತಿಚೌರ್ಯ

ಪ್ರಿಯರೇ,

ಇದೇ ಕಳೆದ 15-4-1991ರ "ಮುಂಗಾರು"ವಿನಲ್ಲಿ "ಮೆಸ್ಕೋ ವಾರ್ತೆ" ಸಂಪಾದಕರಾದ ಮೌಲವಿ ಅಬುಲ್ ಹಸನ್ ಬಜ್ಪೆ ಎಂಬವರ ಹೆಸರಿನಲ್ಲಿ ಪ್ರಕಟವಾದ "ಇಸ್ಲಾಮಿನಲ್ಲಿ ಈದ್ ಆಚರಣೆಯ ಉದ್ದೇಶ ಮತ್ತು ಮಹತ್ವ" ಎಂಬ ಲೇಖನ ನನ್ನ ಗಮನವನ್ನು ಹಠಾತ್ತಾಗಿ ಆಕರ್ಷಿಸಿತು. ಆ ಲೇಖನವನ್ನು ಓದಲು ತೊಡಗಿದಾಗ ಇದು ನಾನೇ ಬರೆದ ಲೇಖನವಲ್ಲವೇ ಎಂದು ಭಾಸವಾಗತೊಡಗಿತು. ಖಚಿತಪಡಿಸಲಿಕ್ಕೋಸ್ಕರ "ಯುಗರಶ್ಮಿ"ಯ ಹಳೆಯ ಸಂಚಿಕೆಗಳ ಪುಟಗಳನ್ನು ಮಗುಚಿ ಹಾಕಿದಾಗ 1977 ಡಿಸೆಂಬರ್ ತಿಂಗಳ "ಯುಗರಶ್ಮಿ" ಸಂಚಿಕೆಯಲ್ಲಿ ಈ ಲೇಖನವನ್ನು ಕಂಡು ಪರಮಾಶ್ಚರ್ಯವಾಯಿತು.

ಮಂಗಳೂರು.

— ಮುಹಮ್ಮದ್ ಯೂಸುಫ್
ಸಂಪಾದಕ "ಯುಗರಶ್ಮಿ"

ಲೇಖನದ ಹಸ್ತಪ್ರತಿಯ ಕೊನೆಯಲ್ಲಿ ಸಾಧಾರ ಎಂದಿದ್ದುದು ಪ್ರಕಟನೆಯ ವೇಳೆ ಬಿಟ್ಟುಹೋಗಿತ್ತು. ಆದರೆ ಲೇಖನವು ಮೂಲ ಲೇಖಕರು ಹೇಳಿದಂತೆ ಅಕ್ಷರಶಃ ನಕಲಾಗಿದ್ದು ಅದಕ್ಕೆ ಸಾಧಾರ ಎಂಬುದು ಸಮರ್ಥನೆ ಆಗಲಾರದು.

— ಸಂಪಾದಕ

("ಮುಂಗಾರು"—ಎಪ್ರಿಲ್ 28, 1991)

# ಸಂಪಾದಕರಿಗೆ ಪತ್ರ

ಪ್ರಿಯ ಮುಹಮ್ಮದ್ ಯೂಸುಫ್‌ರವರೆ,

ಅಸ್ಸಲಾಮು ಅಲೈಕುಂ ವ ರಹ್ಮತುಲ್ಲಾಹಿ ವ ಬರಕಾತುಹು.

ಅನೇಕ ಎಡರು ತೊಡರುಗಳಿದ್ದರೂ ನೀವು "ಯುಗರಶ್ಮಿ"ಯ ಅಹ್ಮದಿಯಾ ಶತಾಬ್ದ ವಿಶೇಷ ಸಂಚಿಕೆಯನ್ನು ಪ್ರಕಟಪಡಿಸಿದ್ದು ತಿಳಿದು ಹರ್ಷವಾಯಿತು. ನಿಮ್ಮ ಪತ್ರಿಕೆ ಕಳೆದ 15 ವರ್ಷಗಳಿಂದ ನೈಜ ಇಸ್ಲಾಮಿಕ ಅಧ್ಯಾಪನೆಗಳನ್ನು ಅದರ ಓದುಗರಿಗೆ ಅರುಹಿ ಇಸ್ಲಾಮಿನ ಬಗ್ಗೆ ಇರುವ ಅನೇಕ ತಪ್ಪು ಕಲ್ಪನೆಗಳನ್ನು ನೀಗಿಸಲು ಪ್ರಯತ್ನಪಟ್ಟಿದೆ ಎಂದು ತಿಳಿದು ಸಹ ಸಂತಸವಾಯಿತು.

ಅಲ್ಲಾಹನು ಈ ಪತ್ರಿಕೆಗೆ ಇನ್ನೂ ಯಶಸ್ಸನ್ನು ನೀಡಲಿ, ಅದರ ಪ್ರಚಾರ ಹೆಚ್ಚಾಗಲಿ, ಹಾಗೂ ಇನ್ನೂ ಹೆಚ್ಚು ಸತ್ಯಾನ್ವೇಷಕರು ಅದರಿಂದ ಪ್ರಯೋಜನ ಪಡೆಯಲಿ ಎಂದು ಪ್ರಾರ್ಥಿಸುತ್ತೇನೆ.

— ಮಿರ್ಝಾ ತಾಹಿರ್ ಅಹ್ಮದ್
ಅಹ್ಮದಿಯಾ ಜಮಾಅತಿನ ಚತುರ್ಥ ಖಲೀಫ

ಪ್ರಿಯ ಸಹೋದರ,

ಅಸ್ಸಲಾಮು ಅಲೈಕುಂ.

"ಯುಗರಶ್ಮಿ"ಯ ಅಹ್ಮದಿಯಾ ಶತಾಬ್ದ ಸಂಚಿಕೆ ಕೈಸೇರಿತು. ಅಲ್‌ಹಮ್ದುಲಿಲ್ಲಾಹ್. ನಿಮ್ಮ ಪ್ರಯತ್ನ ನಿಸ್ಸಂದೇಹವಾಗಿಯೂ ಹೃದಯಾನಂದಕರವಾಗಿದೆ. ನಿಮ್ಮ ಪ್ರಾಮಾಣಿಕ ಹಾಗೂ ಉದಾತ್ತ ಧ್ಯೇಯಗಳಿಂದ ಕೂಡಿದ ಶ್ರಮಕ್ಕೆ ಅಲ್ಲಾಹನು ಯಶಸ್ಸನ್ನು ನೀಡಲಿ ಮತ್ತು ಇನ್ನೂ ಹೆಚ್ಚಿನ ಸಾಮರ್ಥ್ಯ ಹಾಗೂ ಉತ್ಸಾಹದಿಂದ ಜಮಾಅತಿನ ಸೇವೆಗೈಯಲು ನಿಮಗೆ ಶಕ್ತಿ ಕೊಡಲಿ.

ನಿಮ್ಮ ದಾರಿಯಲ್ಲಿ ಬರುವ ಎಲ್ಲ ಅಡೆತಡೆಗಳನ್ನು ನೀವು ಗೆಲ್ಲುವಂತಾಗಿ ಅಹ್ಮದಿಯತಿನ ಸಂದೇಶವನ್ನು ಎಲ್ಲೆಡೆ ತಲಪಿಸುವಂತಾಗಿ ಅಲ್ಲಾಹನ ಸಂತೃಪ್ತಿಯನ್ನು ಪಡೆಯುವಂತಾಗಲು ಅಲ್ಲಾಹನು ನಿಮಗೆ ನೆರವಾಗಲಿ, ಆಮೀನ್.

— ಮಿರ್ಝಾ ವಸೀಂ ಅಹ್ಮದ್
ಅಹ್ಮದಿಯಾ ಜಮಾಅತಿನ ಭಾರತದ ಸರ್ವೋನ್ನತ ನಿರ್ದೇಶಕ.

# ಓದುಗರ ಓಲೆ

ಪ್ರಿಯ ಮುಂಹಮ್ಮದ್ ಯೂಸುಫ್‌ರವರೆ,

ನಾನು ಯಾವಾಗಲೂ ಆಸಕ್ತಿಯಿಂದ ನಿಮ್ಮ ಪತ್ರಿಕೆಯನ್ನು ಗಮನಿಸುತ್ತಿದ್ದೇನೆ. ಸಂದರ್ಭ ದೊರೆತಾಗಲೆಲ್ಲ ನನ್ನ ಮಿತ್ರರಿಗೂ ವಿದ್ಯಾರ್ಥಿಗಳಿಗೂ ಆ ಬಗ್ಗೆ ಹೇಳುತ್ತಿದ್ದೇನೆ.

ಮೈಸೂರು. — ಪ್ರೊಫೆಸರ್ ಕೆ. ಎಸ್. ರಾಮಕೃಷ್ಣ ರಾವ್, M. A.
Professor of Philosophy (Emeritus)

ಪ್ರಿಯ ಸಂಪಾದಕರೆ,

ನಿಮ್ಮ ಪತ್ರಿಕೆ ನನಗೆ ತುಂಬಾ ತೃಪ್ತಿ ನೀಡಿತು. ಇಸ್ಲಾಂ ಹಾಗೂ ಇನ್ನಿತರ ವಿಷಯಗಳ ಬಗ್ಗೆ ಬೇರೆ ಪತ್ರಿಕೆಗಳಿಗಿಂತ ನಿಮ್ಮ ಪತ್ರಿಕೆ ನನಗೆ ತುಂಬಾ ಉಪಯುಕ್ತವಾದ ಮಾಹಿತಿಗಳನ್ನು ಒದಗಿಸಿದೆ.

ತಿಪಟೂರು. — ಎಂ. ಸಾಹಿರ ಬಾನು, M. Ed.

ನಾನು "ಯುಗರಶ್ಮಿ" ನೋಡಿ ಖುಷಿಯಾಗಿ ಆನಂದ ಭಾಷ್ಪ ಸುರಿಯಿತು.

"ಯುಗರಶ್ಮಿ"ಯು ಅಹ್ಮದಿಯಾ ಶತಾಬ್ದದ ಸವಿನೆನಪುಗಳನ್ನು ಹೊತ್ತು ತಂದಿದ್ದು ಮನಸ್ಸು ಮುದಗೊಂಡಿತು. ನನ್ನ ಹಿಂದೂ ಗೆಳೆಯರು ಅದನ್ನು ತುಂಬಾ ಮೆಚ್ಚಿಕೊಂಡಿದ್ದಾರೆ. "ಸರ್ವಧರ್ಮ ಮೈತ್ರಿ" ಲೇಖನವು ಆಕರ್ಷಣೀಯವಾಗಿದೆ.

ಶತಾಬ್ದ ಸಂಚಿಕೆ ಹೊರಡಿಸುವುದರಲ್ಲಿ ನೀವು ಪಟ್ಟ ಶ್ರಮ ತುಂಬಾ ಸಾರ್ಥಕವಾಗಿದೆ. ಅಲ್ಲಾಹನು ನಿಮಗೆ ಇನ್ನಷ್ಟು ನವಚೈತನ್ಯ ನೀಡಲಿ ಎಂದು ದುಆ ಮಾಡುತ್ತೇನೆ.

ಗಾಂಧಿಗವಾಡ. — ಝಮೀರ್ ಅಹ್ಮದ್

"ಯುಗರಶ್ಮಿ"ಯ ಅಹ್ಮದಿಯಾ ಶತಾಬ್ದ ವಿಶೇಷ ಸಂಚಿಕೆಯನ್ನು ಓದಿ ಮನಸ್ಸಿಗೆ ತುಂಬಾ ಸಂತೋಷವಾಯಿತು. ಅದರಲ್ಲಿ ಉಪಯುಕ್ತವಾದ ಹಲವು ಲೇಖನಗಳೂ ಸುಂದರವಾದ ಅನೇಕ ಫೋಟೋಗಳು ಇದ್ದವು.

ಕರ್ನಾಟಕದ ಎಲ್ಲೆಡೆ ನಿಮ್ಮ ಪತ್ರಿಕೆ ಹರಡಲಿ ಎಂದು ಪ್ರಾರ್ಥಿಸುತ್ತೇನೆ.

ಖಾದಿಯಾನ್, — ನಈಂ ಅಹ್ಮದ್ ಶರೀಫ್

ತಾವು ಪ್ರಕಟಿಸುತ್ತಿರುವ ತ್ರೈಮಾಸಿಕ ಪತ್ರಿಕೆಯಾದ "ಯುಗರಶ್ಮಿ"ಯನ್ನು ನಾನು ತಪ್ಪದೇ ಸಾರ್ವಜನಿಕ ಗ್ರಂಥಾಲಯದಲ್ಲಿ ಓದುತ್ತಿದ್ದೇನೆ. ಇದರಲ್ಲಿ ಇಸ್ಲಾಂ ಧರ್ಮಕ್ಕಾಗಿ ಶ್ರಮಿಸಿದ ಮಹಾ ಪುರುಷರ ಜೀವನ ಚರಿತ್ರೆ ಹಾಗೂ ಇಸ್ಲಾಂ ಧರ್ಮ ಹುಟ್ಟಿ ಬೆಳೆದು ಬಂದ ಬಗೆಯನ್ನು ಸರಳವಾದ ಶೈಲಿಯಲ್ಲಿ ಚಿತ್ರಿಸಲಾಗಿದೆ. ಇದನ್ನು ಪ್ರತಿಯೊಂದು ಧರ್ಮದವರೂ ಓದಿ ಅರ್ಥೈಸಿಕೊಳ್ಳುವ ರೀತಿಯಲ್ಲಿ ರಚಿಸಲಾಗಿದೆ. ಇದೇ ರೀತಿ ಪತ್ರಿಕೆಯು ಮರೆಯಾಗದೆ ಮೆರೆಯಲಿ ಎಂದು ಹಾರೈಸುತ್ತಿದ್ದೇನೆ.

ಚಿಂತಾಮಣಿ. — ಕೆ. ಎ. ನವೀದ್ ಅಹ್ಮದ್, B. A.

ದೇವಾಸ್ತಿತ್ವವನ್ನು ರುಜುಗೊಳಿಸುವ, ಮತಗಳ ಆವಶ್ಯಕತೆಯನ್ನು ಸಾರುವ, ಆಧ್ಯಾತ್ಮಿಕ ಜ್ಞಾನವನ್ನು ಜನರ ಹೃದಯಗಳಲ್ಲಿ ಮೂಡಿಸುವ ಒಂದು ಉತ್ಕೃಷ್ಟ ತ್ರೈಮಾಸ ಪತ್ರಿಕೆ -

# ಯುಗರಶ್ಮಿ

ಯಥಾರ್ಥ ಇಸ್ಲಾಂ ಮತ್ತು ಅಹ್ಮದಿಯಾ ಸಂಘಟನೆಯ ಸೇವೆಗಾಗಿ ಮೀಸಲಾಗಿರಿಸಿದ "ಯುಗರಶ್ಮಿ" ತ್ರೈಮಾಸಿಕವು ವಿವಿಧ ಮತಗಳ ತಾರತಮ್ಯ ಪಠನಾಸಕ್ತರಿಗೆ ಒಂದು ಉತ್ತಮ ಪತ್ರಿಕೆಯಾಗಿದೆ.

ದೇವಾಸ್ತಿತ್ವ, ಇತರ ಮತ ಮತ್ತು ಮತಾಚಾರ್ಯರ ಕುರಿತು ಇಸ್ಲಾಮಿನ ವೀಕ್ಷಣೆ, ಕೋಮು ಸೌಹಾರ್ದದ ಮಾರ್ಗಗಳು, ಇಸ್ಲಾಮಿನ ತತ್ವೋಪದೇಶಗಳು, ಮಾನವ ಕುಲದ ಏಳಿಗೆಗೆ ಇಸ್ಲಾಮಿನ ಕೊಡುಗೆ, ಇಂದಿನ ಆಧ್ಯಾತ್ಮಿಕ ಅಧಃಪತನ ಮತ್ತು ಪುನರುಜ್ಜೀವನ ಮಾರ್ಗಗಳು ಮೊದಲಾದ ವಿಷಯಗಳ ಕುರಿತು ಲೇಖನ ಪರಾಮರ್ಶೆಗಳನ್ನು ಈ ಪತ್ರಿಕೆಯ ಪ್ರತಿ ಸಂಚಿಕೆಯಲ್ಲೂ ಕಾಣಬಹುದು.

ಬಿಡಿಪ್ರತಿ : ರೂ. 2-00 ವಾರ್ಷಿಕ ಚಂದಾ : ರೂ. 8-00

ಅಂಚೆ ಮೂಲಕ : ರೂ. 10-00

ವ್ಯವಹರಿಸಿರಿ :

The Editor,
**YUGARASHMI** Kannada Quarterly,
10-23-1008, Ansari Road,
Bunder, Mangalore-575001.

## ಮಕ್ಕಳಿಗೆ 2500 ಹೆಸರುಗಳು

ಮಕ್ಕಳಿಗೆ ಹೆಸರಿಡಲಿಕ್ಕಾಗಿ ಪ್ರತಿಯೊಂದು ಮುಸ್ಲಿಂ ಮನೆಗಳಲ್ಲೂ ಇರಲೇ ಬೇಕಾದ ಪುಸ್ತಕ. ಕನ್ನಡ ಮತ್ತು ಇಂಗ್ಲಿಷ್ ಭಾಷೆಯ ಉಚ್ಚಾರದ ಜೊತೆಗೆ ಹೆಸರಿನ ಕನ್ನಡಾರ್ಥವೂ ನಿಮಗೆ ಸಿಗುತ್ತದೆ,

ಇಂದೇ ಎಂ. ಓ. ಮಾಡಿರಿ. ಪುಸ್ತಕದ ಬೆಲೆ ರೂ. 20/- ಪುಟಗಳು: 100

ವಿಳಾಸ: ಜ್ಯೂಬಿಲಿ ಪ್ರಿಂಟಿಂಗ್ ಪ್ರೆಸ್
ಅನ್ಸಾರಿ ರೋಡ್, ಬಂದರ, ಮಂಗಳೂರು 575 001

Regd. with the Registrar of Newspapers for India Regd. No. R. N. 27354/75
YUGARASHMI Kannada Quarterly, October 1991/Ikha 1370

# ಸ್ಟಾಂಡರ್ಡ್ ಟೈಲರಿ

ಕಡೂರು, ಚಿಕ್ಕಮಗಳೂರು ಜಿಲ್ಲೆ

## ರಾಜಾ ಮಾರ್ಕಿನ ಹಂಚುಗಳು

ಚಾವಣಿ ಹಂಚು, ಮೂಲೆ ಹಂಚು, ಗೋಡೆ ಹಂಚು, ಹಾಸು ಹಂಚು, ಮೆತ್ತಡ ಹಂಚು, ಅಲಂಕಾರಿಕ ಹಂಚು, ಮೊದಲಾದ ಎಲ್ಲ ತರದ ಆವೆಮಣ್ಣಿನ ಉತ್ಪನ್ನಗಳು ದೊರೆಯುತ್ತವೆ.

# STANDARD TILERY

KADUR

**CHICKMAGALUR DISTRICT**

## RAJA MARK

*Roofing Tiles, Ridges, Wall Tiles, Span Tiles, Floorings, Decorative Tiles, Ceilings, Etc., Etc.*

## ALL CLAY PRODUCTS AVAILABLE

Edited and Published by Muhammad Yusuf on behalf of Jamath Ahmadiyya at 10-23-1008, Ansari Road, Bunder, Mangalore-575 001. Phone: 32039. Printed at Jubilee Printing Press, Ansari Road, Bunder, Mangalore-575 001.